# ಅಧ್ಯಾಯ-೦೨
# ಕಾದಂಬರಿಗಳ ವಸ್ತು ಚಿತ್ರಣ

ಕೃತಿ ರಚನೆಯಲ್ಲಿ ವಸ್ತುವಿನ ಪಾತ್ರ ಮಹತ್ವವಾದುದು. ಸಮಾಜದ ಅನಿಷ್ಟಗಳನ್ನು ಹೋಗಲಾಡಿಸಲು ಕೃತಿಗಳಲ್ಲಿ ವಸ್ತುವಿನ ಅಗತ್ಯತೆ ಇದೆ. ಕಾದಂಬರಿಯ ಜೀವಾಳವು ವಸ್ತುವೇ ಆಗಿದ್ದು 'ಕಾದಂಬರಿಯ ಆತ್ಮ'ವೆಂದೆ ಹೇಳಲಾಗಿದೆ. ಕಾದಂಬರಿಗಳು ಇಂಥದ್ದೇ ವಸ್ತುವನ್ನು ಹೊಂದಿರುವುದಿಲ್ಲ. ಹೊಂದಿರಬೇಕೆಂಬ ನಿಯಮವೂ ಇಲ್ಲ. ಅದು ಲೇಖಕಿ/ಲೇಖಕರ ವೈಯಕ್ತಿಕ ಆಯ್ಕೆಯಾಗಿರುತ್ತದೆ. ಆದರೆ ವಸ್ತುವಿನ ಮಹತ್ವವನ್ನು ಹೇಳುವಾಗ "ವಸ್ತು ನೈತಿಕ ಬಿಕ್ಕಟ್ಟಾಗಿರಬಹುದು; ಹಳತು ಹೊಸತರ ಘರ್ಷಣೆಯಾಗಿರಬಹುದು; ಕೌಟುಂಬಿಕ ತೊಡಕು ಆಗಿರಬಹುದು; ವೈಯಕ್ತಿಕ ಆಯ್ಕೆಯಾಗಿರಬಹುದು; ವ್ಯಕ್ತಿತ್ವಗಳ ತಿಕ್ಕಾಟವಾಗಿರಬಹುದು. ಅಥವಾ ಕಥೆಯ ಉದ್ದಕ್ಕೂ ಕಾಣಿಸಿಕೊಳ್ಳುವ ವಿಶಿಷ್ಟ ಜೀವನ ದೃಷ್ಟಿಯೂ ಆಗಿರಬಹುದು. ಬದುಕು ಒಂದು ಸವಾಲು, ಅಥವಾ ನಿರರ್ಥಕವಾದುದು ಎಂಬ ಅನಿಸಿಕೆಯೂ ಆಗಿರಬಹುದು. ಒಟ್ಟಿನಲ್ಲಿ ಅದು ಬದುಕಿನ ಯಾವುದೋ ಅಂಶದ ಮೇಲೆ ಬೆಳಕು ಚೆಲ್ಲುತ್ತದೆ. ಈ ಅರ್ಥದಲ್ಲಿ ವಸ್ತು ವಿಶಿಷ್ಟವೂ ಹೌದು, ಸಾಮಾನ್ಯವು ಹೌದು".[೧] ಇವುಗಳನ್ನು ಜೀರ್ಣಿಸಿಕೊಂಡಿರುವ ಕಾದಂಬರಿಕಾರ್ತಿಯರು ತಮ್ಮದೇ ಆದ ವಸ್ತು ವಿಷಯವನ್ನು ಇಟ್ಟುಕೊಂಡು ಕಾದಂಬರಿಗಳನ್ನು ರಚಿಸಿದ್ದಾರೆ. ಕೆಲವು ಕಾದಂಬರಿಗಳಲ್ಲಿ ಒಂದೇ ರೀತಿಯ ವಸ್ತುಗಳಿದ್ದರು ಕಥಾ ರೂಪದಲ್ಲಿ ಭಿನ್ನತೆಗಳಿವೆ. ಇನ್ನುಳಿದವುಗಳಲ್ಲಿ ವಸ್ತುವಿನಲ್ಲೇ ವೈವಿಧ್ಯಗಳಿವೆ. ಸಾಮ್ಯತೆ-ವಿಭಿನ್ನತೆ ನಡುವೆ ಇಲ್ಲಿನ ಕಾದಂಬರಿಗಳ ವಸ್ತು ವಿಷಯದ ಉದ್ದೇಶ ಸ್ತ್ರೀಪರ ಕಾಳಜಿಯನ್ನು ಸಮಾಜಕ್ಕೆ ಸಾರುವ ಪ್ರಯತ್ನವಾಗಿದೆ. ಕೆಲವು ಸ್ತ್ರೀ ಹಿಂಸಾ ರೂಪಗಳು, ಸಮಾಜದಲ್ಲಿ ಆಕೆ ಎದುರಿಸುತ್ತಿರುವ ಸವಾಲುಗಳು, ಪುರುಷನ ಬಂಧಿಯಾಗಿ ಪರಿತಪಿಸುವಿಕೆಯನ್ನು ಮಹಿಳಾ ವಿಮೋಚನಾ ಹಿನ್ನೆಲೆಯಲ್ಲಿ ಚಿತ್ರಿಸಿದ್ದಾರೆ. ಈ ಅಧ್ಯಯನದ ಹಿತದೃಷ್ಟಿಯಿಂದ ಮೊದಲಿಗೆ ಸಾಮಾಜಿಕ ಕಾದಂಬರಿಗಳು ಆನಂತರ ಪೌರಾಣಿಕ ಕಾದಂಬರಿಗಳ ವಸ್ತುಚಿತ್ರಣವನ್ನು ಕಟ್ಟಿಕೊಡಲಾಗಿದೆ.

## ಫಣಿಯಮ್ಮ

ಪುರುಷಪ್ರಧಾನ ಸಮಾಜದಲ್ಲಿ ಶೋಷಿತ ವರ್ಗಕ್ಕೆ ಸೇರಿರುವ ಅಸಹಾಯಕರಲ್ಲಿ ಸ್ತ್ರೀಯರು ಬಹು ಪ್ರಾಚೀನರು. ಕಲಿಯುಗವೆಂದು ಕರೆಯಲ್ಪಡುವ ಮುಂದುವರೆದ ನಾಗರಿಕತೆಯಲ್ಲೂ ಸ್ವತಂತ್ರ ಭಾರತದ ಹೆಣ್ಣು ಶೋಷಣೆಗೊಳಪಟ್ಟಿದ್ದಾಳೆ. ಇನ್ನೂ ಸ್ವಾತಂತ್ರ್ಯ

ಪೂರ್ವದಲ್ಲಿ ಅವಳ ಸ್ಥಿತಿ ಹೇಗಿತ್ತು? ಎಂಬುದನ್ನು ಎಂ.ಕೆ. ಇಂದಿರಾರವರ ಫಣಿಯಮ್ಮ ಕಾದಂಬರಿಯಿಂದ ತಿಳಿಯುತ್ತದೆ. ಲೇಖಕಿ ತಮ್ಮ ಕುಟುಂಬದಲ್ಲಿ ನಡೆದ ಶೋಷಿತ ಹೆಣ್ಣು ಮಗಳ ನೈಜ ಘಟನೆಯೊಂದನ್ನು ಕಾದಂಬರಿ ರೂಪದಲ್ಲಿ ಹೊರತಂದಿದ್ದಾರೆ. ಈ ಕಾದಂಬರಿಯ ನಾಯಕಿ ಫಣಿಯಮ್ಮ ಲೇಖಕಿಯ ಅಜ್ಜನ ತಂಗಿಯಾಗಿದ್ದಾರೆ. ಈ ಕಾದಂಬರಿ ಸತ್ಯಘಟನೆ ಎಂದುಕೊಂಡರೇ ಲೇಖಕಿಯೇ ಹೇಳುವಂತೆ "ಕಾದಂಬರಿ ಎಂದಾಕ್ಷಣ ಇದೆಲ್ಲವೂ ಸ್ವಕಪೋಲ ಕಲ್ಪಿತವೂ ಅಲ್ಲ; ನಡೆದದ್ದೂ ಅಲ್ಲ ಅರ್ಧ ಹಾಗೆ, ಅರ್ಧ ಹೀಗೆ"[೨] ಎಂದು ಹೇಳುವಲ್ಲಿ ಕಥೆಗೆ ಹೊಂದಿಸಲು ಬದಲಾವಣೆಯ ಅನಿವಾರ್ಯತೆ ಇದೆ ಅದಕ್ಕೆ ತಕ್ಕ ಹಾಗೆ ಪಾತ್ರಗಳನ್ನು, ಸಂಗತಿಗಳನ್ನು ಕಟ್ಟಿರುವುದಾಗಿ ಹೇಳಿಕೊಂಡಿದ್ದಾರೆ. ಒಟ್ಟಾರೆ ಎಂ.ಕೆ.ಇಂದಿರಾರವರು ಅಜ್ಜನ ತಂಗಿ ಫಣಿಯಮ್ಮಳ ಕಥೆಯ ಮೂಲಕ ನೂರೈವತ್ತು ವರ್ಷಗಳ ಹಿಂದಿನ ಸಾಮಾಜಿಕ ವ್ಯವಸ್ಥೆಯ ಜೀವನವನ್ನು ಪರಿಚಯಿಸಿದ್ದಾರೆ.

ಫಣಿಯಮ್ಮ ಕಾದಂಬರಿ ಒಂದು ಶತಮಾನದ ಹಿಂದೆ ಮಲೆನಾಡಿನ ಬ್ರಾಹ್ಮಣ ಸಮುದಾಯಗಳಲ್ಲಿದ್ದ ಜೀವನಶೈಲಿ, ಮೌಲ್ಯಗಳು, ಆಚರಿಸುತ್ತಿದ್ದ ಸಂಪ್ರದಾಯ, ಆಚರಣೆ, ನಂಬಿಕೆಗಳನ್ನು ಹೇಳುತ್ತದೆ. ಬಾಲ ವಿಧವೆಯರ ಬದುಕಿನ ಬವಣೆಯನ್ನು ಬಿಚ್ಚಿಡುತ್ತದೆ. ಶೋಷಣೆಯ ಆಗರವಾಗಿದ್ದ ಪುರುಷಪ್ರಧಾನ ಸಮಾಜ ಹೆಣ್ಣನ್ನು ಹೆಜ್ಜೆ ಹೆಜ್ಜೆಗೂ ಹೇಗೆ ಪೀಡಿಸುತ್ತದೆ ಎನ್ನುವ ನೈಜ ಘಟನೆಗಳ ಚಿತ್ರಣವನ್ನು ಒಳಗೊಂಡಿದೆ. ಸಂಪೂರ್ಣ ಕಥೆಯ ಹಂದರ ಬಾಲ ವೈಧವ್ಯದ ಆಚರಣೆಯ ಹಿನ್ನೆಲೆಯಲ್ಲಿ ಸಾಗಿದ್ದು, ಲಿಂಗ ಅಸಮಾನತೆಗಳಿಂದ ಅಂದಿನ ಸಮಾಜ ಹೇಗೆ ನರಳುತ್ತಿತ್ತು ಎನ್ನುವ ಚಿತ್ರಣವನ್ನು ಕಟ್ಟಿಕೊಡುತ್ತದೆ.

ನೂರಹನ್ನೆರಡು ವರ್ಷಕಾಲ ಬದುಕಿದ್ದ ಕಥಾನಾಯಕಿ ಫಣಿಯಮ್ಮಳ ಜನನದಿಂದ ಪ್ರಾರಂಭವಾಗುವ ಕಾದಂಬರಿ ಕುರುಡು ಸಂಪ್ರದಾಯ, ಅವೈಚಾರಿಕತೆಯಿಂದ ಕೂಡಿದ್ದ ಸಮಾಜದಲ್ಲಿ ಬಂಧಿಯಾಗಿ ಬೆಳೆದ ಒಂದು ಹೆಣ್ಣಿನ ಕತೆಯನ್ನು ಒಳಗೊಂಡಿದೆ. ತೀರ್ಥಹಳ್ಳಿಯ ಹೆಬ್ಬಲಿಗೆ ಗ್ರಾಮದಲ್ಲಿ ಅಂಚೆ ತಮ್ಮಯ್ಯ ಮತ್ತು ಸಣ್ಣಮ್ಮ ಎಂಬುವವರ ಮಗಳಾಗಿ ಫಣಿಯಮ್ಮ ಜನಿಸುತ್ತಾಳೆ. ಬ್ರಾಹ್ಮಣ ಜನಾಂಗದ ಮಧ್ಯಮ ವರ್ಗದ ಅವಿಭಕ್ತ ಕುಟುಂಬದಲ್ಲಿ ಸದ್ದುಗದ್ದಲವಿಲ್ಲದೆ ಪುರುಷಪ್ರಧಾನ ಸಮಾಜದ ರೂಪಿತ ಹೆಣ್ಣಾಗಿ ಫಣಿಯಮ್ಮ ಬೆಳೆಯುತ್ತಾಳೆ.

೧೮೪೦ರ ಸುಮಾರಿಗೆ ಫಣಿಯಮ್ಮ ಹುಟ್ಟಿದ ಕಾಲದಲ್ಲಿ ಮೌಢ್ಯತೆ ಆವರಿಸಿತ್ತು. ಪ್ರಾಪಂಚಿಕ ಜ್ಞಾನದ ಯಾವ ಅಸ್ತ್ರಗಳು ಜಾರಿಯಲ್ಲಿರಲಿಲ್ಲ. ಶಿಕ್ಷಣವು ಬ್ರಾಹ್ಮಣರ ಸ್ವತ್ತಾಗಿದ್ದರು ಗಂಡು ಮಕ್ಕಳಿಗೆ ಮಾತ್ರ ಸೀಮಿತವಾಗಿತ್ತು. ಅಲ್ಪಸ್ವಲ್ಪ ವಿದ್ಯೆ ಪಡೆದಿದ್ದ ಅಂಚೆ ಮನೆತನದವರಾದ ತಮ್ಮಯ್ಯನವರ

ಮನೆಯೂ ಮೂಢನಂಬಿಕೆಯಿಂದ ಹೊರತಾಗಿರಲಿಲ್ಲ. ಮೂಢನಂಬಿಕೆಯ ಅರಿವೂ ಇಲ್ಲದೆ ಅವುಗಳನ್ನು ಸಾಂಪ್ರದಾಯಿಕ ಮನೆಗಳಲ್ಲಿ ಆಚರಿಸುವುದು ಪರಿಪಾತವಾಗಿದ್ದಿತು. ಹಿಂದಿನ ಆಚರಣೆಗಳ ಒಳಿತು ಕೆಡುಕುಗಳನ್ನು ತಿಳಿಯುವ ಗೋಜಿಗೂ ಹೋಗದೆ ಅವುಗಳನ್ನು ಚಾಚುತಪ್ಪದೆ ಪಾಲಿಸುವ ಪರಿಪಾಲಕರಾಗಿದ್ದರು. ಶಾಸ್ತ್ರ ಸಂಪ್ರದಾಯಕ್ಕೆ ಹೆಚ್ಚಿನ ಮನ್ನಣೆ ಕೊಡುತ್ತಿದ್ದ ಸಮಾಜ ವಾಸ್ತವ ಬದುಕಿಗಿಂತ ಭವಿಷ್ಯತ್ತಿನ ಬದುಕಿನಲ್ಲಿ ಆಶಾಗೋಪುರಗಳನ್ನು ಕಟ್ಟಿಕೊಂಡಿತ್ತು. ಆಶಾಗೋಪುರಗಳು ಕಳಚಿ ಬೀಳುತ್ತಿದ್ದಂತೆ ಮೂಢನಂಬಿಕೆಯ ಬೆನ್ನಲ್ಲೆ ಹೆಣ್ಣನ್ನು ದೂಷಿಸುವುದು ಕಾದಂಬರಿಯಲ್ಲಿ ಬಿಂಬಿಸಿದೆ.

ಇದಕ್ಕೆ ಬಾಲ್ಯವಿವಾಹ, ಬಾಲ್ಯವೈಧ್ಯವ್ಯದ ಆಚರಣೆಗಳು ಸಾಕ್ಷಿಯಾಗಿ ನಿಲ್ಲುತ್ತವೆ. ಹೆಣ್ಣು ಮಕ್ಕಳಿಗೆ ಏಳು ವರ್ಷ ತುಂಬುವುದರೊಳಗೆ ಮದುವೆ ಮಾಡಿ ಮುಗಿಸುವುದು ರೂಢಿಯಲ್ಲಿದ್ದ ಕಾಲದಲ್ಲಿ ಫಣಿಯಮ್ಮ ಮದುವೆ ಹದಿನೈದು ವರ್ಷದ ನಂಜುಂಡನೊಂದಿಗೆ ನೆರವೇರುತ್ತದೆ. ಎಂಟು ದಿನದ ಮದುವೆಯ ಅರ್ಥವು ತಿಳಿಯದ ಫಣಿಯಮ್ಮ–ನಂಜುಂಡ ಅನುಭವಿಸಿದ್ದು ಉಡುಗೆ–ತೊಡುಗೆಯ ತಾಕಲಾಟ ಮಾತ್ರ. ಮನೆಯವರಿಗೆಲ್ಲ ಮದುವೆ ಸಂಭ್ರಮ ಮಾಸುವ ಮೊದಲೆ ನಂಜುಂಡನ ಸಾವು ಎದುರಾಗುತ್ತದೆ. ಹಾವು ಕಚ್ಚಿ ಸತ್ತ ನಂಜುಡನ ಸಾವಿಗೆ ಫಣಿಯಮ್ಮಳನ್ನು ಹೊಣೆ ಮಾಡುವುದು. ಎಲ್ಲಾ ಕಾಲಕ್ಕೂ ಸ್ತ್ರೀ ತಪ್ಪಿತಸ್ಥಳು ಎಂಬ ಭಾವ ಸೃಷ್ಟಿಸುವಂತೆ ಅಂದಿನ ಸಮಾಜ ಬಿಂಬಿತವಾಗುತ್ತದೆ. ಫಣಿಯಮ್ಮ ಮದುವೆಯಾದ ನಂತರ ಎಳ್ಳಮವಾಸ್ಯೆ ಜಾತ್ರೆಯಲ್ಲಿ ಕಳ್ಳನೊಬ್ಬ ಬಂಗಾರದ ಆಸೆಗಾಗಿ ಫಣಿಯಮ್ಮ ಜಡೆ ಬಂಗಾರವನ್ನು ಕತ್ತರಿಸಿದ್ದನ್ನು, ಬೆಲ್ಲದ ಆಸೆಗೆ ಪಂಚವಾಳದ ಮೇಲೆ ಎಗರಿದ ಕಾಗೆಯಿಂದ ಪಂಚವಾಳ ಮಗುಚಿ ಬಿದ್ದದ್ದನ್ನು ನಂಜುಂಡನ ಸಾವಿಗೆ ಸಂಬಂಧ ಕಲ್ಪಿಸುತ್ತಾರೆ. ಫಣಿಯಮ್ಮಳ ಜನನದ ಜಾತಕದ ಪ್ರಕಾರ "ಹುಡುಗಿಗೆ ಪೂರ್ಣಾಯಸ್ಸು, ಅಖಂಡ ಸೌಭಾಗ್ಯವತಿ, ಶ್ರೀಮಂತ ಗಂಡನ ಕೈ ಹಿಡೀತಾಳೆ"[೩] ಎಂಬ ಯಂಟಣ್ಣನ ಜಾತಕ ಕುರಿತು ಯೋಚಿಸದಿರುವಲ್ಲಿ ಅಂದಿನ ಸಮಾಜದಲ್ಲಿದ್ದ ಮೂಢನಂಬಿಕೆಯನ್ನು ಲೇಖಕಿ ತೆರೆದಿದ್ದಾರೆ.

ಫಣಿಯಮ್ಮಳ ಮದುವೆ ಸಂದರ್ಭದಲ್ಲಿ ಹುಡುಗನ ಜಾತಕ ಹೊಂದಿಸಲಾಗಿತ್ತು. ಹುಡುಗನಿಗೆ ಪೂರ್ಣಾಯಸ್ಸು, ಮಾಂಗಲ್ಯಕೂಟ, ದಾಂಪತ್ಯಕೂಟ, ನಕ್ಷತ್ರ, ಗೋತ್ರಗಳು ಹದನಾಗಿ ಕೂಡಿ ಬಂದಿದ್ದನ್ನು ನೋಡಿಯೇ ವಿವಾಹ ಮಾಡಲಾಗಿತ್ತು. ಜಾತಕದ ಪ್ರಕಾರ ನಂಜುಂಡನಿಗೆ ಸಾವಿಲ್ಲ. 'ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಎಂಬ ಗಾದೆ ಮಾತಿನಂತೆ ಸಂಪ್ರದಾಯಸ್ಥರು ಹುಡುಗನ ಜಾತಕ ಬದಲಾಯಿಸಿರುವುದಾಗಿ ಯೋಚಿಸುತ್ತಾರೆ. ಈ ಯೋಚನೆ ಸರಿ ಎನಿಸಿದರೂ,

ಫಣಿಯಮ್ಮ ಜಾತಕದ ಪ್ರಕಾರ 'ಅಖಂಡ ಸೌಭಾಗ್ಯವತಿ' ಎಂದು ಹೇಳುವಲ್ಲಿ ನಂಜುಂಡನ ಜೀವ ಉಳಿಯಬೇಕಿತ್ತು! ಇಲ್ಲಿ ಹೆಣ್ಣನ್ನು ಗುರಿಪಡಿಸುವುದನ್ನು ಕಾಣುತ್ತೇವೆ. ನಂಜುಂಡನ ಸಾವಿಗೆ ಫಣಿಯಮ್ಮ ಕಾರಣಳಾಗುತ್ತಾಳೆ. ಹುಟ್ಟು, ಸಾವು, ಮದುವೆ ಎಲ್ಲಾ ಶುಭ-ಅಶುಭಗಳಿಗೆ ಶಾಸ್ತ್ರ ನೋಡುವ ಪದ್ಧತಿ ಇಂದು ವೈಭವೀಕರಣಗೊಳ್ಳುತ್ತಿದೆ. ಈ ಮೂಲಕ ಲೇಖಕಿ ಜಾತಕ, ಶಾಸ್ತ್ರಗಳಿಂದ ಮೂಢನಂಬಿಕೆಯಲ್ಲಿ ಮೋಸ ಹೋಗುವ ಜನರನ್ನು ಎಚ್ಚರಿಸಿದ್ದಾರೆ.

ಬ್ರಾಹ್ಮಣ ಜನಾಂಗದಲ್ಲಿ ಬೇರೂರಿರುವ ವೈಧ್ಯವ್ಯದ ಆಚರಣೆ ಕಾದಂಬರಿಯ ಕೇಂದ್ರಭಾಗವಾಗಿದೆ. ಜಾತಿ ಎತ್ತರವಾದಷ್ಟು ಆಚರಣೆಗಳು ಪುರುಷಪ್ರಧಾನ ಸಮಾಜದಲ್ಲಿ ಕ್ರೂರವಾಗಿರುತ್ತವೆ. ಮಡಿ-ಮೈಲಿಗೆಯ ಹೆಸರಲ್ಲಿ ಹೆಣ್ಣಿನ ಶೋಷಣೆಯು ಅತಿರೇಕವಾಗಿರುತ್ತದೆ ಎಂಬುದಕ್ಕೆ ಫಣಿಯಮ್ಮ ಕಾದಂಬರಿ ಸಾಕ್ಷಿಯಾಗಿದೆ. ಬ್ರಾಹ್ಮಣ ಜನಾಂಗದಲ್ಲಿ ವಿಧವೆಯಾದವರು ಕೇಶಮುಂಡನ, ಅರೆಹೊಟ್ಟೆ ಊಟ, ಮನೆಮಂದಿಯ ಚಾಕರಿ ಮಾಡುತ್ತ ಜೀವನ ಸಾಗಿಸಬೇಕಾಗಿತ್ತು. ಅಬ್ರಾಹ್ಮಣ ವಿಧವೆಯರು ಈ ರೀತಿಯ ಕಟ್ಟು ನಿಟ್ಟಿನ ಆಚರಣೆಗಳಿಂದ ವಿನಾಯಿತಿ ಪಡೆದಿದ್ದಾರೆ. ಬ್ರಾಹ್ಮಣ ಜನಾಂಗದಲ್ಲಿ ವಿಧವೆಯರ ಸ್ಥಿತಿ ಅಮಾನವೀಯ ಸಂಪ್ರದಾಯಗಳಿಂದ ಕೂಡಿತ್ತು. ಗಂಡ ಸತ್ತೊಡನೆ ವಿಧವೆ ಪಟ್ಟ ನೀಡಿ ಮಡಿ ಪದ್ಧತಿಗೆ ದೂಡುವುದು ಸಾಮಾನ್ಯ ಕಾರ್ಯವಾಗಿದ್ದಿತು. ವಿಧವೆಯಾದವಳೂ ಕನ್ಯೆಯಾಗಿರಲಿ, ಅಬೋಧ ಬಾಲಿಕೆ (ಪ್ರಾಯಕ್ಕೆ ಬಂದಿಲ್ಲದಿರುವುದು) ಯಾಗಿರಲಿ ಅವಳು ವಿಧವಾ ಜೀವನಕ್ಕೆ ಅಣಿಯಾಗಬೇಕು ಫಣಿಯಮ್ಮಳು ಒಂಭತ್ತು ವರ್ಷದವರೆಗೆ ಮಿತಬಂಧನದಲ್ಲಿ ಬೆಳೆದರು ಅದೇ ಅವಳ ಸಂತೋಷ ಜೀವನವಾಗಿತ್ತು. ನಂತರ ಮದುವೆ, ಆನಂತರ ವಿಧವೆ ಎಂಬುದಕ್ಕೆ ಒಳಗಾಗಿ ಪುರುಷಪ್ರಧಾನ ಸಮಾಜದ ಅಮಾನವೀಯ ಆಚರಣೆಗಳ ಪರಿಪಾಲಕಳಾಗಿ ಕಾಲ ಕಳೆಯುವುದು ಅನಿವಾರ್ಯದಂತೆ ತೋರುತ್ತದೆ.

ವೈಧ್ಯವ್ಯವನ್ನು ಮೀರಿ ನಡೆದವರಿಗೆ ಜೀವನವೆ ಇಲ್ಲವೆಂಬಂತ ಶೃಂಗೇರಿ ಮಠದ ಬಹಿಷ್ಕಾರ ಹೆಣ್ಣಿನ ಮೇಲೆ ವಿಧಿಸಿದ್ದ ಉಗ್ರ ಶಿಕ್ಷೆಯಾಗಿತ್ತು. ಕಾದಂಬರಿಯ ಪ್ರಾರಂಭದಲ್ಲಿಯೆ "ಯಾವಳಾದರೂ ಬಾಲ ವಿಧವೆ ಬಸಿರಾದಳೆಂದರೆ ಮುಗಿಯಿತು"[೩] ಎನ್ನುವಲ್ಲಿಯೇ ವಿಧವೆಯರಿಗೆ ಮರುಮದುವೆಯ ವಿಚಾರದ ಕಲ್ಪನೆಯೂ ಇಲ್ಲದಿರುವುದು ಕಂಡುಬರುತ್ತದೆ. ತಪ್ಪು-ಒಪ್ಪಿನ ತನಿಖೆ ಇಲ್ಲದಂತೆ ಬೆಳ್ಳಿ ರೂಪಾಯಿ ಕೊಟ್ಟವರ ಪರವಾಗಿ ಮಡಿ ಹೆಂಗಸಿಗೆ ಬಹಿಷ್ಕಾರ, ಹೆಣ್ಣು ಕಾಮುಕರಿಂದ ಅನ್ಯಾಯಕ್ಕೊಳಗಾದರೂ ಬಹಿಷ್ಕಾರ ಹೆಣ್ಣಿಗೆ ಹಾಕುತ್ತಿದ್ದರು ಎಂಬುದು ಕಾದಂಬರಿಯ ಅಧ್ಯಯನದಿಂದ ವೇದ್ಯವಾಗುತ್ತದೆ. ಇದು ಅಂದಿನ ವ್ಯವಸ್ಥೆಯನ್ನು

ಪರಿಚಯಿಸುತ್ತದೆ. ಕನ್ಯಾ ವಿಧವೆಯಾಗಿದ್ದ ಫಣಿಯಮ್ಮ ಪ್ರಾಯಕ್ಕೆ ಬರುವ ಮೊದಲೆ ವಿಧವೆಯಾದವಳು. ಅವಳಿಗೆ ಶೃಂಗೇರಿ ಸ್ವಾಮಿಗಳು ನೀಡಿದ ವಿನಾಯಿತಿ ಮೈನರೆದ ನಂತರ ಮಡಿ ಮಾಡಿಸುವುದಾಗಿರುತ್ತದೆ. ಇದು ಹೆಣ್ಣಿನ ಮೇಲೆ ಹೇರುತ್ತಿದ್ದ ಭಯನಿರ್ಮಿತ ಆಚರಣೆಯನ್ನು ಸೂಚಿಸುತ್ತದೆ. ಬಹಿಷ್ಕಾರಕ್ಕೊಳಪಟ್ಟ ಹೆಣ್ಣು ವೈಧವ್ಯದ ಆಚರಣೆಗಿಂತ ವಿಕೃತ ಶೋಷಣೆಗೊಳಪಡುತ್ತಿದ್ದಳೆಂಬುದು ಅರಿವಾಗುತ್ತದೆ.

ಶೃಂಗೇರಿ ಮಠದ ಆಜ್ಞೆಯಂತೆ ಹನ್ನೊಂದನೇ ದಿನಕ್ಕೆ ಫಣಿಯಮ್ಮಳ ಬಳೆ ಒಡೆದರು. ಅರಿಶಿನ, ಕುಂಕುಮ, ಮಾಂಗಲ್ಯ ತೆಗೆದರು. ಈ ಸಂದರ್ಭದಲ್ಲಿ ಚಿಕ್ಕ ಪ್ರಾಯಕ್ಕೆ ವಿಧವೆಯಾದ ಫಣಿಯಮ್ಮಳನ್ನು ನೋಡಿ ಎಲ್ಲರೂ ಕನಿಕರದಿಂದ ಕಣ್ಣೀರು ಮಿಡಿಯುತ್ತಿದ್ದರೆ, ಫಣಿಯಮ್ಮಳ ಕಣ್ಣೀರು ಹೂವಿನ ಬಳೆ ಚೂರಾದದಕ್ಕೆ ಸುರಿಸುವಲ್ಲಿ ಅವಳ ವಯಸ್ಸಿನ ಮುಗ್ಧತೆ ಅರಿವಾಗುತ್ತದೆ. ಹದಿನಾಲ್ಕರ ಪ್ರಾಯಕ್ಕೆ ಮಠದ ತೀರ್ಪಿನಂತೆ ಮಡಿ ಪದ್ಧತಿಗೆ ಒಳಗು ಮಾಡುತ್ತಾರೆ. ಗಂಡನ ಮುಖ ಸರಿಯಾಗಿ ಜ್ಞಾಪಕವೂ ಇರದ ಫಣಿಯಮ್ಮಳ ವೈಧವ್ಯದ ಜೀವನ ಸ್ವಂತ ಆಯ್ಕೆಯಾಗಿರದೆ, ಪಾಲಿಸಲೇಬೇಕಾದ ಕರ್ತವ್ಯವಾಗಿರುತ್ತದೆ. ಗಂಡ ಸತ್ತ ಎಲ್ಲ ಹೆಣ್ಣುಗಳೂ ಹೇಗೆ ವೈಧವ್ಯ ಜೀವನಕ್ಕೆ ಹೊಂದಿಕೊಳ್ಳಬೇಕೊ ಹಾಗೆಯೇ ತನ್ನ ಬದುಕು ಎಂದುಕೊಳ್ಳುವ ಫಣಿಯಮ್ಮಳ ಮೂಲಕ ಸಮಾಜದ ಚೌಕಟ್ಟಿನೊಳಗೆ ಬದುಕುತ್ತಿರುವ ಶೋಷಿತ ಹೆಂಗಳೆಯರ ಜೀವನ ಬಿಂಬಿತವಾಗಿದೆ. ಅಂದಿನ ಸಾಮಾಜಿಕತೆಯಲ್ಲಿ ಬದುಕುತ್ತಿದ್ದ ಹೆಂಗಳೆಯರು ಅಸ್ವಾತಂತ್ರ್ಯದ ಬದುಕು ನಡೆಸುತ್ತಿದ್ದವರು. ಸಂಪ್ರದಾಯ, ಮೂಢನಂಬಿಕೆಗಳನ್ನೇ ಉಸಿರಾಗಿಸಿಕೊಂಡು ಪುರುಷಪ್ರಧಾನ ಸಮಾಜದ ಆಜ್ಞಾಪಾಲಕರಂತೆ "ಸದಾಕಾಲ ಅಡಿಗೆ ಕೆಲಸ, ಮದುವೆ, ಮುಂಜಿ, ಬಸಿರು–ಬಾಣಂತನಗಳು, ಗಂಡಸತ್ತ ಕೂಡಲೇ ತಲೆ ಬೋಳಿಸಿಕೊಂಡು ಒಪ್ಪತ್ತೂಟ ಹಿಡಿದರೆಂದರೆ ಅವರ ಜನ್ಮ ಪೂರಾ ಅಡಿಗೆ ಮನೆಯಲ್ಲೇ"[೫] ಬದುಕುತ್ತಿದ್ದವರು. ಮನೆಯಿಂದ ಹೊರಹೋಗುವುದೆ ಅಪರಾಧವಾಗಿದ್ದ ಕಾಲದಲ್ಲಿ ಹೊರಜಗತ್ತಿನ ಸಂಪರ್ಕವಿಲ್ಲದೆ ಬಾವಿಯೊಳಗಿನ ಕೂಪದಂತೆ ಬದುಕುತ್ತಿದ್ದವರು. ಈ ವಾತಾವರಣದಲ್ಲಿ ಬೆಳೆದ ಫಣಿಯಮ್ಮನಂತಹವರು ಶೋಷಣೆಗೆ ಒಳಪಡುತ್ತಿದ್ದುದ್ದರ ಅರಿವು ಇಲ್ಲದಂತಹ ಮುಗ್ಧರು.

ಫಣಿಯಮ್ಮಳ ವೈಧವ್ಯ ಜೀವನ ಅಂದಿನ ಎಲ್ಲಾ ವಿಧವೆಯರ ಜೀವನವನ್ನು ಪ್ರತಿಬಿಂಬಿಸುತ್ತದೆ. ಕೈತುಂಬ ಕೆಲಸ, ಒಂದ್ಹೊತ್ತಿನ ಊಟ, ರಾತ್ರಿ ಉಪಹಾರ, ಬಸುರಿ, ಬಾಣಂತಿಯರ ಆರೈಕೆಗಾಗಿ ಸಂಬಂಧಿಕರ ಮನೆಯಲ್ಲಿ ವಾಸ ಹೀಗೆ ಪಾಲಿಸುತ್ತಿದ್ದರು. ಇದು ಸಾಮಾನ್ಯ ನಿಯಮವಾಗಿದ್ದಿತು. ಫಣಿಯಮ್ಮ ಹುಟ್ಟಿದಾಗ ಸೈಕಲ್ಲು ಮಾತ್ರ ಇದ್ದು, ಮೋಟಾರು

ಇಲ್ಲದ ಕಾಲವಾಗಿದ್ದು, ೧೯೧೭ರ ಅವಧಿಯಲ್ಲಿ ಗ್ರಾಮಫೋನ್, ಪೆಟ್ರೋಮ್ಯಾಕ್ಸ್ ಬ್ಯಾಟರಿಗಳು, ಸೋಡಾ ಕಾಲಿಟ್ಟಿದ್ದವು. ಮೋಟಾರು ವಾಹನ ತೀರ್ಥಹಳ್ಳಿಗೂ ಬಂದಿತು. ಸಮಾಜವು ಮಾನವ ಜೀವನ ಶೈಲಿಯಲ್ಲಿ ಬದಲಾವಣೆ ಕಾಣುತ್ತಿದ್ದರೂ ಹೆಣ್ಣಿನ ಶೋಷಣೆ ವಿಚಾರದಲ್ಲಿ ಬದಲಾವಣೆಯನ್ನು ಅಪೇಕ್ಷಿಸಲಿಲ್ಲ. ಇಂತಹ ನಿಷ್ಕರುಣಿಕರು ಕಾದಂಬರಿಯ ಭಾಗಗಳಲ್ಲಿ ಕಂಡುಬರುತ್ತಾರೆ.

ಕಾದಂಬರಿಯುದ್ದಕ್ಕೂ ಹೆಣ್ಣಿನ ಮೇಲೆ ನಡೆಯುವ ಶೋಷಣೆಯನ್ನು, ಶೋಷಿತ ಹೆಣ್ಣಾಗಿ ಫಣಿಯಮ್ಮಳನ್ನು ಲೇಖಕಿ ಚಿತ್ರಿಸಿದ್ದಾರೆ. ಮೌಢ್ಯತೆ, ಅಂಧಕಾರತೆಯೊಳಗೆ ಮುಗ್ಧಳಾಗಿ, ಶೋಷಿತ ಹೆಣ್ಣಾಗಿ ಬೆಳೆದರು ಕಾಲದ ಅಂತರದಿಂದ, ಸಮಾಜದಲ್ಲಿ ಆಗುತ್ತಿದ್ದ ಬದಲಾವಣೆಗಳಿಂದ ವೈಚಾರಿಕ ಆಲೋಚನೆಗಳು ಫಣಿಯಮ್ಮಳಂತಹ ಶೋಷಿತ ಹೆಣ್ಣಿನಲ್ಲಿ ಬೆಳೆಯುತ್ತದೆ. ಹೆಣ್ಣು ಬುದ್ಧಿಹೀನಳಲ್ಲ, ಸಮಾಜ ಅವಳನ್ನು ಆ ಹಂತಕ್ಕೆ ಒಳಪಡಿಸಿದೆ ಎಂಬುದನ್ನು ಫಣಿಯಮ್ಮಳಂತಹ ಕಟ್ಟಾ ಸಂಪ್ರದಾಯವಾದಿಯಿಂದಲೆ ಸಮಾಜದ ಬದಲಾವಣೆಗೆ ಪ್ರಯತ್ನಿಸುತ್ತಿರುವುದು ಕಾಣುತ್ತದೆ. ತನ್ನ ಜೀವನದ ಕಹಿ ಘಟನೆಗಳನ್ನು ಮೆಲುಕು ಹಾಕುತ್ತ ಕೆಲಸದಲ್ಲಿ ಮಗ್ನಳಾಗುವ ಫಣಿಯಮ್ಮ ಅಂಚೆ ಅತ್ತೆ ಎಂದೇ ಹೆಸರಾದವಳು. ಪುರಾಣದ ವಿಚಾರಗಳಲ್ಲಿ ಸ್ತ್ರೀತನವನ್ನು ಗುರುತಿಸುವ ಫಣಿಯಮ್ಮ ಆಧುನಿಕ ಹೆಣ್ಣಾಗಿ ತೋರುತ್ತಾಳೆ. ಪುರಾಣ ಕಾಲದಿಂದಲು ಪುರುಷವಾದಿಗಳು ಹೆಣ್ಣನ್ನು ಶೋಷಿಸುವಲ್ಲಿ ಮೋಸವು ಒಂದು ಅಸ್ತ್ರ ಎಂಬುದು ಕಂಡುಬರುತ್ತದೆ. ಉದಾಹರಣೆಗೆ, ಪುರುಷನ ಕಪಟತನಕ್ಕೆ ಒಳಗಾದವಳಲ್ಲಿ ರೇಣುಕೆಯು ಒಬ್ಬಳು. ಅವಳು ದೇವೇಂದ್ರನ ವೇಷ ಬದಲಾವಣೆಯ ಕಪಟತನಕ್ಕೆ ಒಳಗಾಗಿ ಕಲ್ಲಾಗುವ ಶಿಕ್ಷೆಗೆ ಗುರಿಯಾಗುತ್ತಾಳೆ. ಇಲ್ಲಿ ಪುರುಷರ ಸ್ವಾರ್ಥಕ್ಕೆ ಬಲಿಯಾದವಳು ಹೆಣ್ಣು. ಇದನ್ನು ಫಣಿಯಮ್ಮ ಅರ್ಥೈಸಿಕೊಳ್ಳುವುದನ್ನು ತಾನಿರುವ ಕಾಲದಲ್ಲು ಪುರುಷ ದಬ್ಬಾಳಿಕೆಯನ್ನು ಸೂಕ್ಷ್ಮವಾಗಿ ಗ್ರಹಿಸಬಲ್ಲಳು ಎಂಬುದನ್ನು ಸೂಚಿಸುತ್ತದೆ.

ಬಸುರಿ–ಬಾಣಂತಿಯರ ಆರೈಕೆ ಮಾಡಿದ ಫಣಿಯಮ್ಮಳಿಗೆ ಸಂಸಾರ, ಗರ್ಭಧಾರಣೆ, ಪ್ರಸವ, ವಿಚಾರಗಳ ಅರಿವು ಇರುವುದಿಲ್ಲ. ಕನ್ಯಾವೈಧವ್ಯ ಜೀವನದಲ್ಲಿ ಕಳೆದಿದ್ದರಿಂದ ಸಂಸಾರ, ಮಕ್ಕಳು ಕುರಿತಂತೆ ನಿರ್ಲಿಪ್ತ ಭಾವನೆ ಬೆಳೆಸಿಕೊಳ್ಳುತ್ತಾಳೆ. "ಮಾನವನ ಜನ್ಮ ಬೇಡ; ಅದರಾಗೂ ಹೆಣ್ಣಿನ ಜನ್ಮಬೇಡ"[೬] ಎನ್ನುವಲ್ಲಿ ಗಂಡ ಇದ್ದರು, ಗಂಡ ಇಲ್ಲದಿದ್ದರು ಹೆಣ್ಣು ದೈಹಿಕವಾಗಿ, ಮಾನಸಿಕವಾಗಿ ಹಿಂಸೆಗೊಳಪಡುವವಳು ಎಂಬುದನ್ನು ಹೇಳುತ್ತದೆ. ಮುಂದಿನ ಜನ್ಮದಲ್ಲಿ 'ಹೂವಿನ ಗಿಡದ ಹೂ' ಬಯಸುವ ಫಣಿಯಮ್ಮಳ ನಿಷ್ಕಲ್ಮಶ ಹೃದಯ ಅರಿವಾಗುತ್ತದೆ. ಇದು ಪುರುಷ ಸಾಮಿಪ್ಯವನ್ನು ನಿರಾಕರಿಸುವಂತೆ ಹೇಳುವ ಮಾತಾಗಿದೆ. ಇದಕ್ಕೆ ಪುಟ್ಟಜೋಯಿಸರ, ಸುಬ್ಬರಾಯರ

ಕಚ್ಚೆಹರುಕತನವು ಹೆಣ್ಣು ಜನ್ಮವನ್ನು  ನಿರಾಕರಿಸುವಂತೆ ಮಾಡಿದೆ. 'ತುಂಗೆದನ ಗಬ್ಬಾಗಿಲ್ಲ' 'ಹೋರಿಕೊಡಿಸಿದ್ರಾಗಿತ್ತು' ಎಂಬ ಮಾತಿನ ಅರ್ಥವು ತಿಳಿಯದ ಫಣಿಯಮ್ಮಳಿಗೆ ಪುಟ್ಟಾಜೋಯಿಸ–ಸುಬ್ಬಿಯ ಸಾಮಿಪ್ಯ, ಸುಬ್ಬರಾಯ ಹೆಂಡತಿ ಗರ್ಭಿಣಿಯಾಗಿರುವಾಗ ಅವನು ಮತ್ತೊಂದು ಹೆಣ್ಣಿನ ಸಹವಾಸ ಮಾಡುವುದು ಇವು ಮಾನವ ಜನ್ಮದ ಬಗ್ಗೆ ಅಸಹ್ಯಕರ ಭಾವನೆ ಹುಟ್ಟಿಸುತ್ತದೆ. ಸಂಪ್ರದಾಯ ಹೆಣ್ಣಿಗೆ ಮೀಸಲು ಎಂಬಂತೆ ನಡೆಸಿಕೊಳ್ಳುವಲ್ಲಿ "ಏನು ವಿಚಿತ್ರ ಸಂಪ್ರದಾಯ ನಮ್ಮದು? ಗಂಡಸು ಹೊಲತಿಯನ್ನು ಮುಟ್ಟಿಬಂದರೂ ಸ್ನಾನ ಮಾಡಿ, ಜನಿವಾರ ಬದಲಾಯಿಸಿದರೆ ಶುದ್ಧ, ಹೆಂಗಸು ಅಪ್ಪಿತಪ್ಪಿ ಪುರುಷನನ್ನು ನೋಡಿದರೆ ಆಕೆ ಕುಲಟೆ"[೭] ಎನ್ನುವಲ್ಲಿ ಸಮಾಜದಲ್ಲಿ ಪುರುಷರ ಸ್ವೇಚ್ಛಾಚಾರದ ಮತ್ತೊಂದು ಮುಖ ಪರಿಚಿತವಾಗುತ್ತದೆ. ಫಣಿಯಮ್ಮಳಂತಹ ಸಂಪ್ರದಾಯಸ್ಥರಿಗೆ ಸಂಪ್ರದಾಯದ ಒಳಮುಖ ದರ್ಶನವಾಗುತ್ತದೆ. ಸಂಪ್ರದಾಯವಾದಿಗಳು ಪುರುಷನ ಸ್ವಾರ್ಥಕ್ಕಾಗಿ ಮಾಡಿಕೊಂಡಿರುವಂಥವುಗಳನ್ನು ಸಂಪ್ರದಾಯವಾದಿ ಯಿಂದಲೆ ಬದಲಿಸುವ  ಧೈರ್ಯವನ್ನು ಲೇಕಕಿ ಇಲ್ಲಿ ತೋರಿಸಿದ್ದಾರೆ. ಋಷಿ ಪಂಚಮಿ, ನೋಹಿ ವ್ರತ ಮುಗಿಸಿರುವ ಫಣಿಯಮ್ಮ ಕೆಳಜಾತಿ ಹೆಣ್ಣಿನ ಪ್ರಸೂತಿ ಮಾಡಿ ಮಾನವತೆಯನ್ನು ಮೆರೆದಿದ್ದಾಳೆ. ಫಣಿಯಮ್ಮ ಸಂಪ್ರದಾಯ ವಿರುದ್ಧ, ಪುರುಷಜಾತಿ ವಿರುದ್ಧ, ಅಸಮಾನತೆ ತೋರಿದರು ಕೂಡ ಸಮಾಜಕ್ಕೆ ತೋರ್ಪಡಿಸಿಕೊಳ್ಳುವಲ್ಲಿ ಹಿಂಜರಿದಿರುವುದು ಅಭಿವ್ಯಕ್ತಗೊಂಡಿದೆ.

ಲೇಖಕಿ ಕಾದಂಬರಿಯ ಮುಕ್ಕಾಲುಭಾಗ ಪುರುಷಪ್ರಧಾನ ವ್ಯವಸ್ಥೆಯ ಬಂಧಿಯಾಗಿ ಫಣಿಯಮ್ಮಳನ್ನು, ಉಳಿದ ಭಾಗ ವ್ಯವಸ್ಥೆಯನ್ನು ಮೀರುವ ಹೆಣ್ಣಾಗಿ ದಾಕ್ಷಾಯಿಣಿಯನ್ನು ಚಿತ್ರಿಸಿದ್ದಾರೆ. ಫಣಿಯಮ್ಮಳ ಸ್ತ್ರೀಪರವಾದ ಆಲೋಚನೆಗಳು ದಾಕ್ಷಾಯಿಣಿಯಲ್ಲಿ ಈಡೇರುತ್ತವೆ. ಫಣಿಯಮ್ಮಳ ಹಿಂದಿನ ಕಾಲಕ್ಕಾಗಲಿ, ಅವಳ ಕಾಲಕ್ಕಾಗಲಿ, ವ್ಯವಸ್ಥೆಯನ್ನು ಮೀರಿ ನಡೆದವರು ಕಾಣಸಿಗುವುದಿಲ್ಲ. ಅಂದರೆ ಪುರುಷಶಾಹಿ ಆಡಳಿತ ಎಷ್ಟರ ಮಟ್ಟಿಗೆ ಬೇರೂರಿತ್ತು ಎಂಬುದರ ಅರಿವಾಗುತ್ತದೆ. ಫಣಿಯಮ್ಮಳ ನಂತರ ಎರಡು ತಲೆಮಾರಿನ ಅಂತರದಲ್ಲಿ ದಾಕ್ಷಾಯಿಣಿಯ ಕೂಗು ಕೇಳಿಬರುತ್ತದೆ. ಒಂದು ವರ್ಷ ಸಂಸಾರಸ್ಥೆಯಾಗಿದ್ದ ದಾಕ್ಷಾಯಿಣಿ ೧೬ ವರ್ಷದ ಪ್ರಾಯಕ್ಕೆ ವಿಧವೆಯಾಗುತ್ತಾಳೆ. ಮಡಿ ಪದ್ಧತಿಯ ಆಚರಣೆಗಳು ಹಿಡಿಸದ ದಾಕ್ಷಾಯಿಣಿ ಪ್ರತಿಭಟಿಸುತ್ತಾಳೆ. ಪುರುಷವಾದಿಗಳು ಸಂಪ್ರದಾಯದ ಹೆಸರಿನಲ್ಲಿ ಬಲತ್ಕಾರದಿಂದ ಮಡಿ ಪದ್ಧತಿಗೆ ದೂಡುತ್ತಾರೆ. ದಾಕ್ಷಾಯಿಣಿ ಮೈದುನನಿಂದಲೆ ಬಸುರಾಗಿ ಸಂಪ್ರದಾಯವನ್ನು ಮುರಿಯುತ್ತಾಳೆ. ಬಹಿಷ್ಕಾರ ಹಾಕಿಸುವುದಾಗಿ ಬೆದರಿಕೆಯೊಡ್ಡಿದವರ ವಿರುದ್ಧ ಪ್ರತಿಭಟಿಸುತ್ತಾಳೆ.

ಲೇಖಕಿ ಎರಡು ಸ್ತ್ರೀ ಪಾತ್ರಗಳ ಮೂಲಕ ವ್ಯವಸ್ಥೆಯ ಬದಲಾವಣೆಯ ಆಶಯಗಳನ್ನು ಚಿತ್ರಿಸಿದ್ದಾರೆ. ಕಾದಂಬರಿಯು ತಣ್ಣನೆಯ ಗತಿಯಿಂದ ಸಾಗಿದ್ದು ಶೋಷಣೆಯ ನೆಲೆಗಳನ್ನು ಬಿಚ್ಚಿಟ್ಟಿದೆ ಮತ್ತು ದಾಕ್ಷಾಯಿಣಿಯ ಪಾತ್ರ ಬಂಧನದಿಂದ ಹೊರ ಬರುವ ಮೂಲಕ ಹೆಣ್ಣು ಹಿಂಸೆಯನ್ನು ಒಂದು ಹಂತದವರೆಗೆ ಸಹಿಸಿಕೊಳ್ಳಬಲ್ಲಳು, ಅತಿರೇಕವಾದಾಗ ಸಮಾಜದ ಮಿತಿಗಳನ್ನು ಮೀರಿ ನಡೆಯದೆ ಅನ್ಯಮಾರ್ಗವಿಲ್ಲ ಎಂಬುದನ್ನು ಹೇಳುತ್ತದೆ.

ಸಂಪ್ರದಾಯಸ್ಥರು ಹೊಸ ಆಲೋಚನೆಗಳಿಗೆ ಒಗ್ಗಿಕೊಳ್ಳಬೇಕು ಎಂಬುದು ಲೇಖಕಿಯ ಮತ್ತೊಂದು ಆಶಯ. ದಾಕ್ಷಾಯಿಣಿಯ ನಿರ್ಧಾರ ಫಣಿಯಮ್ಮ, ಫಣಿಯಮ್ಮಳ ಅಣ್ಣ ಕೃಷ್ಣನಂತಹವರು ಮೆಚ್ಚುವಲ್ಲಿ ಸಮಾಜದ ಬದಲಾವಣೆಯ ದ್ಯೋತಕವಾಗಿದೆ. ಫಣಿಯಮ್ಮ ಸಾಂಸಾರಿಕ ಜೀವನವನ್ನು ನಿರಾಕರಿಸಿದರೂ ದಾಕ್ಷಾಯಿಣಿ ಕುರಿತು ಚಿಂತಿಸಿದ್ದಾರೆ. "ನನ್ನ ಬಾಳು ಮಗೀಗೂ ಬಂತಲ್ಲ ಅಂತ ಸಂಕಟವಾಯಿತು"[೮] ಎನ್ನುವಲ್ಲಿ ವೈಧವ್ಯ ಬಾಳು ಸಂಕಟ ತರುವಂಥದ್ದು ಎಂತಲು, "ನಾನು ಹೆಣ್ಣಾಗಿ ಹುಟ್ಟಿದ್ದಕ್ಕೆ ಗಂಡನ ಜತೆ ಸಂಸಾರ ಮಾಡೂದೊಂದು ನನ್ನ ಹಣೇಲಿ ಬರಲಿಲ್ಲ"[೯] ಎನ್ನುವಲ್ಲಿ ಪುರುಷ ಬಂಧಿಯಾದ ಹೆಣ್ಣಿನ ಜೀವನದಲ್ಲಿ ಎಲ್ಲವೂ ದಕ್ಕುವುದಿಲ್ಲ ಎಂಬುದು ಬಿಂಬಿತವಾಗಿದೆ. ಈ ಕಾದಂಬರಿಯಲ್ಲಿ ಸಂಪ್ರದಾಯ, ಆಚರಣೆಯಿಂದ ಹೆಣ್ಣನ್ನು ಬಂಧನದಲ್ಲಿ ಇಡುವ ಪ್ರಯತ್ನ ಕಂಡುಬರುತ್ತದೆ.

## ಹಣ್ಣೆಲೆ ಚಿಗುರಿದಾಗ

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪ್ರಗತಿಶೀಲದ ಅಲೆ ಬೀಸತೊಡಗಿದಾಗ ರಚಿತವಾದ ಮಹಿಳಾ ಪ್ರಧಾನ ಕಾದಂಬರಿಗಳಲ್ಲಿ ಈ ಕಾದಂಬರಿಯು ಒಂದಾಗಿದೆ. ಸ್ವಾತಂತ್ರ್ಯನಂತರದಲ್ಲಿ ೧೯೬೩ರ ದಶಕದಲ್ಲಿ ರಚಿತವಾಗಿರುವ ಕಾದಂಬರಿ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಬೇರೂರಿದ್ದ ಸಂಪ್ರದಾಯ, ಸಂಪ್ರದಾಯದ ಹೆಸರಿನಲ್ಲಿ ನಡೆಯುತ್ತಿದ್ದ ಲಿಂಗ ತಾರತಮ್ಯವನ್ನು ಬಿಚ್ಚಿಡುತ್ತದೆ. ವಿಧವಾ ಪುನರ್ ವಿವಾಹ, ಅಂತರ್‌ಜಾತಿ ವಿವಾಹ, ಕಾದಂಬರಿಯ ಕೇಂದ್ರಭಾಗವಾಗಿವೆ. ಇದರ ಸುತ್ತ ಸಂಪ್ರದಾಯಸ್ಥರ – ಆಧುನಿಕ ಮನೋಭಾವದವರ ನಡುವೆ ನಡೆಯುವ ಘರ್ಷಣೆ, ತಾಕಲಾಟಗಳು ಬಿತ್ತರಗೊಂಡಿವೆ. ಪ್ರಾರಂಭದಲ್ಲಿ ಹಾಸ್ಯ ಮಿಶ್ರಿತವಾಗಿ ಸಾಗುವ ಕಥೆಯು ಮಧ್ಯದಲ್ಲಿ ಗಂಭೀರತೆಯನ್ನು ಪಡೆದುಕೊಳ್ಳುತ್ತದೆ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಬದುಕು ಗಂಭೀರವಾದದ್ದು ಎಂಬ ಸತ್ಯ ಸಂಗತಿ ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ.

ನಗರಪ್ರದೇಶದಲ್ಲಿ ವಾಸಿಸುತ್ತಿರುವ ಮಧ್ಯಮ ವರ್ಗದ ಬ್ರಾಹ್ಮಣ ವರ್ಗಕ್ಕೆ ಸೇರಿದ ಅನಂತರಾಯರು ಪುರುಷಪ್ರಧಾನ ವ್ಯವಸ್ಥೆಯ ಪ್ರತಿನಿಧಿಯಾಗಿದ್ದಾರೆ. ವೃತ್ತಿಯಲ್ಲಿ ವಕೀಲರಾಗಿದ್ದು ಸಂಪ್ರದಾಯಕ್ಕೆ ಅಂಟಿಕೊಂಡವರು. ಇವರಿಗೆ ಐದು ಗಂಡುಮಕ್ಕಳು, ಒಬ್ಬಳು ಹೆಣ್ಣು, ೪ ಜನ ಸೊಸೆಯಂದಿರು ೧೨ ಜನ ಮೊಮ್ಮಕ್ಕಳೊಂದಿಗೆ ಮತ್ತು ಪತ್ನಿ ರಾಜಮ್ಮನೊಂದಿಗೆ ಅವಿಭಕ್ತ ಕುಟುಂಬದಲ್ಲಿ ಬದುಕುತ್ತಿರುವವರು. ಉನ್ನತ ಹುದ್ದೆಯಲ್ಲಿದ್ದು ವಿದ್ಯಾವಂತರಾಗಿದ್ದರು, ಹೆಣ್ಣಿನ ವಿಚಾರದಲ್ಲಿ ನಿಷ್ಠುರವಂತರು, ೭೦ರ ಮುಪ್ಪಿನ ವಯಸ್ಸಿನಲ್ಲು ತನ್ನ ಯಜಮಾನಿಕೆ ಬಯಸುವವರು. ಮಕ್ಕಳ ಹೆಸರನ್ನೇ ಮರೆಯುವಂತಹ ಮರೆವಿನ ಗುಣವುಳ್ಳವರು. ಮನೆಯ ಕೆಲಸಕಾರ್ಯಗಳು ಪತ್ನಿ ಸಾರಥ್ಯದಲ್ಲಿ ನಡೆದರೂ ಅದನ್ನು ಮರೆಮಾಚುತ್ತ ತಮ್ಮ ಪ್ರಾಬಲ್ಯ ಮೆರೆಯುವ ಅನಂತರಾಯರ ಸುತ್ತ ಕಥೆ ಸಾಗಿದೆ. ಸಮಾಜದಲ್ಲಿ ಹೆಣ್ಣಿಗೆ ಬೇಕಾಗಿರುವುದು ಸುಖ–ಸಂಪತ್ತು, ನೆರಳಲ್ಲಿ ಕುಳಿತು ಊಟ, ಬಟ್ಟೆ ಸಿಕ್ಕರೆ ಅವಳ ಜೀವನ ಪರಿಪೂರ್ಣ ಎಂದು ಭಾವಿಸುವವರ ಪೈಕಿ ಅನಂತರಾಯರು ಸೇರುತ್ತಾರೆ. ಅವಳು ಅನುಭವಿಸುವ ವೈಭವ ಪರಾವಲಂಬಿಯಾಗಿ ಪಡೆಯುವಂತಹದ್ದೇ ಆದರೂ ಹೆಣ್ಣು ಅದರಲ್ಲೇ ತೃಪ್ತಿಪಟ್ಟುಕೊಳ್ಳಬೇಕೆಂಬ ನಿಲುವು ಹೊಂದಿದವರು. ಇವರ ಈ ಮನೋಭಾವಕ್ಕೆ ಗಂಡು ಮಕ್ಕಳ ಉನ್ನತ ಶಿಕ್ಷಣ, ಮಗಳಾದ ಮಾಲತಿಗೆ ಎಸ್.ಎಸ್.ಎಲ್.ಸಿ ನಂತರ ಮದುವೆ ಮಾಡುವುದು ಸಾಕ್ಷಿಯಾಗಿ ಕಂಡುಬಂದಿದೆ.

ಪರಾವಲಂಬಿ ಜೀವನ ಎಂದೂ ಯಾವ ಮನುಷ್ಯರಿಗು ಸ್ವತಂತ್ರಕೊಟ್ಟಿದ್ದಿಲ್ಲ. ಅಂಜುತ್ತ, ಅಳುಕುತ್ತ ಬದುಕುವುದೆ ಆಗಿರುತ್ತದೆ. ಹೆಣ್ಣಾದವಳು ಆ ರೀತಿಯ ಬದುಕು ನಡೆಸಬೇಕೆಂದೆ ಬಯಸುವ ಕಾಲದಲ್ಲಿ ಮಾಲತಿಯು ಅಪ್ಪನ ಮಾತನ್ನು ಮೀರಿ ನಡೆಯುವ ಹೆಣ್ಣಾಗಿರುವುದಿಲ್ಲ. ತಂದೆಯ ಇಚ್ಛೆಯಂತೆ ಮಹೇಶನನ್ನು ಮದುವೆಯಾಗಿ ಸಂಸಾರ ಪ್ರಾರಂಭಿಸುವ ಮೊದಲೆ ಇಪ್ಪತ್ತರ ಹರೆಯಕ್ಕೆ ವಿಧವೆಯಾಗುತ್ತಾಳೆ. ವೈಧವ್ಯ ಅಂದಿನ ಕಾಲದಲ್ಲಿ ಆಚರಣೆಯಲ್ಲಿದ್ದ ಕ್ರೂರ ಸಂಪ್ರದಾಯ. ವಿಧವೆಯಾದಲ್ಲಿ ಅವಳ ಜೀವನ ಅಲ್ಲಿಗೆ ಮುಗಿದಂತೆ. ಬದುಕಿರುವವರೆಗೂ ಅನ್ಯರ ಆಶ್ರಯದಲ್ಲಿ ಬದುಕಬೇಕಿತ್ತು. ತಂದೆಯ ಸಂಪ್ರದಾಯದ ಕಟ್ಟುನಿಟ್ಟಿನ ವಾತಾವರಣದಲ್ಲಿ ಬೆಳೆದ ಮಾಲತಿಯಲ್ಲೂ ಗಂಡ ಕಳೆದುಕೊಂಡ ಹೆಣ್ಣು ಆಶ್ರಯ ಬೇಡುವವಳು ಎಂಬುದೇ ಆಗಿತ್ತು. “ನಾಳೆಯ ದಿನ ಹಿರಿಯರಿಗೆ ಬೇಸರವಾಗಿ ತನ್ನನ್ನು ಅಲಕ್ಷ್ಯ ಮಾಡಿದರೆ ತನ್ನ ಗತಿಯೇನು? ತಂದೆಯ ಮನೆಯಲ್ಲಿ ತನ್ನನ್ನು ಅವರು ನೋಡಿಕೊಳ್ಳಬೇಕೆಂಬ ನಿಯಮವೇನು ಇಲ್ಲ. ತನ್ನ ಬದುಕು ಅಣ್ಣಂದಿರ ಕರುಣೆಯ ಮೇಲೆ ನಿಂತಿದೆ. ದಿನ ಕಳೆದಂತೆ ಕರುಣೆ ಮಾಯವಾದರೆ ಆಗ ತಾನೆಲ್ಲಿ ಹೋಗಬೇಕು? ಮಹೇಶನಿಲ್ಲದೆ ಅತ್ತೆಯ ಮನೆಗಂತೂ ತಾನು

ಹೋಗುವುದು ಖಂಡಿತ ಸಾಧ್ಯವಿಲ್ಲ. ಇನ್ನೊಬ್ಬರ ಕೃಪಾ ಛತ್ರದಲ್ಲಿರುವ ತನಗೆ ಅವರನ್ನು ನೋಯಿಸುವ ಹಕ್ಕಾದರೂ ಎಲ್ಲಿದೆ?"[೧೦] ಎಂಬ ಮಾಲತಿ ಮಾತುಗಳಲ್ಲಿ ವಿಧವೆಯ ಜೀವನ ದಯೆ, ದಾಕ್ಷಿಣ್ಯದ ಮೇಲೆ ನಿಂತಂತೆ ಭಾಸವಾಗುತ್ತದೆ. ಮದುವೆಯಾಗಿ ಒಂದು ದಿನವೂ ಅತ್ತೆಯ ಮನೆಗೆ ಕಾಲಿಡದಿದ್ದರು ಮದುವೆಯಾಗುತ್ತಿದ್ದಂತೆ ತಂದೆಯ ಮನೆಯ ಸ್ಥಾನ ಕಳೆದುಕೊಳ್ಳುವಂತೆ ಸೃಷ್ಟಿಯಾಗಿರುವ ಸಮಾಜದಲ್ಲಿ ಮಾಲತಿಯ ಮುಗ್ಧತೆ ಅರಿವಾಗುತ್ತದೆ.

ಅನಂತರಾಯರ ಮನೆಯ ಮಗಳು, ಸೊಸೆಯರೆಲ್ಲಾ ಸಂಪ್ರದಾಯ ಬಂಧಿಗಳಾಗಿರುವಾಗ ಮಾಲತಿ ಜೀವನ ಇಷ್ಟಕ್ಕೆ ಕೊನೆಗೊಳ್ಳುತ್ತದೆ ಎಂದುಕೊಳ್ಳುವಲ್ಲಿ ಲೇಖಕಿ ಕಥೆಯಲ್ಲಿ ಹೊಸ ಆಯಾಮವನ್ನು ತಂದಿದ್ದಾರೆ. ಮಾಲತಿ ಅಣ್ಣಂದಿರು ಸುಶಿಕ್ಷಿತ ಆಧುನಿಕ ಮನಸ್ಕರಾಗಿದ್ದರಿಂದ ಮಾಲತಿಯನ್ನು ಮುಂದೆ ಓದಿಸುವ ತೀರ್ಮಾನದಲ್ಲಿ ಲೇಖಕಿ ಶಿಕ್ಷಣದ ಗುಣಮಟ್ಟವನ್ನು ಹೇಳ ಹೊರಟಿರುವುದು ಕಾಣುತ್ತದೆ. ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸಕ್ಕೆ ಮಾಲತಿ ಓದು ನಿಂತಾಗ ಮಾಲತಿ ಅಣ್ಣಂದಿರು ಓದಿಸುವ ಹುಮ್ಮಸ್ಸು ತೋರುತ್ತಾರೆ. ತಂದೆಯ ಮೊಂಡುತನದ ವಾದದಿಂದ ಮೌನವಹಿಸುತ್ತಾರೆ. ಪ್ರತಿಯೊಬ್ಬರ ಜೀವನದಲ್ಲು ಕಷ್ಟ, ನೋವು ಸಹಜ. ಅವುಗಳನ್ನು ನೆನೆದು ಕೊರಗುತ್ತ ಕೂರುವ ಬದಲು ಪರಿಹಾರದ ಮಾರ್ಗವನ್ನು ಕಂಡುಕೊಳ್ಳಬೇಕು ಎಂಬ ಸಂದೇಶ ಕಾದಂಬರಿಯಲ್ಲಿ ಬಿಂಬಿತವಾಗಿದೆ. ಮಾಲತಿಯ ನೋವಿಗೆ ಸ್ಪಂದಿಸುತ್ತ ಹೆಣ್ಣಿನ ಬಾಳು ಇಷ್ಟೆ ಎಂಬಂತೆ ಅವಳನ್ನು ಕಡೆಗಣಿಸಿದ್ದರೆ ಮಾಲತಿ ಆಸೆ–ಕನಸುಗಳಿಲ್ಲದೆ ಕೊರಗುತ್ತ ಸಾವಿನ ನಿರೀಕ್ಷೆಯಲ್ಲಿರಬೇಕಿತ್ತೇನೊ? ಆದರೆ ಮಾಲತಿಯ ಅಣ್ಣಂದಿರು ಕಾಲೇಜಿಗೆ ಸೇರಿಸುತ್ತಾರೆ. ಮಾಲತಿಯ ಕಾಲೇಜಿನ ವಿಷಯವಾಗಿ ರಾಯರು ಎದುರಾಡದೆ ಇರಲಿಲ್ಲ. "ನೀವು ಇಷ್ಟೊಂದು ಜನ ಅಣ್ಣಂದಿರಿದ್ದೂ ಮಾಲತಿಯೊಬ್ಬಳ ಜವಾಬ್ದಾರಿ ವಹಿಸಿಕೊಂಡು ಅನ್ನ ಹಾಕಲಾರಿರಾ?"[೧೧] ಎಂದು ವಿಧವೆಯ ಬದುಕಿಗೆ ಊಟ ಒಂದೆ ಆಧಾರ, ಅವಳ ಜೀವನದಲ್ಲಿ ಯಾವ ಸಾಧನೆಯು ಉಳಿದಿಲ್ಲವೆಂದೇ ಯೋಚಿಸುವ ರಾಯರ ಸಂಕುಚಿತ ಮನೋಭಾವ ಪುರುಷವಾದಿತನವಾಗಿದೆ. ಇಲ್ಲೂ ಮಾಲತಿ, ತಂದೆಯ ಮನೆಯನ್ನು ಪರರ ಹಂಗಿನಲ್ಲಿರುವವಳು ನಾನು, ಅವರು ಹೇಳಿದಂತೆ ಕೇಳುವುದು ತನ್ನ ಕರ್ತವ್ಯ ಎಂದೇ ಕಾಲೇಜಿಗೆ ಸೇರುತ್ತಾಳೆ. ಇವಳ ಯೋಚನೆ ಪುರುಷ ಪರವಾದದ್ದಾದರು ಹೊರಗಿನ ಒಡನಾಟದಿಂದ ದುಃಖ ಮರೆಯುತ್ತಾಳೆ. ಲವಲವಿಕೆಯಿಂದ ಓದುವ ಉತ್ಸಾಹದಲ್ಲಿ ತೊಡಗುತ್ತಾಳೆ. ಓದಿನಿಂದ ಮುಗ್ಧತೆ ಕಳಚಿ ಪ್ರಬುದ್ಧ ಚಿಂತಕಿಯಾಗುತ್ತಾಳೆ. ಮುಂದೆ ಸ್ವಾಭಿಮಾನದ ಕೆಚ್ಚು ಸಂಪ್ರದಾಯವನ್ನು ಮೀರಿ ನಡೆಯುವಂತಹ ಯೋಚನೆಗಳನ್ನು ಬೆಳೆಸುತ್ತದೆ.

ಆನಂತರ ಜೀವನದಲ್ಲಿ ಹೊಸ ಚೇತನ ಉಂಟಾಗಿ ವಿದುರ ಪ್ರಸಾದನ ಪರಿಚಯ ಮಾಲತಿಯಲ್ಲಿ ಪುಳಕವನ್ನುಂಟು ಮಾಡುತ್ತದೆ. ಪ್ರಸಾದ–ಮಾಲತಿಯರ ಪರಿಚಯ ಪ್ರೇಮವಾಗಿ ಬೆಳೆಯುತ್ತದೆ. ಮಾಲತಿ ಮಾತ್ರ ಅದನ್ನು ಪ್ರಸಾದನಿಗೆ ಹೇಳಿಕೊಳ್ಳುವಲ್ಲಿ ತಂದೆಯ ಮನಸ್ಥಿತಿ ಅರಿತಿದ್ದರಿಂದ ಮನಸ್ಸಿನಲ್ಲಿ ಪ್ರಸಾದನ ಕುರಿತು ಪ್ರೀತಿಯಿದ್ದರೂ ಮೌನಿಯಾಗುತ್ತಾಳೆ. ಮಾಲತಿಯ ನಿರೀಕ್ಷೆಯಂತೆ ರಾಯರ ಪ್ರಕಾರ ಎರಡನೆಯ ಮದುವೆ 'ಕೂಡುವಳಿ'ಗೆ ಸಮಾನವೆಂದೆ ಭಾವಿಸಿದ್ದವರು. ಹಳೆಯ ಸಂಪ್ರದಾಯಗಳಿಗೆ ಮಾರುಹೋಗಿದ್ದ ರಾಯರು ಹೊಸ ವಿಚಾರಗಳಿಗೆ ಹೊಂದಿಕೊಳ್ಳಲಾರರೆಂಬುದನ್ನು ಅರಿತಿದ್ದರಿಂದ ಪ್ರಸಾದನ ಜೊತೆ ಆಸೆ–ನಿರಾಸೆಗಳ ಗೊಂದಲದಲ್ಲಿರುತ್ತಾಳೆ. ಕಾದಂಬರಿಯ ಒಂದು ಹಂತದವರೆಗೆ ತಂದೆಯ ಮಾತಿಗೆ ಎದುರಾಡದೆ ತಂದೆಯ ನಿರ್ಧಾರವೇ ತನ್ನ ನಿರ್ಧಾರವೆಂದು ಹೇಳುವಲ್ಲಿ ಅವಳ ಮುಗ್ಧತೆ ಕಂಡುಬಂದರೆ, ಕಾಲೇಜು ಶಿಕ್ಷಣ ಪಡೆದು ಪ್ರಬುದ್ಧಳಾಗಿದ್ದರು ತಂದೆಯ ಮಾತಿನ ವಿರುದ್ಧ ನಡೆಯದಿರುವಲ್ಲಿ ಮಾಲತಿಯ ವಿವೇಕತನ ಕಂಡುಬರುತ್ತದೆ.

ಮನುಷ್ಯ ಕಾಲಕ್ಕೆ ತಕ್ಕಂತೆ ಬದಲಾಗಬೇಕು. ಹಳೆಯ ತಲೆಮಾರಿನವರು ಹೊಸ ತಲೆಮಾರಿಗೆ ಹೊಂದುಕೊಳ್ಳುವಲ್ಲಿ ನಿರಾಕರಿಸುವುದರಿಂದ ಕುಟುಂಬಗಳಲ್ಲಿ ಬಿರುಕು ಕಾಣಿಸುತ್ತದೆ. ಮನೆಗಳು ಒಡೆಯುವುದಲ್ಲದೆ, ಮನಸ್ಸುಗಳು ಚೂರಾಗುತ್ತವೆ. ಈ ನಡುವೆ ಮಾಲತಿ–ಪ್ರಸಾದರ ಪ್ರೀತಿ ಹಸಿಯಾಗಿರುವಾಗ ಮಾಲತಿಯ ಅಣ್ಣ ಶಿವು ಅನ್ಯಜಾತಿ ಹೆಣ್ಣನ್ನು ಪ್ರೇಮಿಸಿ ಮದುವೆಯಾಗುವುದು ಮಾಲತಿಯ ಪುನರ್ ವಿವಾಹಕ್ಕೆ ಪೆಟ್ಟುಬೀಳುತ್ತದೆ. ಶಿವುವಿನ ಪ್ರೇಮ ವಿವಾಹಕ್ಕೆ ಸಂಪ್ರದಾಯಸ್ಥ ರಾಯರು ಮೂಗು ಮುರಿಯುತ್ತಾರೆ. ಕಾರಣ ನಾಟಕದಲ್ಲಿ ಅಭಿನಯಿಸುವ ಹುಡುಗಿ ಎನ್ನುವುದು ಮತ್ತು ಬೇರೆ ಜಾತಿಗೆ ಸೇರಿದವಳೆಂಬುದು. ಗೃಹಿಣಿ ಜೀವನಕ್ಕೆ ಹೆಣ್ಣನ್ನು ಮೀಸಲಾಗಿರಿಸಿರುವ ಅನಂತರಾಯರಂತಹವರು ಕಲೆಗೆ ಬೆಲೆ ಕೊಡುವ ಬದಲು ಆ ಹೆಂಗಳೆಯರನ್ನು ಕೀಳಾಗಿಯೇ ಭಾವಿಸುತ್ತಾರೆ. ರಾಯರನ್ನು ಬಿಟ್ಟು ಉಳಿದವರಿಗೆ ಜಯಂತಿಯು ಅಭಿನಯಿಸುವಾಗ ತೊಡುವ ಉಡುಗೆ, ಭಂಗಿ, ಹಾವ–ಭಾವ ಇರಿಸುಮುರಿಸು ತರುತ್ತಾದರು ಶಿವುವಿನ ವೈಯಕ್ತಿಕ ನಿರ್ಧಾರಕ್ಕೆ ಬಿಡುತ್ತಾರೆ. ಮಾಲತಿ ಮಾತ್ರ "ಅಭಿನಯ, ನೃತ್ಯ, ಮಾನ–ಮರ್ಯಾದೆಯಿಲ್ಲದ ಹುಡುಗಿಯರಿಗೆ ಮೀಸಲು ಎಂಬ ವಾದವನ್ನು ಎಂದೂ ಒಪ್ಪಿಕೊಂಡಿರಲಿಲ್ಲ. ಕಲೆ ಎಂದ ಮೇಲೆ ಅದು ಯಾವ ಕಲೆಯಾದರೂ ಸರಿ ಅದಕ್ಕೊಂದು ಪೂಜ್ಯ ಸ್ಥಾನವಿದ್ದೇ ಇದೆ ಎಂದವಳ ಭಾವನೆ".[೧೨] ಇದು ಸಂಪ್ರದಾಯಸ್ಥ ಕುಟುಂಬದಲ್ಲಿದ್ದರು ಮಾಲತಿಯ ಪ್ರಾಪಂಚಿಕ ಜ್ಞಾನವನ್ನು ಹೇಳುತ್ತದೆ.

ಹೆಣ್ಣಿನಲ್ಲೂ ಯಾವುದು ಸರಿ, ಯಾವುದು ತಪ್ಪು ಎಂದು ನಿರ್ಧಾರ ಮಾಡುವ ಬೌದ್ಧಿಕತೆ ಇದ್ದರೂ ಅವಳು ಪುರುಷನ ಬಂದಿಯೇ ಎಂಬುದು ಕಾದಂಬರಿಯಲ್ಲಿ ಕಂಡುಬರುತ್ತದೆ. ಶಿವು–ಜಯಂತಿಯನ್ನು ಮದುವೆಯಾಗಬೇಕಾದರೆ ಜಯಂತಿ ನಾಟಕ ಮಾಡುವುದನ್ನು ಬಿಡಬೇಕು ಎನ್ನುವ ರಾಯರ ಮನೋಭಾವ ಪುರುಷಪ್ರಧಾನ ಸಮಾಜಕ್ಕೆ ಹೊಂದಿಕೊಂಡೆ ಹೆಣ್ಣು ಬದುಕಬೇಕೆಂದು ಹೇಳುವಂತಿದೆ. ಶಿವು, ತಂದೆಯಾದ ರಾಯರ ಮಾತನ್ನು ಧಿಕ್ಕರಿಸುತ್ತಾನೆ. ತಂದೆ ಮಗನ ಸಂಬಂಧ ಕಡಿದುಕೊಳ್ಳುವಂತಹ ನಿಷ್ಠುರತೆ ರಾಯರು ತೋರಿದಾಗ ಆಸ್ತಿಯ ಮೇಲೆ ವ್ಯಾಮೋಹವಿದ್ದರು ಶಿವು ತೊರೆಯುತ್ತಾನೆ. ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳುವ ಸ್ಥೈರ್ಯ, ಆತ್ಮವಿಶ್ವಾಸ ಅವನಲ್ಲಿ ಕಂಡುಬರುತ್ತದೆ. ಜಯಂತಿಯ ಕೈಹಿಡಿದು ನೆಮ್ಮದಿಯ ಬದುಕು ಕಾಣುತ್ತಾನೆ. ಅದೇ ಮನೆಯಲ್ಲಿ ವಾಸವಾಗಿದ್ದ ಹೆಣ್ಣಿನ ಹೃದಯ ಬೇರೆ, ಶಿವುವಿನಿಂದ ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದ ರಾಯರ ಮನದಿಂಗಿತ ಅರಿತ ಮಗಳು ಪ್ರಸಾದನನ್ನು ಮದುವೆಯಾಗುವ ನಿರ್ಧಾರದಲ್ಲಿ ತಂದೆಯ ಅನುಮತಿ ಕಾಯುತ್ತಾಳೆ. ಅಂತರ್ಜಾತಿ ವಿವಾಹಕ್ಕೆ ಒಪ್ಪದ ರಾಯರು ವಿಧವಾ ವಿವಾಹಕ್ಕೆ ಒಪ್ಪಿಗೆ ಸೂಚಿಸುವರೆ? "ಒಬ್ಬ ಮಗನೊಡನೆ ಈ ಮಗಳೂ ಸತ್ತು ಹೋದಳೆಂದು ನಾನು ಭಾವಿಸುತ್ತೇನೆ."[೧೩] ಎಂದು ಖಾರವಾಗಿ ನುಡಿಯುವುದು ಹೆಣ್ಣಿನ ಆತ್ಮಸ್ಥೈರ್ಯವನ್ನು ಕುಗ್ಗಿಸುತ್ತದೆ. ಮಾಲತಿಗೆ ತಂದೆಯ ಮೇಲಿನ ಪ್ರೀತಿ ಪ್ರಸಾದನ ಪ್ರೀತಿಯನ್ನು ನಿರಾಕರಿಸುವಂತೆ ಮಾಡುತ್ತದೆ.

ಮಾಲತಿಯು ಕಾದಂಬರಿಯುದ್ದಕ್ಕೂ ಎಂದೂ ಗಟ್ಟಿಯಾಗಿ ಪ್ರತಿಭಟಿಸಿದವಳಲ್ಲ. ಮೌನವಾಗಿಯೆ ಕಾರ್ಯಸಿದ್ಧಿಸಿಕೊಳ್ಳುತ್ತಾಳೆ. ಪ್ರಸಾದ, ತಂದೆ ಇಬ್ಬರಲ್ಲಿ ಒಬ್ಬರನ್ನು ಕಳೆದುಕೊಳ್ಳಬೇಕಾದ್ದರಿಂದ ತಂದೆಯ ಮಾತಿಗೆ ಮಾನ್ಯತೆ ನೀಡುತ್ತಾಳೆ. ತನ್ನ ಜೀವನ ಹೇಗೋ ಸಾಗುತ್ತದೆ ಎಂಬರ್ಥದಲ್ಲಿ "ನನಗೆ ಏನಾಗಬೇಕಾಗಿದೆ? ಎರಡು ಹೊತ್ತು ಅನ್ನ, ವರ್ಷಕ್ಕೆರಡು ಸೀರೆಯಾದರೆ ಸಾಕು. ನಿಮ್ಮ ಮಕ್ಕಳು ಮೊಮ್ಮಕ್ಕಳನ್ನು ಆಡಿಸಿಕೊಂಡು ಕಾಲ ಹಾಕುತ್ತೇನೆ"[೧೪] ಎಂಬ ವ್ಯಂಗ್ಯ ಮಾತುಗಳು ರಾಯರ ಹೃದಯವನ್ನು ತೆರೆಯುತ್ತದೆ. ಪ್ರಸಾದನಿಗಿಂತಲು ತಂದೆಗೆ ಪ್ರಾಮುಖ್ಯತೆ ಕೊಟ್ಟಿದ್ದನ್ನು ಮೆಚ್ಚಿದ ರಾಯರು ಶಾರದಮ್ಮನ ಪೂಜೆ ಮಾಡಿಸಿಕೊಂಡು ತಂದ ಕುಂಕುಮವನ್ನು ಮಾಲತಿಗೆ ಕೊಡುತ್ತಾರೆ. 'ದೀರ್ಘ ಸುಮಂಗಲೀಭವ' ಎಂದು ಮನಃಪೂರ್ವಕವಾಗಿ ಆಶೀರ್ವದಿಸುತ್ತಾರೆ. ವಿಧವಾ ವಿವಾಹಕ್ಕೆ ಒಪ್ಪಿಗೆ ಸೂಚಿಸುತ್ತಾರೆ.

ಈ ಕಾದಂಬರಿಯಲ್ಲಿ ಲೇಖಕಿ ಹೆಣ್ಣಿನ ಶೋಷಣೆಯ ಆಯಾಮಗಳನ್ನು ಬಿಚ್ಚಿಡುತ್ತಾ ಎಲ್ಲೂ ವ್ಯವಸ್ಥೆಯನ್ನು ಮೀರುವ ಚಿತ್ರಣ ನೀಡುವುದಿಲ್ಲ. ಅನಂತರಾಯರು ಕಾದಂಬರಿಯ ಖಳ

ನಾಯಕನು, ನಾಯಕನು ಆಗಿದ್ದು ಶೋಷಣೆಯ ಪ್ರತಿನಿಧಿಯಾಗಿದ್ದಾನೆ. ಮಾಲತಿಯು ಸಮಾಜದ ನಿಯಮಗಳಿಗೆ ತಲೆಬಾಗಿದವಳೆ ಆಗಿರುತ್ತಾಳೆ. ಸ್ವತಃ ತನ್ನ ಅಸ್ತಿತ್ವಕ್ಕಾಗಿ ತಾನು ಪ್ರಯತ್ನಿಸುವುದಿಲ್ಲ, ಪುರುಷರಿಂದಲೆ ಬದುಕು ಸ್ಥಾಪಿತವೆಂಬಂತೆ ಲೇಖಕಿ ಕಟ್ಟಿಕೊಟ್ಟಿದ್ದಾರೆ. ವಿದ್ಯಾಭ್ಯಾಸವನ್ನು ಅಣ್ಣಂದಿರು ಕೊಡಿಸುತ್ತಾರೆ, ಪ್ರಸಾದ್ ಎಂಬ ವ್ಯಕ್ತಿಯೊಂದಿಗೆ ಪ್ರೀತಿ ಹುಟ್ಟಿಸುತ್ತದೆಯಾದರು ಹೆಣ್ಣಿಗೆ ಗಂಡಿನ ಆಶ್ರಯ ಅವಶ್ಯಕತೆ ಎಂಬಂತಿದೆ. ಮಾಲತಿಯ ಮರುವಿವಾಹ ಪುರುಷಪ್ರಧಾನ ವ್ಯವಸ್ಥೆಯ ಆಜ್ಞಾಪಾಲಕ ರಾಯರು ಒಪ್ಪುವವರೆವಿಗೂ ನಡೆಯುವುದಿಲ್ಲ. ಎಲ್ಲವನ್ನು ಗಮನಿಸಿದಾಗ ಲೇಖಕಿ ಪುರುಷಷಾಹಿ ವ್ಯವಸ್ಥೆಯೊಳಗೆ ಹೆಣ್ಣಿನ ಸ್ಥಿತಿಗತಿ ಹೇಳಿದ್ದಾರೆ. ಅವಳ ಅಸ್ತಿತ್ವ ಸ್ಥಾಪನೆಗೆ ಪುರುಷನು ಅವಶ್ಯಕ ಎಂದು ಹೇಳಿರುವಂತಿದೆ. ಶಿವು ತಂದೆಯ ಮಾತಿಗೆ ವಿರೋಧವಾಗಿ ವಿವಾಹವಾಗುತ್ತಾನೆ. ಅದೇ ಮನೆಯ ಹೆಣ್ಣಾದ ಮಾಲತಿಗೆ ಆ ಸ್ವಾತಂತ್ರ್ಯ ನೀಡಿಲ್ಲದಿರುವುದು ಲೇಖಕಿಯೂ ವ್ಯವಸ್ಥೆಯ ಬಂಧಿಯಾಗಿರುವುದು ಕಂಡುಬರುತ್ತದೆ.

'ಹೊಸ ನೀರು ಬಂದಾಗ ಹಳೆ ನೀರು ಕೊಚ್ಚಿಹೋಗುತ್ತದೆ' ಎಂಬ ಮಾತಿಗೆ ಪೂರಕವಾಗಿ ಕಾದಂಬರಿ ರಚಿತವಾಗಿದೆ. ರಾಯರ ಮನಸ್ಥಿತಿ ಬದಲಾಗುವ ಮೂಲಕ ವಿಧವಾ ವಿವಾಹ ನೆರವೇರುವಲ್ಲಿ ಹೆಣ್ಣಿನ ಮೇಲಿರುವ ಸ್ತ್ರೀ ವಿರೋಧ ವಿಚಾರಗಳನ್ನು ತಳ್ಳಿಹಾಕಿದಾಗ ಮಾತ್ರ ಸ್ತ್ರೀ ಸಮಾನತೆಯನ್ನು ಕಾಣಬಹುದು ಎಂಬುದು ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಹಳೆಯ ವಿಚಾರಗಳು ಆಧುನಿಕ ಸಮಾಜದಲ್ಲಿ ನೆಲೆ ನಿಲ್ಲುವುದಿಲ್ಲ ಕಾಲಗತಿಸಿದಂತೆ ಸ್ತ್ರೀ ಶೋಷಣೆಯ ನೆಲೆಗಳು ಗತಿಸುತ್ತ ಸಮಾಜ ಸಾಗುತ್ತಿದೆ ಎಂಬುದನ್ನು ತೋರಿಸಿದ್ದಾರೆ. ಹಳೆಯ ವಿಚಾರಗಳು, ಹೊಸ ವಿಚಾರಗಳ ನಡುವೆ ಹಳೆಯ ವಿಚಾರಗಳು ಮೌಲ್ಯವನ್ನು ಕಳೆದುಕೊಳ್ಳುತ್ತಿರುವುದರ ಮೂಲಕ ಸಮಾಜದಲ್ಲಿ ಬದಲಾವಣೆಯ ಗಾಳಿ ಬೀಸತೊಡಗುತ್ತಿರುವುದು ಕಾದಂಬರಿಯ ಆಶಯವಾಗಿದೆ.

ಈ ಕಾದಂಬರಿಯ ಆಶಯವು ಸಂಪೂರ್ಣ ಪುರುಷಪ್ರಧಾನತೆಯನ್ನು ಒಳಗೊಂಡಿದೆ. ಅನಂತರಾಯರು ವಯಸ್ಸಾದ ಕಾಲಕ್ಕೂ ಮನೆ ತನ್ನ ಅಧಿಕಾರದಲ್ಲಿಯೇ ನಡೆಯಬೇಕೆಂದು ಆಶಿಸುವುದು ಪುರುಷವಾದಿತನವನ್ನು ಪರಿಚಯಿಸುತ್ತದೆ. ಈ ವ್ಯವಸ್ಥೆಯೊಳಗೆ ಹೆಣ್ಣು ಎಲ್ಲಾ ಆಸೆ ಕನಸುಗಳನ್ನು ಬದಿಗೊತ್ತಿ ಬದುಕಬೇಕಿದೆ. ಒಂದು ವೇಳೆ ವ್ಯವಸ್ಥೆಯನ್ನು ಮೀರಿ ನಡೆದರೆ ಮಗನಾದ ಶಿವುವಿನ ಸಂಬಂಧವನ್ನೇ ಕಡಿದುಕೊಂಡವರು ಅಧಿಕಾರಶಾಹಿತ್ವದಿಂದ ಮಗಳ ಸಂಬಂಧವನ್ನೇ ಕೊನೆಗಾಣಿಸುತ್ತಿದ್ದರು ಎಂಬುದು ಕಾದಂಬರಿಯ ಅಧ್ಯಯನದಿಂದ ವೇದ್ಯವಾಗುತ್ತದೆ. ಹೆಣ್ಣು ತವರು ಮನೆಯ ವಿರೋಧ ಕಟ್ಟಿಕೊಂಡು ಬದುಕುವುದು ಸಮಾಜದಲ್ಲಿ ಸುಲಭವಾದುದಲ್ಲ. ಅಂತಹ ಹೆಣ್ಣಿಗೆ ಭದ್ರತೆಯು ಇರುವುದಿಲ್ಲ. ಅದನ್ನು ಅರಿತಂತೆ ಮಾಲತಿ

ತಂದೆಗೆ ಪ್ರಾಧಾನ್ಯತೆ ಕೊಡುವಲ್ಲಿ ಹೆಣ್ಣು ತಂದೆಯಾಗಲೀ, ಗಂಡನಾಗಲೀ ಎಲ್ಲಾ ಕಡೆಯು ಬಂಧಿಯೇ. ಅವಳ ಜೀವನದಲ್ಲಿ ತವರು ಮನೆ ಮುಖ್ಯವೆಂಬುದನ್ನು ಕಾದಂಬರಿ ಒಳಗೊಂಡಿದೆ.

**ಕಸೂತಿ**

ಲೇಖಕಿಯು ನಿನ್ನೆಯ ನೆನಪುಗಳಿಂದ ನಾಳೆಯ ಕನಸುಗಳೊಂದಿಗೆ ಕಲಾತ್ಮಕ ದಾರಗಳೆಂಬ ಪಾತ್ರಗಳಿಂದ ಕಸೂತಿಯನ್ನು ಎಣೆದಿದ್ದಾರೆ. ಲೇಖಕಿಯೇ ಹೇಳಿಕೊಂಡಿರುವಂತೆ 'ಇಲ್ಲಿರುವ ಎಲ್ಲ ಪಾತ್ರಗಳು ಕಲ್ಪಿತ ಒಂದು ವೇಳೆ ಅವು ಯಾರನ್ನಾದರೂ ಹೋಲುತ್ತಿದ್ದರೆ ಅದು ಆಕಸ್ಮಿಕ' ಎಂದು ಕಾದಂಬರಿಯ ಪ್ರಾರಂಭದಲ್ಲಿ ಹೇಳಿಕೊಂಡಿದ್ದಾರೆ. ಇವರ ಈ ಮಾತನ್ನು ಗಮನಿಸಿದಾಗ ಕಾದಂಬರಿಯು ಕಲ್ಪಿತ ಚಿತ್ರಣವಾಗಿ ತೋರುತ್ತದೆ. ಕಾದಂಬರಿಯ ಕೊನೆಯಲ್ಲಿ ಲೇಖಕಿ ನಾಳೆಯ ಕನಸುಗಳನ್ನು ಬಿಚ್ಚಿಡುವಾಗ ಕಾದಂಬರಿಯ ಪಾತ್ರಗಳೊಡನೆ ಕಲೆಯುವುದು ಕಾದಂಬರಿ ನೈಜ ಘಟನೆಗೆ ಹತ್ತಿರವಾಗಿರುವಂತೆ ಕಾಣುತ್ತದೆ. ಅದನ್ನು ಕಾದಂಬರಿಯ ಪ್ರಾರಂಭದ 'ಸೂಜಿಯ ಅರಿಕೆ'ಯಲ್ಲಿ "ಈ ಕಾದಂಬರಿಯನ್ನು ನಾನೇ ಪೂರ್ಣ ಬರೆದಿದ್ದೇನೆ. ಅಂದರೆ ಅದು ಪೂರ್ಣ ಸತ್ಯವಲ್ಲ. ಇದು ಸಮಷ್ಠಿಯ ಸೃಷ್ಟಿ. ನನ್ನೊಳಗೆ ನನಗಿಂತ ಹಿರಿಯರೂ, ಕಿರಿಯರೂ ಹಲವರಿದ್ದಾರೆ. ಅವರ ಅತ್ಯಂತ ಖಾಸಗಿಯಾದ ಅಂತರಂಗದ ಅನುಭವಗಳು ನನಗೆ ಅವರು ನನ್ನ ಅಸ್ತಿತ್ವವನ್ನೇ ಮರೆತು ಹಿಗ್ಗಿದ್ದ: ದುಃಖಿಸಿದ, ಅಪರೂಪಕ್ಕೆ ಸಿಕ್ಕಿದ ಗೆಳೆಯ–ಗೆಳತಿಯರೊಡನೆ ಬೆರೆತ ಒಂದು ದಿವ್ಯ ಕ್ಷಣದಲ್ಲಿ ದಕ್ಕಿವೆ. ಆ ಅನುಭವದ ಎಳೆಗಳನ್ನು ನನ್ನ ಕಣ್ಣಿಗೆ ಪೋಣಿಸಿಕೊಂಡು ನನ್ನ ಅನುಭವದ ಕೊನೆಯಿಲ್ಲದ ಬಟ್ಟೆಯಲ್ಲಿ ಹರಿದಾಡಿಸಿದ್ದೇನೆ ಅಷ್ಟೆ"[೧೫] ಎಂಬ ಲೇಖಕಿಯ ಮಾತುಗಳು ದ್ವಂದ್ವತೆಯನ್ನು ಉಂಟುಮಾಡುತ್ತದೆ. ಕಾದಂಬರಿಗಾರ್ತಿಯ ಮೇಲಿನ ಎರಡು ಹೇಳಿಕೆಯನ್ನು ಅರ್ಥೈಸಿಕೊಂಡಾಗ ಕಂಡದ್ದನ್ನು, ಕಾಣದ್ದನ್ನು ಅನುಭವಗಳ ಚರ್ಚೆಯಿಂದ ಸೂಜಿಯಾಗಿ 'ಕಸೂತಿ' ಕೆಲಸ ನಡೆಸಿರುವುದು ಕಂಡುಬರುತ್ತದೆ.

ವಿವಾಹ ಮತ್ತು ವಿದ್ಯಾಭ್ಯಾಸದ ಹಿನ್ನೆಲೆಯಲ್ಲಿ ಬ್ರಾಹ್ಮಣ ಜನಸಮುದಾಯದ ಅದರಲ್ಲು ವಿಶೇಷವಾಗಿ ಹೆಂಗಸರ ಬದುಕನ್ನು ವಿವಿಧ ಕಾಲಘಟ್ಟಗಳಲ್ಲಿ ಚರ್ಚಿಸುವುದು ಕಾದಂಬರಿಯ ಮುಖ್ಯ ವಸ್ತುವಾಗಿದೆ. ಬಾಲ್ಯವಿವಾಹ, ವೈಧವ್ಯ, ಸಾಮರಸ್ಯವಿಲ್ಲದ ಜೀವನ, ಅನಕ್ಷರತೆ, ಆರ್ಥಿಕ ಅವಲಂಬನೆ ಅಂದಿನ ಸಾಮಾಜಿಕ ಸನ್ನಿವೇಶಗಳಲ್ಲಿ ಕಾಲಾಂತರಕ್ಕೆ ತಕ್ಕಂತೆ ಮಾನವನ ಬದುಕಿನಲ್ಲಿ ನಡೆಯುವ ವರ್ಣನೆಗಳಾದರೂ "ಇವು ಯಾವುವೂ ಇಲ್ಲಿ ಉಗ್ರ ಸ್ವರೂಪ ಪಡೆಯುವ ಸಮಸ್ಯೆಗಳಾಗುವುದಿಲ್ಲ. ಇಲ್ಲಿನ ಹೆಂಗಳೆಯರ ಜೀವನಗಳು ನಿಧಾನವಾಗಿ ಕಾಲದ ಗತಿಯಲ್ಲಿ ವಿದ್ಯೆ ಮತ್ತು ಆರ್ಥಿಕ ಸೂತ್ರ ಹಿಡಿದು ಬದಲಾವಣೆಗೆ ಎಡೆಮಾಡಿಕೊಡುತ್ತದೆ"[೧೬] ಎಂದು ಹೇಳಿರುವ

ಲೇಖಕಿಯ ಅಭಿಪ್ರಾಯ ಸ್ವಾವಲಂಬಿ ಹೆಂಗಳೆಯರ ಬದುಕಿನ ಚಿತ್ರಣ ಕಾಲಾಂತರದಲ್ಲಿ ಹೇಗೆ ಭಿನ್ನವಾಗಿ ನಿಲ್ಲುತ್ತದೆ, ಭಿನ್ನತೆಯಲ್ಲು ಕಲಿಯುವ, ದುಡಿಯುವ ಹಂಬಲ ಸ್ಥಾಪಿತಗೊಂಡಿರುವುದನ್ನು ಒಳಗೊಂಡಿದೆ.

ಕಾದಂಬರಿಯ ಕೇಂದ್ರಭಾಗವೇ ಹೆಣ್ಣು. ಕಾದಂಬರಿಯು ಮೂರು ಅಧ್ಯಾಯಗಳಂತೆ ಭಾಗಗಳನ್ನು ಹೊಂದಿದ್ದು ಕ್ರಮವಾಗಿ ಸರಸ್ವತಿ, ಸ್ವರ್ಣಾ, ವೀಣಾ–ವಿದ್ಯಾ–ಕಲಾ ಎಂಬ ಹೆಸರುಗಳಿಂದ ತೆರೆದುಕೊಳ್ಳುತ್ತದೆ. ಇಲ್ಲಿ ಹೆಣ್ಣು ಪ್ರಧಾನ ಸ್ಥಾನದಲ್ಲಿದ್ದಾಳೆ ಎಂಬುದಕ್ಕೆ ಈ ಹೆಸರುಗಳೇ ಸಾಕ್ಷಿಯಾಗಿವೆ. ಪನ್ನೇರಳೆ, ಜಾಜಿಕಲ್ಲು, ತಾವರೆಕೆರೆ, ಮಂಡ್ಯ, ಬೆಂಗಳೂರು, ಮೈಸೂರು ಈ ಊರುಗಳ ಸುತ್ತ ಬಿಚ್ಚಿಡುವ ಕಥೆಯು ಮೂರು ಕುಟುಂಬವನ್ನು ಪರಿಚಯಿಸುತ್ತದೆ. ಜಾಜಿಕಲ್ಲಿನ ದೊಡ್ಡರಾಮಯ್ಯನವರಿಗೆ ಇಬ್ಬರು ಮಕ್ಕಳು.  ಒಂದು ಗಂಡು, ಒಂದು ಹೆಣ್ಣು, ಗಂಡು ಮಗನ ಇಬ್ಬರು ಗಂಡು ಮಕ್ಕಳಾದ ಮೂರ್ತಿ, ಸ್ವಾಮಿ ಇವರಿಗೆ ಪನ್ನೇರಳೆಯ ಶಾನುಭೋಗರಾದ ಚೆಲುವಯ್ಯ–ವಿಶಾಲಾಕ್ಷಿಯರ ಇಬ್ಬರು ಹೆಣ್ಣು ಮಕ್ಕಳಾದ ಸೀತೆ, ಲಕ್ಷ್ಮಿಯರನ್ನು, ಚಲುವಯ್ಯನವರ ತಂಗಿ ಮಗಳಾದ ಚನ್ನಕ್ಕಿ (ಚನ್ನಲಕ್ಷ್ಮಿ)ಯನ್ನು ದೊಡ್ಡರಾಮಯ್ಯನವರ ಮಗಳಾದ ರಾಮಲಕ್ಷ್ಮಿಯ ಮಗ ನಂಜುಂಡನಿಗೆ ಕೊಟ್ಟು ಮದುವೆ ಮಾಡಲಾಗುತ್ತದೆ. ಇದು ಒಂದು ಕುಟುಂಬವಾದರೆ ಮೈಸೂರಿನಲ್ಲಿ ಉಪಾದ್ರು ಶಾಮಣ್ಣ ಮತ್ತು ಉಪಾದ್ರು ರಾಮಣ್ಣ ಅಣ್ಣ–ತಮ್ಮ, ಉಪಾದ್ರು ರಾಮಣ್ಣನ ಮಗಳು ಜಯಮ್ಮ, ಶಾಮಣ್ಣನ ಮಗ ವೆಂಕಣ್ಣ ಈತನಿಗೆ ಶಾನುಭೋಗರ ಮಗಳಾದ ಸರಸ್ವತಿಯನ್ನು ಮದುವೆ ಮಾಡುವಲ್ಲಿ ಮತ್ತೊಂದು ಕುಟುಂಬ ಮತ್ತು ಅರಸರ ಮನೆಯ ಬದುಕನ್ನು ಮಗದೊಂದು ಕುಟುಂಬವಾಗಿ ರಚಿತವಾಗಿದೆ. ಈ ಕುಟುಂಬಗಳ ಒಳಗೆ ಅನೇಕ ಪಾತ್ರಗಳು ಬಂದುಹೋಗುತ್ತವೆ.

ಕಾದಂಬರಿಯ ಹಂದರ ಸಿನಿಮಾ ಮಾದರಿಯಂತೆ ಕಂಡುಬರುತ್ತದೆ. ಒಂದು ಕುಟುಂಬದ ಕಥೆ ಎಣೆಯುತ್ತ ಮತ್ತೊಂದು ಕುಟುಂಬದ ಕಥೆಯನ್ನು ಬಿಚ್ಚಿಡುವ ಕಸೂತಿ ಕೆಲಸ ಚೆನ್ನಾಗಿ ನಡೆದಿದೆ. ಲಕ್ಷ್ಮಿಯ ಮಗನಿಗೆ ಸರಸ್ವತಿ ಮಗಳನ್ನು ಕೊಟ್ಟು ಮದುವೆ ಮಾಡುವ ಮೂಲಕ ಎರಡು ಕುಟುಂಬಗಳು ಬೆಸೆದುಕೊಂಡು ಆನಂತರ ಕಾದಂಬರಿಯ ಹದ ಸಲೀಸಾಗಿ ಸಾಗಿದೆ. ಮೂರು ತಲೆಮಾರಿನ ಬದುಕನ್ನು ಒಳಗೊಂಡಿರುವ ಕಾದಂಬರಿಯು ಸರಸ್ವತಿ ಬಾಲ್ಯ ವಿವಾಹದೊಂದಿಗೆ ಪ್ರಾರಂಭವಾಗಿ ಸರಸ್ವತಿ ಮೊಮ್ಮಗಳ ಅಂತರ್‌ಜಾತಿ ಪ್ರೇಮ ವಿವಾಹದಲ್ಲಿ ಅಂತ್ಯವಾಗುತ್ತದೆ. ಇಲ್ಲಿ ವಿವಾಹದ ಮಹತ್ವ ಸಾಮಾಜಿಕ ಬದಲಾವಣೆಯತ್ತ ಸಾಗಿರುವುದರ ಅರಿವಾಗುತ್ತದೆ.

'ಸರಸ್ವತಿ ೧೯೦೯' ಎಂದು ಪ್ರಾರಂಭವಾಗುವ ಕಾದಂಬರಿ ಭಾರತವು ಬ್ರಿಟಿಷ್ ವಸಾಹತುಷಾಹಿ ಆಳ್ವಿಕೆಗೆ ಒಳಪಟ್ಟಿದ್ದ ಕಾಲದಿಂದ ಪ್ರಾರಂಭವಾಗಿರುವುದನ್ನು ಹೇಳುತ್ತವೆ. ಅಂದಿನ ಬಾಲ್ಯ ವಿವಾಹ ಪದ್ಧತಿಯನ್ನು ಪರಿಚಯಿಸುತ್ತದೆ. ಸರಸ್ವತಿ–ವೆಂಕಣ್ಣ, ವೆಂಕಣ್ಣನ ತಂಗಿಯರಾದ ಸಾವಿತ್ರಿ(ಸಾತು)–ಕೃಷ್ಣಸ್ವಾಮಿ, ಪಾರ್ವತಿ(ಪಾತು)–ಸುಬ್ಬಣ್ಣ, ಸೀತೆ–ಮೂರ್ತಿ, ಲಕ್ಷ್ಮಿ–ಸ್ವಾಮಿ, ಚನ್ನಲಕ್ಷ್ಮಿ–ನಂಜುಂಡ ಇವರೆಲ್ಲ ಬಾಲ್ಯ ವಿವಾಹಕ್ಕೆ ಒಳಪಟ್ಟವರೆ. ಶಾಮಣ್ಣನ ತಂಗಿಯು "ಆ ಜಯನಿಗೆ ಇನ್ನೂ ಮದುವೆ ಮಾಡಲಿಲ್ಲ, ಅವಳ ವಾರಿಗೆಯವಳೇ ಸರಸಿ(ಸರಸ್ವತಿ) ಸಂಸಾರ ಮಾಡ್ತಾಳೆ"[೧೭] ಎಂದು ಹೇಳುವ ಮಾತು ಬಾಲ್ಯವಿವಾಹಕ್ಕೆ ಇದ್ದ ಮಹತ್ವವನ್ನು ಹೇಳುತ್ತದೆ. ಮುಂದೆ ಬುದ್ಧಿಹೀನನನ್ನು ಮದುವೆಯಾಗುವ ಜಯಮ್ಮ ಬಾಲ್ಯವಿವಾಹದ ವಯಸ್ಸು ಮೀರಿದುದ್ದರ ಫಲವೆಂಬಂತೆ, ಅವಳ ಜೀವನವೇ ಶೂನ್ಯದೆಡೆಗೆ ಸಾಗುತ್ತದೆ. ನಾಗವೇಣಿ ಬಾಲ್ಯವಿವಾಹವಾಗಿಯೂ ಆ ಪರಿಸರಕ್ಕೆ 'ಹನ್ನೆರಡು ವರ್ಷವಾದರೂ ಮದುವೆಯಾಗಿಲ್ಲ' ಎಂಬ ಉದ್ಗಾರ ಆಶ್ಚರ್ಯ–ಅದ್ಭುತವೆಂಬಂತೆ ಹೇಳಿರುವ ಲೇಖಕಿ ಅಂದಿನವರ ಹಿಯಾಳಿಕೆಯ ಮಾತಾಗಿಯು ಬಿಂಬಿಸಿದೆ. ಇಂತಹವರ ನಡುವೆ ಅರಳಿದ ಕುಸುಮ ಸ್ವರ್ಣಾ. ಇವಳ ಕಾಲಕ್ಕೆ 'ಈಗಲೇ ಮದುವೆ ಬೇಡ' ಎಂದು ಹೇಳುವ ಧೈರ್ಯವಾದರೂ ಕಂಡುಬರುತ್ತದೆ. ಆದರೂ "ಸ್ವರ್ಣಗೌರಿ ಎಂಬ ಎಳೆಯ ಕೋಳಿಯನ್ನು ಯಾರೂ ಸಾಂಬಾರ ಅರೆಯಲೋ ಬಿಡಲೋ ಎಂದು ಕೇಳಲಿಲ್ಲ. ನಾನು ಬಿ.ಎ. ಮಾಡುತ್ತೇನೆ ಎಂಬ ಅವಳ ಸಣ್ಣದನಿಯ ಕೋರಿಕೆಗೆ ಯಾರೂ ಗಮನ ಕೊಡಲೇ ಇಲ್ಲ"[೧೮] ಎನ್ನುವಲ್ಲಿ ಬಹುಪಾಲು ಹೆಣ್ಣುಮಕ್ಕಳ ಅನುಭವ ಹೇಳಿದೆ. ಸ್ವರ್ಣಾಳ ಕಾಲಕ್ಕೂ ಹೆಣ್ಣಿನ ಮಾತಿಗೆ ಬೆಲೆ ಇರಲಿಲ್ಲವೆಂಬುದಾಗಿದೆ. ಸ್ವರ್ಣಾಳ ಮಕ್ಕಳ ಕಾಲಕ್ಕೆ ತಾವು ಮೆಚ್ಚಿದವನನ್ನು ಮದುವೆಯಾಗುವಲ್ಲಿ ಇರುವ ಪ್ರೌಢತೆ, ಪಡೆದ ಉನ್ನತ ವ್ಯಾಸಾಂಗದಿಂದಲು ಇವರ ವಯಸ್ಸನ್ನು ನಿಗದಿ ಮಾಡಬಹುದು. ಸಮಾಜದಲ್ಲಿ ಬೇರು ಬಿಟ್ಟಿದ್ದ ವಿವಾಹದ ಕಲ್ಪನೆ ಸರಸ್ವತಿ ಕಾಲದಿಂದ, ಕಲಾ ಕಾಲದವರೆಗೆ ಅನಿವಾರ್ಯವು, ಒತ್ತಡವು, ಆಯ್ಕೆಯಾಗಿ ಹೊಂದಿಕೊಳ್ಳುವುದನ್ನು ಅಥವಾ ಬದಲಾಗುವುದನ್ನು ಕಾಣುತ್ತೇವೆ.

ಅಂತರ್‌ಜಾತಿ ವಿವಾಹ ಕಾದಂಬರಿಯ ಮುಖ್ಯ ಭಾಗವಾಗಿದೆ. ಕಲಾ–ಜಾನ್‌ರಾಮ್‌ಪ್ರಕಾಶ್‌ರ ಪ್ರೇಮ ಹಿರಿಯ ಮನಸ್ಸುಗಳ ಬದಲಾವಣೆಗೆ ಸಾಕ್ಷಿಯಾಗಿದೆ. ಈ ಮೂಲಕ ಸಮಾಜದ ಒಳಮನಸ್ಥಿತಿಗಳ ವಿರೋಧದ ನೆಲೆಯನ್ನು ಲೇಖಕಿ ಚಿತ್ರಿಸಿದ್ದಾರೆ. ಮೈಸೂರಿನ ಅರಸು ಮನೆತನದವರಾದ ನರಸಿಂಹರಾಜೇಅರಸ್–ದೇವಾಜಮ್ಮಣಿಯವರಿಗೆ ಮೂರು ಹೆಣ್ಣು, ಪಾತಮ್ಮಣ್ಣಿ, ಜಯಮ್ಮಣ್ಣಿ, ಶಾಂತಮ್ಮಣ್ಣಿ. ಪಾತಮ್ಮಣ್ಣಿ ಲಾಯರ್ ಸುಬ್ಬರಾಜೇಅರಸರನ್ನು ಮದುವೆಯಾಗಿ

ಮೂರು ಮಕ್ಕಳ ತಾಯಿಯಾಗುತ್ತಾಳೆ. ತಂದೆ–ತಾಯಿ ಮರಣದಿಂದ ತಂಗಿಯರ ಜವಾಬ್ದಾರಿ ಪಾತಮ್ಮಣ್ಣಿ–ಮನೆ ಅಳಿಯ ಸುಬ್ಬರಾಜೇಅರಸರದಾಗಿರುತ್ತದೆ. ಶಾಂತಮ್ಮಣ್ಣಿ ಬೇರೆ ಜಾತಿಯ ಹುಡುಗನಾದ ಪ್ರೊಫೆಸರ್ ಗುರುಪ್ರಸಾದ್‌ನನ್ನು ಮದುವೆಯಾಗುವುದು ಅಗ್ರಹಾರದವರ ಬಾಯಿಗೆ ಆಹಾರವಾಗುತ್ತದೆ. 'ಕಾಲೇಜು ಶಿಕ್ಷಣ ಪಡೆದವರ ಪಾಡು ಇದೆ' ಎಂದು ನಿರ್ಧರಿಸುವ ಮಂದಿಯ ನಡುವೆ ಸ್ವರ್ಣಾಳಂತಹ ಕಾಲೇಜು ಶಿಕ್ಷಣಕ್ಕೆ ಅಡ್ಡಿಯಾಗುತ್ತದೆ. ಸ್ವರ್ಣಾಳ ಗೆಳತಿಯಾದ ಮೀರಾಳ ತಂದೆ–ತಾಯಿ ಕಾರು ಅಪಘಾತದಲ್ಲಿ ಮಡಿಯುತ್ತಾರೆ. ಪ್ರೊಫೆಸರ್ ಜಾನ್‌ರಾಮ್‌ಪ್ರಸಾದ್ ನೆರವಿನಿಂದ ಕ್ರಿಶ್ಚಿಯನ್ ಹಾಸ್ಟೆಲ್ ಸೇರುವುದು ಅವಳ ಪಾಲಿಗೆ ಅನಿವಾರ್ಯ ಆಗುತ್ತದೆ. ಆದರೆ ಇವರ ಸಂಬಂಧದ ಬಗ್ಗೆ ಸಮಾಜದಲ್ಲಿ ಅಪಪ್ರಚಾರ ಉಂಟಾಗುತ್ತದೆ. ಅದನ್ನು ತಪ್ಪಿಸಲು ಇಬ್ಬರೂ ಮದುವೆಯಾಗುತ್ತಾರೆ. ಸೀತೆಯ ಮಗ ಡಾಕ್ಟರ್ ಮೋಹನ್, ಶಿವನಂಜೇಗೌಡರ ಮಗಳು ಡಾಕ್ಟರ್ ನಳಿನಿಯನ್ನು ಪ್ರೇಮಿಸಿ ಮದುವೆಯಾಗುತ್ತಾರೆ. ಕಲಾ–ಜಾನ್‌ರಾಮ್‌ಪ್ರಕಾಶನೊಂದಿಗಿನ ಪ್ರೀತಿ ಅವರ ಕುಟುಂಬದ ಮಟ್ಟಿಗೆ ಹೊಸದಾಗಿದ್ದು ಹಿಂದಿನವರ ದಾರಿ ಹಿಡಿದು ಬಂದಿರುವುದಾಗಿದೆ. ಈ ಅಂತರ್‌ಜಾತಿವಿವಾಹ ಗಂಡು–ಹೆಣ್ಣು, ಜಾತಿ–ಧರ್ಮ ಎಂಬ ಭೇದವಿಲ್ಲದೆ ಸಮಾನತೆಯ ಅಂಶವನ್ನು ಸಾರುತ್ತದೆ. ಹೆಣ್ಣು ತನಗಿಂತ ಕಡಿಮೆ ಓದಿರಬೇಕು, ಇಂತಹ ಯಾವುದೇ ಪ್ರಮೇಯಗಳು ಕಂಡುಬರುವುದಿಲ್ಲ. ಸಮಾಜದಲ್ಲಿ ಸುಶಿಕ್ಷಿತರ ಆಲೋಚನೆಗಳು ಸಮಾನತೆಗೆ ಒತ್ತು ಕೊಡುತ್ತವೆ.

ಕಾಲ ಯಾವುದೇ ಆದರೂ ಹೆಣ್ಣು ಜೀವನದ ಒಂದು ಭಾಗ ಎಂಬುದನ್ನು ಕಾದಂಬರಿ ಒಳಗೊಂಡಿದೆ. ಪುರುಷಪ್ರಧಾನ ಸಮಾಜದ ಒಳಗೆ ಬದುಕುವ ಇಲ್ಲಿನ ಹೆಂಗಳೆಯರು ಎಲ್ಲಿಯೂ ಪ್ರತಿಭಟಿಸಿದವರಲ್ಲ. ಬದುಕು ಇಲ್ಲಿನವರ ಪ್ರಮುಖ ಸವಾಲಾಗಿರುತ್ತದೆ. ಪಾರ್ವತಮ್ಮ, ಸುಬ್ಬಮ್ಮರೆಂಬ ಹಿರಿಯ ತಲೆಮಾರಿನವರು ವಿಧವೆಯರಾಗಿ ವ್ಯವಸ್ಥೆಗೆ ಬದ್ಧರಾಗಿ ಕಂಡುಬರುತ್ತಾರೆ. ಗಂಡನಿಲ್ಲದೆ ಶಾಮಣ್ಣನವರಲ್ಲಿ ಆಶ್ರಯವಾಸಿಗಳಾಗಿ ಬದುಕುತ್ತಾರೆ. ಇವರು ಜಟಿಲ ಸಂಪ್ರದಾಯವಾದಿ ಪ್ರಯೋಗಿಗಳಾಗಿದ್ದಾರೆ. ಸೀತೆ, ನಾಗವೇಣಿ, ಸರಸ್ವತಿ, ಸಾವಿತ್ರಿ, ಜಯಮ್ಮ, ಸ್ವರ್ಣಾ, ವೀಣಾ, ವಿದ್ಯಾ, ಕಲಾ ಸಂಸಾರದ ಜಂಜಾಟದಿಂದ ಹೊರಬರುವವರಾಗುತ್ತಾರೆ. ರಾಮಲಕ್ಷ್ಮಿ, ಚನ್ನಲಕ್ಷ್ಮಿ, ಲಕ್ಷ್ಮಿ ಪಾತು ಪಾತ್ರಗಳು ಮರೆಯಾಗುವ ಮೂಲಕ ಗೃಹಲಕ್ಷ್ಮಿ ಜೀವನಕ್ಕೆ ಹೊಂದಿಕೊಂಡವರಾಗಿದ್ದಾರೆ. ಅನಿವಾರ್ಯತೆ–ಅವಶ್ಯಕತೆಗಳ ಬದುಕಿನ ಹೋರಾಟದಲ್ಲಿ ಇಲ್ಲಿನ ಹೆಂಗಳೆಯರು ಸಾಗುತ್ತಿದ್ದಾರೆ. ಸ್ವರ್ಣಾ, ಜಯಮ್ಮ, ಸೀತೆ, ಸಾವಿತ್ರಿ, ಸರಸ್ವತಿಯರು ಸ್ವಾವಲಂಬಿ ಜೀವನಕ್ಕೆ ಅಣಿಯಾಗುವಲ್ಲಿ ಬದುಕಿನಲ್ಲಿ ಅಸಂತೃಪ್ತಿಯನ್ನು ಕಂಡವರು. ಬದುಕಿನ ಹಡಗು

ಮುಳುಗುವ ಸಂದರ್ಭದಲ್ಲಿ ಹುಟ್ಟು ಹಾಕುವವರಾಗಿದ್ದಾರೆ. ಇವರ ನಡುವೆ ಸರಸ್ವತಿಯ ಅತ್ತಿಗೆಯಾದ ರಾಮಲಕ್ಷ್ಮೀಯಂತಹ ಹೆಣ್ಣು ಸದ್ದುಗದ್ದಲವಿಲ್ಲದೆ, ಹೆಣ್ಣಿನ ಜವಾಬ್ದಾರಿಯನ್ನು ಪೂರ್ಣಗೊಳಿಸುವಂತೆ ಮಕ್ಕಳನ್ನು ಹೆತ್ತು ಬದುಕುವ ಮುಗ್ಧೆಯ ಪರಿಚಯವೂ ಇದೆ. ಹೆಣ್ಣಾದ ಮಾತ್ರಕ್ಕೆ ಮಕ್ಕಳನ್ನು ಹೆತ್ತು ಸಮಜಾಯಿಸುವ ಭಾರಹೊರುವ ರಾಮಲಕ್ಷ್ಮಿ, ವೆಂಕಣ್ಣನವರಿಂದ 'ಹಂದಿ ಚೀಕರ ಬೀಡಿಗೆ' ಹೋಲಿಸಿಕೊಂಡು ಅವಮಾನಿತ ಸ್ಥಾನದಲ್ಲಿ ಹೆಣ್ಣು ಬದುಕುವುದೂ ಇದೆ. ಒಟ್ಟಾರೆ ಎಲ್ಲಾ ರೀತಿಯ ಹೆಂಗಳೆಯರು ಕಾದಂಬರಿಯಲ್ಲಿ ಸಿಗುತ್ತಾರೆ. ಈ ಮೂಲಕ ಸಾಮಾಜಿಕ ವ್ಯವಸ್ಥೆಯಲ್ಲಿ ಬದುಕುತ್ತಿದ್ದವರ ಪರಿಚಯವಾಗುತ್ತದೆ.

'ಕಸೂತಿ' ಇಲ್ಲಿನವರ ಸ್ತ್ರೀಲೋಕದ ಅವಿಭಾಜ್ಯ ಅಂಗ. ಪುರುಷ ಸಾಹಿತ್ಯದ ಆಡಳಿತ ಜಟಿಲವಾಗಿದ್ದ ಕಾಲದಲ್ಲಿ ಹೆಣ್ಣು ಮನೆ, ತೋಟ, ಗದ್ದೆಗಳಲ್ಲಿ ದುಡಿಯುವುದು. ಬಿಡುವಿನ ವೇಳೆಯಲ್ಲಿ ಮೇಲ್ವರ್ಗದವರು ಕಸೂತಿ ಕೆಲಸದಲ್ಲಿ ಮಗ್ನರಾಗುತ್ತಿದ್ದರು. ಹೆಣ್ಣಿನ ಓದುಬರಹಕ್ಕೆ ಸ್ವಾತಂತ್ರ್ಯವಿಲ್ಲದ ಕಾಲದಲ್ಲಿ ಕಸೂತಿ ಸೀತೆ, ಪಾತಮ್ಮಣ್ಣಿ, ಜಯಮ್ಮ, ಸರಸ್ವತಿಯವರ ಬದುಕಿಗೆ ಆಧಾರವಾಗಿರುವುದನ್ನು ಕಾಣುತ್ತೇವೆ. ನಾಗವೇಣಿ ಹೊಲಿಗೆ ಸಮಾಜ ಕಟ್ಟುವ ಮೂಲಕ ಆಸರೆಯಾದರೆ, ಸೀತೆ ಹೊಲಿಗೆ ಹೇಳಿಕೊಡುವ ಕೆಲಸಕ್ಕೆ ಸೇರುತ್ತಾಳೆ. ಮುಂದೆ 'ಸೀತಾ ಸದನ'ವೆಂಬ ಹೊಲಿಗೆ ಸಮಾಜ ಅನೇಕರ ಬದುಕಿಗೆ ಆಸರೆಯಾಗುತ್ತದೆ. ಹೊಸ ಹೊಸ ಮಾದರಿಗಳ ವಿನ್ಯಾಸದ ಪರಿಚಯ ಪಡೆಯುತ್ತ ಜಯಮ್ಮ-ಸರಸ್ವತಿಯರ ಕೈಚಳಕ ಮನೆಯ ವಸ್ತ್ರಗಳ ಮೇಲೆ ಹರಿದಾಡುತ್ತವೆ. ಸರಸ್ವತಿಯ ಮೊಮ್ಮಕ್ಕಳ ಮೈಮೇಲು "ಕೊರಳಿನಲ್ಲಿ ಲೇಸಿನಿಂದ ಹೆಣೆದ ಗುಲಾಬಿ ಹೂವುಗಳಿರುವ ಲಂಗ, ಲೇಜಿ-ಡೇಜಿ ಹೊಲಿಗೆಯ ಚಿಕ್ಕ ಚಿಕ್ಕ ಹೂಗಳನ್ನು ಕಾಲರಿಗೆ ಹಾಕಿದ ಗೌನು. ಬಣ್ಣ ಬಣ್ಣದ ಆರು ಪೀಸಿನ ಫ್ರಾಕ್, ನಾಲ್ಕು ಪೀಸಿನ ಫ್ರಾಕ್ ಎಂದು ಬಗೆಬಗೆಯ ಪ್ರಯೋಗಗಳನ್ನು ಮಾಡಿ ಎರಡು ಬೆಕ್ಕಿನ ಮರಿಗಳ ಹಾಗೆ ಓಡಾಡುವ ವೀಣಾ-ವಿದ್ಯಾರಿಗೆ ತೊಡಿಸಿ ನೋಡುತ್ತಾಳೆ. ಚೆನ್ನಾಗಿರುವ ಉಡುಪುಗಳನ್ನು ವೀಣಾಳದನ್ನು ವಿದ್ಯಾಗೆ, ವಿದ್ಯಾಳದನ್ನು ಕಲಾಗೆ"[೧೯] ಹೀಗೆ ನವೀನ ಮಾದರಿಗಳ ಪ್ರಯೋಗ ಮೊಮ್ಮಕ್ಕಳ ಬಟ್ಟೆಯ ಮೇಲೆ ಪ್ರಯೋಗಿಸುತ್ತಿದ್ದ ಸರಸ್ವತಿ ಜೀವನಕ್ಕೆ ಕಸೂತಿ ಆಧಾರವಾಗುತ್ತದೆ.

ಮುಂದೆ ಮೊಮ್ಮಗಳಿಗೆ ಅಜ್ಜಿಯ ಬ್ರಹ್ಮವಿದ್ಯೆಗಳು ಬಳುವಳಿಯಾಗುತ್ತವೆ. 'ಲಾವಣ್ಯ ಮ್ಯಾಚಿಂಗ್ ಸೆಂಟರ್' ತೆರೆಯುವ ಮೂಲಕ ಸರಸ್ವತಿಯ ಕಸೂತಿ ಆಧುನೀಕರಣಗೊಂಡು ವಿದ್ಯಾಳ ಜೀವನಕ್ಕೆ ಆಧಾರವಾಗುವಲ್ಲಿ ಕಾದಂಬರಿಯ ಹೆಸರಿಗೆ ಸಾರ್ಥಕತೆ ತಂದಿದೆ. ತಲೆಮಾರುಗಳು ಎಷ್ಟೇ ಉರುಳಿದರು ಹರಿದ ಬದುಕಿಗೆ ತೇಪೆ ಹಾಕುವ ಸುಂದರ ಹೊಲಿಗೆಗಳ ಕಸೂತಿ ಡಾಕ್ಟರು,

ಇಂಜಿನಿಯರುಗಳ ನಡುವೆಯು ವಿದ್ಯಾಳಂತಹ ಹಲವು ಹೆಂಗಳೆಯರಿಗೆ ಬದುಕಿನ ಮಾರ್ಗವಾಗಿದೆ. ವಾಸ್ತವ ಜಗತ್ತಿನಲ್ಲಿಯೂ ನವೀನ ಮಾದರಿಗಳ ಕಸೂತಿಯ ಅಬ್ಬರ ಅಧಿಕ ಸಂಪಾದನೆಯ ವ್ಯವಹಾರವಾಗಿದೆ. ವೇಗವಾಗಿ ಆದಾಯ ತರುವಂಥ ಕಸುಬುಗಳಲ್ಲಿ ಕಸೂತಿ ಒಂದಾಗಿರುವುದನ್ನು ಮ್ಯಾಚಿಂಗ್ ಸೆಂಟರ್‌ಗಳ ಹಾವಳಿಯಿಂದಲೇ ತಿಳಿಯುತ್ತದೆ.

ಈ ಕಾದಂಬರಿಯು ಹೆಣ್ಣಿನ ಜೀವನದ ಪ್ರತಿ ಹಂತವನ್ನು ತೋರಿಸುತ್ತದೆ. ಸೀತೆ, ಲಕ್ಷ್ಮಿ, ಚನ್ನಲಕ್ಷ್ಮಿಯರ ಕೆರೆಪಕ್ಕದ ಆಟಗಳು, ವೀಣಾ ವಿದ್ಯಾರವರ ಅಜ್ಜಿ ತಾತನ ಮೈಸೂರಿನ ಮನೆಯಲ್ಲಿ ಕಳೆಯುವ ದಿನಗಳು ಬಾಲ್ಯದ ನೆನಪುಗಳನ್ನು ಮರುಕಳಿಸುತ್ತವೆ. ಸ್ವರ್ಣಾಳ ಕಾಲೇಜು ದಿನಗಳ ಸಂಭ್ರಮ, ಗಂಭೀರ ಆಚರಣೆಗಳಿಲ್ಲದೆ ವೈಧವ್ಯದಿಂದ ಪಾರಾದ ಸಾವಿತ್ರಿ, ಸರಸ್ವತಿ, ವೆಂಕಣ್ಣ ಮೂಲಕ ಮೂರನೇ ತಲೆಮಾರು ಕಂಡ ವೃದ್ಧಾಪ್ಯದ ಜೀವನ ಹೀಗೆ 'ಹಣ್ಣೆಲೆ ಉದುರಿ ಹೊಸ ಚಿಗುರನ್ನು' ಆಹ್ವಾನಿಸುತ್ತ ಸಂಬಂಧಕ್ಕಿಂತಲು ಸ್ವಾತಂತ್ರ್ಯಕ್ಕೆ ಹೆಚ್ಚು ಮನ್ನಣೆ ಕೊಡುವುದು ಕಾದಂಬರಿಯಲ್ಲಿ ಬಿಂಬಿತವಾಗಿದೆ. ಇದಕ್ಕೆ ಕಲಾಳ ವಿವಾಹ ಸಾಕ್ಷಿಯಾಗಿದೆ. ಸ್ವರ್ಣಾಳ ಗಂಡ ಶಂಕರನು ಮದುವೆಗೆ ಹೋಗದಿರುವಲ್ಲಿ ಪುರುಷ ಪರವಾದಿಯ ಮುಖ ಪರಿಚಯವಾಗುತ್ತದೆ. ಕಲಾಳ ಪ್ರೀತಿಗೆ ಸ್ವರ್ಣಾಳ ಸಲುಗೆಯೇ ಕಾರಣ ಎಂದು ಹೆಂಡತಿ ಮೇಲೆ ರೇಗುತ್ತಾನೆ. ಅವಳನ್ನು ತಂದು ಗೃಹಬಂಧನದಲ್ಲಿಡುವ ಸೂಚನೆ ಕೊಡುತ್ತಾನೆ. ಇಲ್ಲಿ ಆಧುನಿಕತೆ ಎಷ್ಟೇ ಬದಲಾದರು ಪುರುಷವಾದಿಗಳು ಬದಲಾಗುವುದಿಲ್ಲ, ಅದನ್ನು ಒಡೆದು ಹಾಕಬೇಕಾದವರು ಹೆಂಗಳೆಯರು. ಈ ನಿಟ್ಟಿನಲ್ಲಿ ಸ್ವಾವಲಂಬಿ ಬದುಕು ಸಹಕಾರಿಯಾಗುತ್ತದೆ ಎಂಬ ಸೂಕ್ಷ್ಮ ವಿಚಾರಗಳನ್ನು ಒಳಗೊಂಡಿದೆ.

ಕಾದಂಬರಿಯ ಕಥಾವಸ್ತು ಕಲಾಳ ಮದುವೆಯೊಂದಿಗೆ ಮುಕ್ತಾಯವಾದರೂ ಲೇಖಕಿಯ 'ನಾಳೆಯ ಕನಸುಗಳು' ಏನಾಗಿದ್ದವು ಎಂಬುದನ್ನು ಹಂಚಿಕೊಂಡಿದ್ದಾರೆ. ಸೀತಾ ಸದನದ ಸೀತಾಲಕ್ಷ್ಮಿಯ ಮಗಳು ಶಾರದಾರನ್ನು ಅತ್ತೆ ಎನ್ನುವ ಲೇಖಕಿ, ಮಗಳೊಂದಿಗೆ ಮದುವೆಗೆ ಹೋಗುವಲ್ಲಿ ಈ ಕಥೆಯನ್ನು ಮುಗಿಸುವ ಸಂದರ್ಭ ಹೇಳಿದ್ದಾರೆ. ಮದುವೆಯ ಗದ್ದಲಗಳ ನಡುವೆ ತೆರೆಯುವ ಹೊಸ ಕಥೆಯ ಬಾಗಿಲು "ನಿನ್ನೆಯ ನೆನಪುಗಳ ಲೋಕದಿಂದ ನಾಳೆಯ ಕನಸುಗಳ ಲೋಕಕ್ಕೆ ಕರೆದೊಯ್ಯುತ್ತಿವೆ ಸಾವಿರ ಬಣ್ಣದ ನೂಲುಗಳು ಅದರಲ್ಲಿ ಸೇರಿ ಅನಂತರದ ಬಟ್ಟೆಗೆ ಕಸೂತಿ ಹಾಕುತ್ತವೆ"[೨೦] ಎನ್ನುವಲ್ಲಿ ಮತ್ತೊಂದು ಕಥೆಯನ್ನು ಬರೆಯುವ ಹಂಬಲದೊಂದಿಗೆ ಕಾದಂಬರಿ ಅಂತ್ಯವಾಗುತ್ತದೆ. ಮದುವೆಗೆ ಹೋಗುವ ಲೇಖಕಿ ಈ ಕಥೆಗೆ ಮುಕ್ತಾಯ ಹಾಡಿದರೆ ಮದುವೆಯಿಂದಲೆ ಮತ್ತೊಂದು ಕಥೆಗೆ ನಾಂದಿ ಹಾಡಿರುವ ಸೂಚನೆ ನೀಡಿದ್ದಾರೆ. ಮದುವೆಗೂ–ಲೇಖಕಿಗೂ ಅವಿನಾಭಾವ ಸಂಬಂಧವಿರುವಂತೆ ತೋರುತ್ತದೆ.

ಈ ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಕಾಲದ ಹೆಂಗಳೆಯರ ಹೊಸ ಬದುಕು ಅನಾವರಣಗೊಂಡಿದೆ. ಹೆಣ್ಣೆಂದರೆ ಅಧೀನಳಾಗಿಯೇ ಬದುಕುತ್ತಿದ್ದಳು, ಬದುಕಬೇಕು ಎಂಬುವವರ ನಡುವೆಯೂ ಮನೆಯ ವಾತಾವರಣ, ಪರಿಸರ ಸ್ತ್ರೀಸಮಾನತೆಯಿಂದಿದ್ದರೆ ಅಲ್ಲಿ ಹೆಣ್ಣು ನೆಮ್ಮದಿಯಿಂದ ಉಸಿರಾಡುತ್ತಾಳೆ ಎಂಬುದಕ್ಕೆ ಈ ಕಾದಂಬರಿ ಸಾಕ್ಷಿಯಾಗಿದೆ. ಸಂಪ್ರದಾಯಸ್ಥ ಕುಟುಂಬಗಳೇ ಕಂಡುಬಂದರೂ ಸಂಪ್ರದಾಯಕ್ಕೂ ಚ್ಯುತಿಬಾರದಂತೆ ಸ್ವಾವಲಂಬಿ ಬದುಕಿನೆಡೆಗೆ ಪ್ರಯತ್ನಿಸಿರುವುದು ಲೇಖಕಿಯ ಜಾಣ್ಮೆಯನ್ನು ಪ್ರದರ್ಶಿಸುತ್ತದೆ. ಮೊದಲ ತಲೆಮಾರಿನ ಹೆಂಗಳೆಯರು ವಿವಾಹವಾದ ನಂತರ ಶಿಕ್ಷಣ ಪಡೆದವರು. ಬಾಲ್ಯ ವಿವಾಹವಾದರೂ ಇವರಿಗೆ ಶಿಕ್ಷಣ ಪಡೆಯುವ ಅವಕಾಶ ದೊರೆಯುತ್ತದೆ. ಉನ್ನತ ವ್ಯಾಸಂಗವಿಲ್ಲದಿದ್ದರೂ ಸ್ವಾವಲಂಬಿ ಬದುಕಿಗೆ ಸಾಕಾಗುವಷ್ಟು ಮಾತ್ರವಿದೆ. ಇಲ್ಲಿ ಹೆಣ್ಣಿಗೆ ಕಲಿಸುವ ಉದ್ದೇಶದಿಂದ ಶಿಕ್ಷಣ ಕಂಡುಬರುವುದಿಲ್ಲ. ಸಿಕ್ಕ ಅವಕಾಶದಲ್ಲಿ ಅವಳು ಶಿಕ್ಷಣ ಪಡೆಯುವುದು, ಅದಕ್ಕೆ ಹಿರಿಯರು ಸಮ್ಮತಿಸುವುದು ಆಗಿದೆ. ಆನಂತರ ಎಲ್ಲಾ ಹೆಂಗಳೆಯರಂತೆ ಗಂಡ, ಮಕ್ಕಳು ಸಂಸಾರದಲ್ಲಿ ತಲ್ಲೀನರಾಗಬೇಕಾದಂತೆ ಬದುಕಬೇಕಾಗಿದೆ. ಮೊದಲ ತಲೆಮಾರಿನ ಕಾಲದಲ್ಲಿ ಎಲ್ಲೂ ವ್ಯವಸ್ಥೆಯನ್ನು ಮೀರಿ ನಡೆಯುವ ಪ್ರಯತ್ನಗಳಿಲ್ಲ. ಅದಕ್ಕೆ ಬಾಲ್ಯ ವಿಧವೆಯಾದ ಸಾವಿತ್ರಿಗಾಗಲೀ, ಮದುವೆಯಾಗಿದ್ದು ವಿಧವೆಯಂತೆ ಬದುಕುತ್ತಿದ್ದ ಕೊನೆಗೂ ವಿಧವೆಯೂ ಆದ ಜಯಮ್ಮಳಿಗಾಗಲೀ ಮರುಮದುವೆಯ ಆಲೋಚನೆ ಮಾಡದಿರುವುದರಿಂದಲೇ ತಿಳಿಯುತ್ತದೆ. ಹಾಗೆಯೇ ಸಂಪೂರ್ಣ ಸ್ತ್ರೀತ್ವವನ್ನು ಕಸಿದುಕೊಳ್ಳುವ ಪ್ರಯತ್ನವೂ ಇಲ್ಲ. ಸಂಪ್ರದಾಯದ ಹೆಸರಿನಲ್ಲಿ ಮೂಢನಂಬಿಕೆಗೆ ಒಳಗಾಗಿ ಮಡಿ ಆಚರಣೆಯ ಹೇರಿಕೆ ಇದ್ದರೂ ಅವುಗಳಿಗೆ ಬಲಿಯಾಗದೇ ಇರುವುದನ್ನು ಸಾವಿತ್ರಿ ಪಾತ್ರದಿಂದ ತಿಳಿಯುತ್ತದೆ. ಇವರ ಪುರುಷಪ್ರಧಾನ ವ್ಯವಸ್ಥೆಯಿಂದ ಹೊರ ಉಳಿಯುವಿಕೆಗೆ ತಂದೆಯ ಸಹಕಾರವಿದ್ದು ಅಲ್ಲಿಯೂ ಪುರುಷ ನಿರ್ಮಿತ ಹೆಣ್ಣಾಗಿಯೇ ಕಂಡುಬರುತ್ತಾಳೆ. ಇದರಿಂದ ಏಕಾಂಗಿಯಾಗಿ ಹೋರಾಡುವುದು ಹೆಣ್ಣಿಗೆ ಕಷ್ಟವಾಗಿತ್ತು ಎಂಬುದು ತಿಳಿದುಬರುತ್ತದೆ. ಹೆಣ್ಣು ಎಂದರೆ ರೂಪಿತಳಾಗಿ ಕೊಟ್ಟಷ್ಟನ್ನು ಮಾತ್ರ ಪಡೆದು ತೃಪ್ತಿಪಡೆಯುವುದು ಮಾತ್ರ. ಏಕಾಂಗಿಯಾದರೂ ಪರಾವಲಂಬಿಯಾಗದೇ ಸ್ವಾವಲಂಬಿಯಾಗಿ ಬದುಕುವ ಮಾರ್ಗ ಕಂಡುಬರುತ್ತದೆ. ಇಲ್ಲಿ ಸ್ವ ಬದುಕಿಗಾಗಿ ಹೋರಾಡುವ ರೂಪ ಕಂಡುಬರುವುದಿಲ್ಲ. ವಾಸ್ತವ ಸಮಾಜದಲ್ಲಿ ಸುಶಿಕ್ಷಿತರ ಕುಟುಂಬವನ್ನು ಬಯಸುವಂತಹ ವಿಚಾರವಾಗಿದೆ. ಕಸೂತಿ ಕಾದಂಬರಿಯು ಕಾಲ ಬದಲಾದಂತೆ ಜನ ಬದಲಾಗುತ್ತಾರೆ ಎಂಬುದಕ್ಕಿಂತಲೂ ಸ್ತ್ರೀಯರ ಮನೋಭಿವ್ಯಕ್ತಿ ಬದಲಾಗುವ ಮೂಲಕ ಕಾಲ ಬದಲಾಗುವುದನ್ನು ಒಳಗೊಂಡಿದೆ. ಮೂರನೇ ತಲೆಮಾರಿಗೆ ಸೇರಿದ ವೀಣಾ, ವಿದ್ಯಾ, ಕಲಾ ಪುರುಷ ನಿರ್ಮಿತ ಎಂಬ ಕೊಂಡಿಯಿಂದ

ಹೊರಬರುವವರಾಗಿರುತ್ತಾರೆ. ಯಾವುದೇ ಸಹಾಯ ಹಸ್ತವಿಲ್ಲದೇ ಸ್ವ–ಸಾಮರ್ಥ್ಯದಿಂದ ಬದುಕುವ ಮಾರ್ಗ ಕಂಡುಬರುತ್ತದೆ. ಕಲಾ ಅಂತರ್ಜಾತಿ ವಿವಾಹವಾಗುವಲ್ಲಿ ತಂದೆಯ ಅನುಪಸ್ಥಿತಿ ಉತ್ತಮ ಉದಾಹರಣೆಯಾಗಿದೆ.

## ಅಸ್ಪೃಶ್ಯರು

ಶ್ರೇಣಿಕೃತ ವರ್ಗದ ವ್ಯವಸ್ಥೆಯಲ್ಲಿ ತಮ್ಮ ಕೆಳಗಿನವರನ್ನು ಮುಟ್ಟಬಾರದ–ಮುಟ್ಟಲಾಗದ ಸ್ಥಿತಿ ಬೆಳೆದುಕೊಂಡೇ ಬರುತ್ತಿದೆ. ಪ್ರತಿಯೊಂದು ವರ್ಗವು ತಮ್ಮ ಶೋಷಿತ ನೆಲೆಯನ್ನು ಛಿದ್ರಗೊಳಿಸುವತ್ತ ಗಮನಹರಿಸದೆ ತಮ್ಮ–ತಮ್ಮ ಶ್ರೇಷ್ಠತೆಯನ್ನೇ ಪ್ರತಿಪಾದಿಸಿಕೊಂಡು ಬರುತ್ತಿವೆ. ‘ಅಸ್ಪೃಶ್ಯರು’ ಕಾದಂಬರಿ ಈ ನೆಲೆಯಲ್ಲಿಯೇ ಸಾಗಿದ್ದು ಜಾತಿ ವ್ಯವಸ್ಥೆಗೆ ಮಾತ್ರ ಸೀಮಿತವಾಗದೆ ಬೇರೆ–ಬೇರೆ ಆಯಾಮಗಳಲ್ಲಿ ಸ್ತ್ರೀಲೋಕದ ಅಸ್ಪೃಶ್ಯತೆಯನ್ನು ತೆರೆದಿಡಲು ಪ್ರಯತ್ನಿಸಿದೆ.

ಪುರುಷಪ್ರಧಾನ ವ್ಯವಸ್ಥೆ ಹಾಕಿಕೊಟ್ಟಿರುವಂತಹ ಸಂಪ್ರದಾಯ ಚೌಕಟ್ಟಿನಲ್ಲಿ ಮಡಿ–ಮೈಲಿಗೆಗಳನ್ನೇ ಉಸಿರಾಗಿಸಿಕೊಂಡು ಬದುಕುತ್ತಿರುವ ಮೇಲಿನ ವರ್ಗದ ಪಾರ್ತಕ್ಕ ಕಾದಂಬರಿಯ ಕೇಂದ್ರಬಿಂದುವಾಗಿ ಕಾಣುತ್ತಾರೆ. ಇವರ ಮಗ ಭಾಸ್ಕರ ಕೆಳವರ್ಗದವರನ್ನು ಸಮಾನವಾಗಿ ಕಾಣಬೇಕೆಂದು ಜಾತಿವ್ಯವಸ್ಥೆ ವಿರುದ್ಧ ಹೋರಾಡುವ ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸುತ್ತಾನೆ. ಅದಕ್ಕಾಗಿ ಕೆಳಜಾತಿ ಎನಿಸಿದ ಹೆಣ್ಣನ್ನು ಮದುವೆಯಾಗಿ ಆಧುನಿಕ ಮೌಲ್ಯಗಳ ಪ್ರತಿಬಿಂಬವಾಗಿ ಕಾಣಿಸಿಕೊಂಡರೆ, ಪಾರ್ತಕ್ಕ ಸಾಂಪ್ರದಾಯಿಕ ಮೌಲ್ಯಗಳ ಪ್ರತಿಬಿಂಬವಾಗಿ ಕಾಣುತ್ತಾಳೆ.

ಮಗನ ವರ್ತನೆ ಸಹಿಸದ ಪಾರ್ತಕ್ಕ, ವಾಸುದೇವರಾಯ ಮತ್ತು ಗೌರಮ್ಮನ ಮನೆ ಸೇರುತ್ತಾಳೆ. ಇವರ ಮಕ್ಕಳು ಶೀನ, ಸರೋಜ, ಶಿವ, ಶಾಮಿ, ಜಯ, ಪುಟ್ಟ, ರತ್ನ. ಈ ಮಕ್ಕಳ ಪರಿವಾರ ಪ್ರಶ್ನೆಗಳ ಮೂಲಕ ಸಂಪ್ರದಾಯದ ಬೇರನ್ನೇ ಅಲುಗಾಡಿಸುವಂತೆ ಕಾದಂಬರಿ ಬಿಂಬಿಸಿದೆ. ಇವರು ಮಡಿ, ಮೈಲಿಗೆ, ಮೇಲು, ಕೀಳು ಎಂದು ಮಾತನಾಡುವವರ ಮುಖ ಬಿಳಿಚಿಕೊಳ್ಳುವಂತೆ ಮಾಡುವವರು. ಈ ಕಾದಂಬರಿಯಲ್ಲಿ ಪಾರ್ತಕ್ಕ ಮುಖ್ಯಪಾತ್ರಧಾರಿಯಾದರೆ ಇತರ ಪಾತ್ರಗಳೂ ಗೌಣವೆನಿಸುವುದಿಲ್ಲ. ಕೆಳವರ್ಗಸ್ಥರಿಂದ–ಮೇಲಿನ ವರ್ಗ, ಮಕ್ಕಳ ಪರಿವಾರದವರೆಗೂ ಜಾತಿ ಮತ್ತು ಹೆಣ್ಣನ್ನು ಕುರಿತ ಅಸ್ಪೃಶ್ಯತೆಯ ಆಯಾಮಗಳನ್ನು ಈ ಕಾದಂಬರಿ ಬಿಡಿಸಿ ಹೇಳುತ್ತದೆ.

ಬ್ರಾಹ್ಮಣರು ಶೂದ್ರರನ್ನೂ, ಶೂದ್ರರು ಕೂಸಾಳುಗಳನ್ನು, ಕೂಸಾಳುಗಳು ಕೊರಗರನ್ನು ಮುಟ್ಟಿಸಿಕೊಳ್ಳುವುದಿಲ್ಲ ಎಂಬ ವರ್ಗಾಧಾರಿತ, ವರ್ಣಾಧಾರಿತ ತಾರತಮ್ಯಗಳು ಕಾದಂಬರಿಯುದ್ದಕ್ಕೂ ಸಾಗಿದೆ.

ಮನುಷ್ಯತ್ವವೇ ಇಲ್ಲದಂತೆ ಕಂಡುಬರುವ ಪಾತ್ರಗಳಲ್ಲಿ ಕೆಳವರ್ಗದವರೆನಿಸಿದ ರುಕ್ಕು, ಕೂಸ, ಮಂಜ, ಸೀತು, ಇವರು ಶೋಷಣೆಗೊಳಪಡುವ ಹಾಗೂ ಶೋಷಿಸಲ್ಪಡುವ ಪಾತ್ರಗಳಾಗಿ ಕಂಡುಬರುತ್ತಾರೆ. ಶೂದ್ರಳಾದ ರುಕ್ಕು ಗೌರಮ್ಮ, ಪಾರ್ತಕ್ಕರಿಂದ ಮಾರು ದೂರು ನಿಲ್ಲುವವಳು. ಕೂಸ ಕುಡಿದ ಕಾಫಿ ಲೋಟವನ್ನು ತೊಳೆಯಲು ಹಿಂಜರಿಯುತ್ತಾಳೆ. "ಅವನ ಎಂಜಲನ್ನು ನನ್ನ ಕೈಯಿಂದ ತೊಳೆಸಬೇಕಂತ ಮಾಡಿದಿರ? ನಾ ತೊಳೆಯುವುದಿಲ್ಲ"[೨೧] ಎಂಬ ಮಾತು ಆಡುತ್ತಾಳೆ. ರುಕ್ಕುವನ್ನು ಪಾರ್ತಕ್ಕ ಮುಟ್ಟಿಸಿಕೊಳ್ಳಬಾರದೆಂದು ಮಕ್ಕಳಿಗೆ ಹೇಳಿ ತನ್ನ ಮಡಿ-ಮೈಲಿಗೆ ಮೆರೆದೆರೆ ರುಕ್ಕು ತನ್ನನ್ನು ಕುರಿತು ಮನುಷ್ಯಳು ಎಂಬ ಉದ್ಗಾರ ಎತ್ತಿರುತ್ತಾಳೆ. ಆ ಕ್ಷಣವೇ ಮಾನವೀಯತೆಯನ್ನು ಮರೆತು ಕೊರಗರ ಗಾಂಚಾಲಿಯೊರ್ವಳ ಸೆರಗು ತಾಕಿದ್ದಕ್ಕೆ ಸ್ನಾನಮಾಡಬೇಕೆನ್ನುತ್ತಾಳೆ. ಇಂತಹ ಮಾತು ಒಬ್ಬೊರನ್ನೊಬ್ಬರು ಶೋಷಿಸಿಕೊಂಡು ಬದುಕುವುದರಲ್ಲೇ ತೃಪ್ತಿ ಕಾಣುತ್ತಿರುವವರು ಎಂದೆನಿಸುತ್ತದೆ. ಹೆಂಗಸರು ಮಾತ್ರವಲ್ಲದೇ ಗಂಡಸರೂ ಅದೇ ನಿಟ್ಟಿನಲ್ಲಿ ಯೋಚಿಸುವವರೇ ಎಂಬುದಕ್ಕೆ ಮಂಜ ಸಾಕ್ಷಿಯಾಗಿದ್ದಾನೆ. ಬೇರೆ ಸಂಸಾರ ಹೂಡಿರುವ ಭಾಸ್ಕರನ ಮನೆಗೆ ಆಗಾಗ್ಗೆ ಹೋಗಿಬರುವ ವಾಸುದೇವರಾಯರನ್ನು ಕುರಿತು ಶೂದ್ರ ಜಾತಿಗೆ ಸೇರಿದ ಮಂಜನು ಅಯ್ಯಾ ಅವರು ಹೋಗುವುದು ತನಗೂ ಇಷ್ಟವಿಲ್ಲವೆಂಬುದನ್ನೂ "ಕೊರರು ಎಂದರೆ ಅಂಥಿಂಥ ನೀಚ ಜಾತಿಯ? ನಾವು ಕೂಡ, ಯಾಕೆ ಕೂಸಾಳುಗಳು ಕೂಡ, ಅವನ್ನು ಮುಟ್ಟಿಸಿಕೊಳ್ಳುವುದಿಲ್ಲ"[೨೨] ಎನ್ನುವ ಮಾತು ಇಲ್ಲಿನ ಜಾತಿವ್ಯವಸ್ಥೆಗೆ ಅಂಟಿಕೊಂಡಿರುವ ಸಾಮಾನ್ಯ ಜನರ ವರ್ತನೆಯನ್ನು ಹೇಳುತ್ತದೆ.

ಒಂದುಕಡೆ ಜಾತಿ-ಜಾತಿಗಳ ನಡುವೆ ನಡೆಯುವ ಶೋಷಿತ ಅಸ್ಪೃಶ್ಯರು ಕಂಡುಬಂದರೆ, ಮತ್ತೊಂದೆಡೆ ಪುರುಷಶಾಹಿ ಸಮಾಜ ತಮ್ಮ ಅನುಕೂಲಕ್ಕೆ ತಕ್ಕಂತೆ ಹಾಕಿರುವಂತಹ ಸಂಪ್ರದಾಯದ ಸುಳಿಯಲ್ಲಿ ಸಿಲುಕಿ, ಅವುಗಳನ್ನು ಉಳಿಸಿ-ಬೆಳೆಸಿಕೊಂಡು ಬರುತ್ತಿರುವ ಸ್ತ್ರೀಯರು ತಮಗರಿವಿಲ್ಲದೆಯೇ ತಮ್ಮನ್ನು ತಾವೇ ಶೋಷಿಸಿಕೊಂಡು ಹೇಗೆ ಅಸ್ಪೃಶ್ಯರಾಗುತ್ತಿದ್ದಾರೆ ಎಂಬುದು ಬಿಂಬಿತವಾಗಿದೆ.

ಮೇಲುನೋಟಕ್ಕೆ "ಭಾಸ್ಕರನೆಂಬ ಹೊಸವಿಚಾರದ ಯುವಕ, ಸಂಪ್ರದಾಯದ ಚಿಪ್ಪಿನಿಂದ ಹೊರಬಂದು ಕೊರಗರ ಹೆಣ್ಣೊಂದನ್ನೂ ಮದುವೆಯಾದ ಘಟನೆಯ ಸುತ್ತ ಹೆಣೆದ ಕಥೆ

ಎಂದೆನಿಸಿದರೂ ಕಾದಂಬರಿ ಅದಷ್ಟನ್ನೇ ಹೇಳಿ ವಿರಮಿಸಿ ಬಿಡುವುದಿಲ್ಲ. ಅಸ್ಪೃಶ್ಯತೆಯನ್ನು ಬೇರೆ ಬೇರೆ ಆಯಾಮಗಳಲ್ಲಿ ತೆರೆದಿಡಲು ಪ್ರಯತ್ನಿಸುತ್ತದೆ. ಸ್ತ್ರೀಲೋಕದ ಮೈನೆರೆಯುವಿಕೆ, ಮಗುವನ್ನು ಹೆತ್ತಸೂತಕ–ಈ ಮುಂತಾದ ಸಂದರ್ಭಗಳಲ್ಲಿ ಮೇಲಿನ ಶ್ರೇಣಿಯ ಸ್ತ್ರೀಯರಿಗೆ ಕೆಳಶ್ರೇಣಿಯ ಸ್ತ್ರೀಯರೇ ಜೊತೆಯಾಗುವ ವ್ಯಂಗ್ಯವನ್ನು ಕಾದಂಬರಿ ತಣ್ಣಗೆ ಚಿತ್ರಿಸುತ್ತದೆ".[೨೩] ಇದರ ಜೊತೆಗೆ ದಾಂಪತ್ಯದಲ್ಲಿ ಹೆಣ್ಣಿನ ಬಂಧನ ಅವಿವಾಹಿತ ಹೆಣ್ಣಿನ ಮನೋಭಾವಗಳು ಬಿಂಬಿತವಾಗಿವೆ.

ಸಂಕುಚಿತ ಮನೋಭಾವದವರಾಗಿ ಕಾಣುವ ಪಾರ್ತಕ್ಕ, ಗೌರಮ್ಮರಂತಹ ಸಂಪ್ರದಾಯಸ್ಥರು ಒಂದು ರೀತಿಯಲ್ಲಿ ಶೋಷಿತರೇ. ಹೊರಜಗತ್ತನ್ನೇ ಕಾಣದ ಇವರು ಗಂಡ, ಮನೆ, ಸಂಸಾರ, ಮಕ್ಕಳು ಎಂಬ ನಾಲ್ಕುಗೋಡೆಯ ಒಳಗೇ ಬೆಳೆದವರು. ತಮ್ಮ ಹಿಂದಿನಿಂದ ಬೆಳೆದು ಬಂದಿರುವ ರೀತಿ–ರಿವಾಜುಗಳನ್ನು ಪಾಲಿಸಿಕೊಂಡು ಹೋಗುವುದು ಬಿಟ್ಟರೆ, ಮನೆಕೆಲಸದಲ್ಲಿ ಮಗ್ನರಾಗುತ್ತಿದ್ದವರು ಬೇರೆ ವಿಚಾರಗಳಿಗೆ ತಲೆ ಕೆಡಿಸಿಕೊಳ್ಳುತ್ತಿದ್ದವರಲ್ಲ. ತಮ್ಮ ವಿಚಾರಗಳನ್ನೂ ಮುಂದಿನ ಪೀಳಿಗೆಯವರಿಗೆ ತುಂಬುವುದೇ ಇವರ ಜವಾಬ್ದಾರಿಯಾಗಿತ್ತು. ಶೋಷಿಸುವ ಪ್ರತಿಯೊಬ್ಬ ಸ್ತ್ರೀಯರೂ ಸಮಾಜದ ಬಂಧನದಲ್ಲಿದ್ದವರೇ. ಹೆಣ್ಣು ಎಂದರೆ ಹೀಗೇ ಇರಬೇಕು, ಗಂಡನ ಹದ್ದುಬಸ್ತಿನಲ್ಲಿರಬೇಕು, ಎಂಬ ಮಾತುಗಳನ್ನು ಕೇಳಿಸಿಕೊಂಡು, ಪಾಲಿಸಿಕೊಂಡು ಬಂದವರೇ ಆಗಿರುತ್ತಾರೆ. ಇಂಥವರಲ್ಲಿ ಪಾರ್ತಕ್ಕನ ಬಗ್ಗೆ ಕನಿಕರ ಹುಟ್ಟಿಸುತ್ತದೆ. ಇವರು ಸಮಾಜದ ಭಯದಲ್ಲಿ ಬದುಕುತ್ತಿರುವವರು ತಮ್ಮ ಸ್ವಾರ್ಥಕ್ಕಾಗಿ ಏನನ್ನೂ ಬಯಸದೇ ಗಂಡ, ಮಕ್ಕಳ ಸುಖ ಭವಿಷ್ಯಕ್ಕಾಗಿಯೇ ಚಿಂತಿಸುವವರು. ಇದು ಭಾಸ್ಕರನ ಮೇಲೆ ಅತೀವವಾದ ಪ್ರೀತಿ ಇಟ್ಟುಕೊಂಡಿದ್ದರೂ ಆತನ ಮನೆಗೆ ಹೋಗದಿರುವುದರಲ್ಲೇ ಅರಿವಾಗುತ್ತದೆ.

ಶಿಕ್ಷಣದ ಅಗತ್ಯತೆಯನ್ನೂ ಲೇಖಕಿ ಪರೋಕ್ಷವಾಗಿ ಹೇಳಿದ್ದಾರೆ. 'ದೇವರ ಹೆಸರಿನಲ್ಲಿ ಮನುಷ್ಯ ಮಾಡಿಕೊಂಡಿರುವ ಜಾತಿವ್ಯವಸ್ಥೆ, ಸಂಪ್ರದಾಯ, ಮಡಿ–ಮೈಲಿಗೆಗಳನ್ನೂ ಕಿತ್ತುಹಾಕಬೇಕು' ಎನ್ನುವ ಭಾಸ್ಕರ. ಭಾಸ್ಕರನಿಗೆ ಪ್ರೋತ್ಸಾಹ ನೀಡುವ ವಾಸುದೇವರಾಯರು ಸಂಪ್ರದಾಯ, ಜಾತಿವ್ಯವಸ್ಥೆಯ ಮೌಲ್ಯಗಳನ್ನೇ ಅಲುಗಾಡಿಕುವಂತಹ ಮಾತುಗಳನ್ನಾಡುವ ಶೀನ, ಶಿವು, ಪುಟ್ಟ, ಸರೋಜ ಇವರ ಜ್ಞಾನ ತಿಳುವಳಿಕೆ, ಅರಿವು, ವಿಶಾಲ ಮನೋಭಾವ ಶಿಕ್ಷಣದ ಅಗತ್ಯತೆಯನ್ನೂ ಹೇಳುತ್ತದೆ. 'ಕೂಸ' ಸತ್ತಾಗ, ಪಾರ್ತಕ್ಕ ಬ್ರಹ್ಮ ಬರೆದಿದ್ದ ಅನ್ನಿಸುತ್ತೆ ಎಂದಾಗ ಶಿವ "ಹಾಗಾದರೆ ಬ್ರಹ್ಮನಿಗೆ ಮಡಿ ಇಲ್ಲ ಅಂತಾಯಿತು, ಕೂಸನ ಹಣೆಗೂ ಬರೆಯಬೇಕಾದರೆ?"[೨೪] ಎಂಬ ಪ್ರಶ್ನೆ ಪಾರ್ತಕ್ಕನನ್ನು ಮೌನಿಯಾಗಿಸುತ್ತದೆ. ಶೀನ, ವಾಸುದೇವರಾಯರು ಭಾಸ್ಕರನಂತಹ ಆಲೋಚನೆ ಹೊತ್ತವರೇ. ಭಾಸ್ಕರನ ನಡಿಗೆಯಲ್ಲಿ ವಾಸುದೇವರಾಯರು ಇದ್ದರಾದರೂ

'ಸಂಪ್ರದಾಯದ ಚೌಕಟ್ಟನ್ನು ಮೀರುವ ಮನಸ್ಸು ಮಾಡುವುದಿಲ್ಲ'. ಮಗಳ ಮಾತಿನಿಂದ ಚೌಕಟ್ಟನ್ನು ಮೀರಿ ಮನುಷ್ಯತ್ವ ಪ್ರದರ್ಶಿಸುತ್ತಾರೆ. ಗೌರಮ್ಮನ ಮಕ್ಕಳಲ್ಲಿ ರತ್ನ ತಾಯಿಗೆ ತಕ್ಕ ಮಗಳಾದರೆ, ಸರೋಜ ಸಮಾಜದಲ್ಲಿರುವ ಅನಿಷ್ಟ ಪದ್ಧತಿಗಳ ವಿರುದ್ಧ ಮಾತನಾಡುವವಳು. ಕಾಲೇಜು ಶಿಕ್ಷಣ ಪಡೆದಿದ್ದ ಇವಳು ಭಾಸ್ಕರನ ಹಿತೈಷಿ. ಕೂಸ ಕುಡಿದ ಕಾಫಿಲೋಟ ತೊಳೆಯಲು ಮುಂದಾಗಿದ್ದ ಸರೋಜಳು ಕೊನೆಯವರೆಗೂ ವಿಶೇಷವಾಗಿ ಕಾಣಿಸುತ್ತಾಳೆ. ಭಾಸ್ಕರ ಕೂಸಾಳುಗಳನ್ನು ಎತ್ತಿಕಟ್ಟಿ ಜೈಲುಪಾಲಾದಾಗ ಗರ್ಭಿಣಿಯಾಗಿದ್ದ ಅತ್ತಿಗೆ 'ಕುಮುದಿನಿಯನ್ನೂ ಮನೆಗೇ ಕರೆದು ಕೊಂಡಬರಬೇಕಿತ್ತು' ಎಂದು ಅಣ್ಣನಿಗೆ ಹೇಳುವ ಮಾತು ಎಲ್ಲರನ್ನೂ ಬೆಚ್ಚಿ ಬೀಳಿಸುತ್ತದೆ. ಅಲ್ಲಿಯವರೆಗೂ ಮನುಷ್ಯತ್ವವಿಲ್ಲದಂತೆ ದೂರವಿಟ್ಟಿದ್ದ ಕುಮುದಿನಿಯನ್ನು ವಾಸುದೇವರಾಯರು ಮನೆಗೆ ಕರೆದುಕೊಂಡು ಬರುವಲ್ಲಿಗೆ ಕಾದಂಬರಿ ಅಂತ್ಯಗೊಳ್ಳುತ್ತದೆ.

ಬ್ರಾಹ್ಮಣ ಮಗುವಿನ ಜನನದಿಂದ ಪ್ರಾರಂಭವಾಗುವ ಕಾದಂಬರಿ, ಕೊರತಿ ಜಾತಿಗೆ ಸೇರಿದ ಕುಮುದಿನಿ ಮಗುವಿನ ನಿರೀಕ್ಷಣೆಯಲ್ಲಿ ಅಂತ್ಯವಾಗುವುದು ಬದಲಾವಣೆಯನ್ನು ಸೂಚಿಸುತ್ತದೆ. ಹಿಂದಿನ ಪೀಳಿಗೆಯವರು ಮುಂದಿನ ಪೀಳಿಗೆಗೆ ಮನಸ್ಸಿಲ್ಲದ–ಮನಸ್ಸಿನಿಂದ ಹೊಂದಿಕೊಳ್ಳಲೇಬೇಕು ಎಂಬುದನ್ನು ಲೇಖಕಿ ಹೇಳಿದ್ದಾರೆ.

ಈ ಕಾದಂಬರಿಯಲ್ಲಿ ಸ್ವಾತಂತ್ರ್ಯಪೂರ್ವ ಕಾಲದ ಹೆಂಗಳೆಯರ ಮನೋಭಾವ ಬಿತ್ತರಗೊಂಡಿದೆ. ರೂಢಿ, ಸಂಪ್ರದಾಯ, ನಂಬಿಕೆಗಳನ್ನೇ ಉಸಿರಾಗಿಸಿಕೊಂಡಿರುವ ಪಾರ್ತಕ್ಕ, ಗೌರಮ್ಮ ಎಂಬ ಸ್ತ್ರೀಪಾತ್ರಗಳು 'ಹೆಣ್ಣು ಪುರುಷನ ಅಡಿಯಾಳಾಗಿ ಬದುಕಬೇಕೆಂಬ ಮನೋಭಾವದವರು'. ಇವರ ಇಂತಹ ನಡವಳಿಕೆಗೆ ಸಮಾಜವೇ ಕಾರಣ. ಇವರು ಬೆಳೆದ ವಾತಾವರಣ ಬಂಧನದ ವ್ಯವಸ್ಥೆಗೆ ದೂಡಿದೆ. ಇಂತಹವರ ನಡುವೆ ಸ್ವತಂತ್ರ ಆಲೋಚನೆಗಳಿಲ್ಲದೆ ಸಮಾಜದ ಆತಂಕದಲ್ಲಿಯೇ ಬದುಕುತ್ತಿದ್ದಾರೆ. ಇದು ಒಂದು ಮನೆಯ ಕುಟುಂಬದ ಕಥೆಯಲ್ಲ. ಇಂತಹ ಹೆಂಗಳೆಯರು ಒಂದೊಂದು ಕುಟುಂಬದಲ್ಲೂ ಕಂಡುಬರುತ್ತಾರೆ. ಇವರು ಮುಂದಿನ ಪೀಳಿಗೆಯ ಹೆಣ್ಣು ಮಕ್ಕಳಿಗೆ ಸ್ತ್ರೀ ಅಸ್ತಿತ್ವ ಕಳೆದುಕೊಳ್ಳುವಂತ ಬೋಧನೆಗೆ ಗುರುಗಳಾಗುತ್ತಾರೆ. ಆದ್ದರಿಂದ ಅವರನ್ನು ಎಚ್ಚರಿಸುವ ಕೆಲಸವನ್ನು ಸುಶಿಕ್ಷಿತರು ಮಾಡಬೇಕಾಗಿದೆ. ಆಧುನಿಕ ಮನೋಭಾವದವರು ಅದೇ ಜಾಡಿನಲ್ಲಿ ಸಾಗದೇ, ಮೌನವನ್ನೂ ವಹಿಸದೆ ಹೆಣ್ಣಿನ ಮುಕ್ತಜೀವನಕ್ಕೆ ಸ್ಪಂದಿಸಬೇಕಿದೆ. ಇಲ್ಲಿ ಸರೋಜಳ ಪ್ರತಿಭಟನಾ ಸೊಲ್ಲು ಕೆಳಜಾತಿ ಎನಿಸಿದ ಕುಮುದಿನಿಯನ್ನು ಮನೆಯೊಳಗೆ ತರುವಲ್ಲಿ ಜಾತೀಯತೆ ಹೋಗಲಾಡಿಸಿದ ಕೀರ್ತಿಗಿಂತಲೂ ಸಮಾಜದಲ್ಲಿ

ಕೆಳಸ್ಥಾನದಲ್ಲಿರುವ ಹೆಣ್ಣನ್ನು ಪುರುಷಪ್ರಧಾನ ಸಮಾಜದ ಪರಿಪಾಲಕರು ತಮ್ಮ ಸಂಪ್ರದಾಯಗಳನ್ನು ಒಡೆದು ಸಮಾನತೆಯಿಂದ ಕಾಣುವುದನ್ನು ಸೂಚಿಸುತ್ತದೆ.

ಮೇಲಿನ ಕಾದಂಬರಿಗಳಲ್ಲಿ ಸಂಪ್ರದಾಯದ ಹೆಸರಿನಲ್ಲಿ ಕಳೆದುಹೋಗುತ್ತಿರುವವರ ಬದುಕಿನ ಚಿತ್ರಣವಿದೆ. ದಿನನಿತ್ಯದ ಆಚರಣೆಗಳ ಸುಳಿಯಲ್ಲಿ ಸ್ತ್ರೀ ಸಿಲುಕಿದ್ದಾಳೆ. ಇವುಗಳ ಪೂರ್ವಪರ ತಿಳಿದು ಬದುಕುವ ಎಚ್ಚರಿಕೆ ಕಾಣುತ್ತದೆ. ಮುಖ್ಯವಾಗಿ ನಾಲ್ಕು ಕಾದಂಬರಿಗಳಲ್ಲೂ ಗುರುತಿಸಬಹುದಾದ ಒಂದು ಅಂಶವೆಂದರೆ ಬದಲಾವಣೆ ಎಂಬ ಗಾಳಿ ಬೀಸುತ್ತಿರುವುದು 'ಕಾಲಕ್ಕೆ ತಕ್ಕಂತೆ ಬದುಕಬೇಕು'. ಅಲ್ಲಿ ಲಿಂಗಸಮಾನತೆಯ ಅಂಶಗಳು ನೆಲೆಗೊಳ್ಳಬೇಕು ಎಂಬುದನ್ನು ಸೂಚಿಸುತ್ತವೆ. ಸಂಪ್ರದಾಯದ ಹೆಸರಿನಲ್ಲಿ ಬೆಂದುಹೋಗುವ ಮನಸ್ಥಿತಿಗಳು ಕಾಲಾನಂತರ ಸ್ತ್ರೀ ವಿರೋಧದ ಸಂಪ್ರದಾಯಗಳನ್ನು ಮರೆಮಾಚುತ್ತಾ ಬಂದರೆ ಸ್ತ್ರೀ ಸಮಾಜದ ಬಂಧನದಿಂದ ಮುಕ್ತಿ ಪಡೆಯುತ್ತಾಳೆಯೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಹಿಂದಿನಿಂದಲೂ – ಇಂದಿನವರೆಗೂ ಬಂಧಿಯಾಗಿಯೇ ಬದುಕುತ್ತಿದ್ದಾಳೆ. ಒಂದು ಸಮಸ್ಯೆಯ ಕೊಂಡಿ ಕಳಚುತ್ತಿದ್ದಂತೆ ಮತ್ತೊಂದು ಕೊಂಡಿಗೆ ಆಕೆಯನ್ನು ಸಿಲುಕಿಸುವುದು ಸಮಾಜದ ಗುರಿಯಾಗಿಬಿಟ್ಟಿದೆ. ಸಂಪ್ರದಾಯದ ಹೆಸರಿನಲ್ಲಿದ್ದ ಕಟು ಆಚರಣೆಗಳಿಂದ ಮುಕ್ತಿ ಪಡೆದ ಹೆಣ್ಣು ಆಧುನಿಕ ಕಾಲಕ್ಕೆ ಯಾವ ಬಂಧನದಲ್ಲಿ ಸಿಲುಕುತ್ತಾಳೆ ಎಂಬುದನ್ನು 'ಜಬಾಲಾ', 'ನೆಲೆ–ಬೆಲೆ', 'ಗಂಡಸರು', 'ಬದುಕು' ಕಾದಂಬರಿಗಳಿಂದ ತಿಳಿಯುತ್ತದೆ.

**ಜಬಾಲಾ**

ಸಮಾಜದಲ್ಲಿ ಪಾರಂಪರಗತವಾಗಿ ಬೇರೂರಿರುವ ಜೀವಂತ ಸಮಸ್ಯೆ ಬಂಜೆತನ. ಹೆಣ್ಣನ್ನು ಶೋಷಿಸುವ ವಿವಿಧ ನೆಲೆಗಟ್ಟಿನಲ್ಲಿ ಬಂಜೆತನ ಒಂದಾಗಿದೆ. ಇದರ ಸೂಕ್ಷ್ಮಾತಿಸೂಕ್ಷ್ಮಗಳನ್ನು ಗಮನಿಸದವರು ಅವೈಜ್ಞಾನಿಕ, ಸ್ವಾರ್ಥಪರ ಯೋಚನೆಗಳಿಂದ ಮಕ್ಕಳಿಲ್ಲದ ಹೆಣ್ಣನ್ನು 'ಬಂಜೆ' ಎಂದು ಹೀಗಳೆಯುವ ವಿಕೃತ ಮನಸ್ಥಿತಿಯವರಾಗಿಬಿಟ್ಟಿದ್ದಾರೆ. ಈ ಕಾದಂಬರಿಯ ಮೂಲಕ ಹೆಣ್ಣಿನ ಬಂಜೆಗೆ ಪುರುಷನು ಕಾರಣೀಭೂತನಾಗಿರುತ್ತಾನೆ ಎಂಬುದನ್ನು ತೋರ್ಪಡಿಸಿಕೊಳ್ಳದ ಸಮಾಜದಲ್ಲಿ ಎಚ್.ಎಸ್. ಪಾರ್ವತಿಯವರು ತೋರ್ಪಡಿಸುವ ಪ್ರಯತ್ನ ಮಾಡಿದ್ದಾರೆ. 'ಬಂಜೆ' ಎಂಬ ಮುಖ್ಯವಸ್ತುವನ್ನು ಇಟ್ಟುಕೊಂಡು ಲೇಖಕಿ ಕಾದಂಬರಿ ರಚಿಸಿದ್ದಾರೆ. ಸಮಾಜದಲ್ಲಿ ಬಂಜೆ ಎಂಬ ಆಪಾದನೆಯಿಂದ ನೊಂದು, ಬೆಂದು ಕುಗ್ಗುವ ಹೆಣ್ಣಿನ ಚಿತ್ರಣ ಮಾತ್ರವಲ್ಲದೇ, ನಿರ್ವೀರ್ಯ ಪತಿಯಿಂದ ಬಂಜೆಯಾಗಿದ್ದು ಮತ್ತೊಬ್ಬನಿಂದ ಗರ್ಭಿಣಿಯಾಗುವ ಮೂಲಕ ಸಮಾಜಕ್ಕೆ ತಾನು

ಬಂಜೆಯಲ್ಲ ಎಂಬುದನ್ನು ತೋರಿಸುವುದೇ ಕಾದಂಬರಿಯ ವಸ್ತುವಿನಲ್ಲಿ ವೈವಿಧ್ಯತೆಯನ್ನು ಬಿಂಬಿಸುತ್ತದೆ.

ಕಾದಂಬರಿಯ ನಾಯಕಿ ಗೀತಾ ವಿದ್ಯಾವಂತೆ, ಸುಸಂಸ್ಕೃತೆಯಾದ ಆಧುನಿಕ ಹೆಣ್ಣು. ತಾಯಿಯ ಬಂಧನ, ತಂದೆಯ ಮುಕ್ತ ಸ್ವಾತಂತ್ರ್ಯದಿಂದ ಬೆಳೆದ ಗೀತಾ ಹೆಣ್ಣಿನ ಜೀವನದ ಒಳಗನ್ನು ಅರಿತಿದ್ದವಳು.  ತಂದೆಯೊಂದಿಗೆ ಹರಟುತ್ತ ಚರ್ಚಿಸುತ್ತ ಸಂಶಯಗಳಿಗೆ ಉತ್ತರ ಕಂಡುಕೊಳ್ಳುತ್ತಿದ್ದಳು. ಇದರಿಂದ ಪುರಾಣದಲ್ಲಿ ಹೆಣ್ಣನ್ನು ನಡೆಸಿಕೊಳ್ಳುತ್ತಿದ್ದ ರೀತಿ ಚೆನ್ನಾಗಿ ಅರಿತಿದ್ದರಿಂದ ಸ್ತ್ರೀ ವಿರೋಧಿ ಮಾತುಗಳಿಗೆ ಪ್ರತಿಭಟಿಸುವ ಹೆಣ್ಣಾಗಿದ್ದವಳು. ಮದುವೆ ಇವಳ ಜೀವನವನ್ನು ಕತ್ತಲಾಗಿಸುತ್ತದೆ. ಮದುವೆಯಾದ ಮೇಲೆ ವಿಷಮ ದಾಂಪತ್ಯ, ಅತ್ತೆಯ, ಸಮಾಜದ ಕಿರಿಕಿರಿಯಿಂದ ಗಂಡನ ಮನೆ ಮುಳ್ಳುಗಳ ಮೇಲೆ ನಿಂತತೆ ಭಾಸವಾಗುತ್ತದೆ. ಪಟಪಟ ಮಾತಿನ ಸಾವಿರ ಪ್ರಶ್ನೆಗಳ ಗೀತಾ ಮಂಕುಬಡಿದಂತವಳಾಗುತ್ತಾಳೆ.  ಗೀತಾಳೆ ಹೇಳುವಂತೆ "ಎಂಟೇ ವರ್ಷಗಳಲ್ಲಿ ಜೀವನವೆಲ್ಲ ಮುಗಿದ ಹಾಗೆ ಬದುಕಿನಲ್ಲಿ ತಾನು ಕಾಣಬೇಕಾದದು ಏನೂ ಇಲ್ಲವೇ ಇಲ್ಲ ಎನ್ನುವ ಭಾವನೆ ಹೃದಯವನ್ನು ಆವರಿಸಿತ್ತು"[೨೫] ಎನ್ನುವಲ್ಲಿ ಯಾವುದೋ ಸಮಸ್ಯೆಯ ಸುಳಿಯಲ್ಲಿ ಸಿಲುಕಿರುವಂತೆ ಕಂಡುಬರುತ್ತಾಳೆ. ಬದುಕಲು ಯಾವ ಕಷ್ಟವಿಲ್ಲದಿದ್ದರು ಬದುಕೇ ನಶ್ವರವಾಗಿ ಅವಳಿಗೆ ಕಾಣುತ್ತಿದೆ ಎಂದರೆ ಬದುಕಿಗೆ ಯಾವ ಉತ್ಸಾಹವು ಇಲ್ಲದಿರುವುದು ಗೋಚರಿಸುತ್ತದೆ.

ಕಾದಂಬರಿಯ ಮುಖ್ಯವಸ್ತು ವಿವಾಹ.  ಇದು ಗಂಡು ಹೆಣ್ಣಿನ ಜೀವನದ ಬಹುದೊಡ್ಡ ತಿರುವು ಎಂದು ಹೇಳುವುದು ರೂಢಿಗತವಾಗಿದೆ. ಬಾಲ್ಯ, ಯೌವ್ವನ, ವೃದ್ಧಾಪ್ಯ ಎಲ್ಲ ಹಂತದಲ್ಲಿಯೂ ಸ್ತ್ರೀ-ಪುರುಷರಿಬ್ಬರು ಜೀವನದಲ್ಲಿ ತಿರುವುಗಳನ್ನು ಕಂಡವರೆ. ಎಲ್ಲ ತಿರುವುಗಳಲ್ಲು ಹೆಣ್ಣು-ಗಂಡಿಗಿರುವ ನಿಯಮಗಳು ಮಾತ್ರ ಬೇರೆಬೇರೆಯದೆ. ಹೆಣ್ಣು ಮದುವೆಯಾಗಿ ಮಕ್ಕಳನ್ನು ಪಡೆಯಬೇಕು ಅವುಗಳ ಲಾಲನೆ, ಪೋಷಣೆ ಮಾಡಬೇಕು, ನಂತರ ಮಕ್ಕಳ ಮದುವೆ ಮೊಮ್ಮಕ್ಕಳನ್ನು ಕಾಣಬೇಕು ಹೀಗೆ ಸುರುಳಿಯಾಕಾರದಲ್ಲಿ ಸುತ್ತುವ ಜೀವನ ಅವಳದು. ಇದರಲ್ಲಿ ಪುರುಷನ ಪಾತ್ರವಿಲ್ಲವೆಂದಲ್ಲ ಪುರುಷನಿಗಿಂತ ಹೆಣ್ಣಿನ ಜವಾಬ್ದಾರಿ ಕರ್ತವ್ಯದ ಹೆಸರಿನಲ್ಲಿ ಹೆಚ್ಚುಗಾರಿಕೆಯಾಗಿ ಸಮಾಜ ಸೃಷ್ಟಿಯಾಗಿದೆ. ಈ ಕರ್ತವ್ಯಗಳಲ್ಲಿ ಒಂದನ್ನು ಕಳೆದುಕೊಂಡರು ಅಪಮಾನ ನಿಂದನೆಗೆ ಒಳಗಾಗುವವಳು ಹೆಣ್ಣು. ಅದರಲ್ಲು ಮದುವೆಯಾಗಿ ಮಕ್ಕಳಾಗದಿದ್ದರೆ ಘೋರ ಮಹಾ ಪಾಪವೆಸಗಿದಂತೆ ನಮ್ಮ ಸಮಾಜ ಆಕೆಯನ್ನು ಗುರುತಿಸುತ್ತದೆ. ಕೊಲೆ, ಸುಲಿಗೆ, ಮೋಸ, ದರೋಡೆ ಮಾಡಿದವರಿಗಿಂತಲು ಕೀಳಾಗಿ ಮಕ್ಕಳಿಲ್ಲದ ಹೆಣ್ಣನ್ನು ಸಮಾಜ ಶಿಕ್ಷಿಸುತ್ತಿದೆ.

ಸಮಾಜದ ಈ ನಿರ್ಧಾರಕ್ಕೆ ಎಲ್ಲಾ ಮಹಿಳೆಯರೂ ತಾಯಂದಿರೇ ಎಂಬ ತಪ್ಪು ಕಲ್ಪನೆಯಾಗಿದೆ. ಎಷ್ಟೋ ಹೆಂಗಳೆಯರಿಗೆ ತಾಯಿಯಾಗಲು ಇಷ್ಟವಿರುವುದಿಲ್ಲ. ಉದ್ಯೋಗ ಅಪೇಕ್ಷಿಗಳೋ, ಸೌಂದರ್ಯಪಾಲಕರೋ ಅಥವಾ ಅನಾಥ ಮಕ್ಕಳಿಗೆ ಆಶ್ರಯವಾಗಬೇಕೆಂಬ ಹಂಬಲದಿಂದ ದತ್ತು ಪಡೆಯುವ ನಿರ್ಧಾರವೋ ಅದು ಅವರ ಸಂಸಾರದ ಹೊಂದಾಣಿಕೆಗೆ ಬಿಟ್ಟದ್ದು. ಸಮಾಜ ಅವರ ಉದ್ದೇಶಗಳನ್ನು ಅರಿಯದೆ ಮಕ್ಕಳಿಲ್ಲದ ಕಾರಣಕ್ಕೆ 'ಬಂಜೆ' ಎಂದು ಗುರುತಿಸಿ ಅವಳನ್ನು ನೋಡುವ ದೃಷ್ಟಿಕೋನವನ್ನೆ ಬದಲಾಯಿಸಿಕೊಳ್ಳುತ್ತದೆ.

ಬಹುತೇಕ ಹೆಂಗಳೆಯರು ತಾಯಿಯಾಗುವುದನ್ನು ನಿರಾಕರಿಸುವುದಿಲ್ಲ. ಗೀತಾಳು ಯಾಂತ್ರಿಕವಾದ ಬದುಕಿನಲ್ಲಿ ಮಗುವಿನ ಕನಸಿನಿಂದ ಹೊಸ ಕನಸನ್ನು ಹೊತ್ತವಳೆ "ಒಂದು ಪುಟ್ಟ ಮಗು ಮನೆಯಲ್ಲಿದ್ದರೆ ಇಪ್ಪತ್ತು ನಾಲ್ಕು ಗಂಟೆಯೂ ಅದರ ಆರೈಕೆಗೆ ಸಾಕಾಗಲಾರದು ಅದರ ಆಟಪಾಠ ನೋಡುತ್ತಾ  ನೋಡುತ್ತಾ ತನ್ನ ಬೇಸರವೆಲ್ಲ ಹಾರಿಹೋಗಬಹುದು..... ಹಾಗೆಯೇ ತನ್ನ ಮತ್ತು ರಾಜಶೇಖರನ ನಡುವಿನ ಬಿರುಕು ಮುಚ್ಚಿ ಹೋಗಬಹುದು. ರಾಜಶೇಖರನ ಬಗ್ಗೆ ತನಗಿರುವ ಅತೃಪ್ತಿಯನ್ನೆಲ್ಲಾ, ತನ್ನ ಅಲ್ಲ ತಮ್ಮ ಮಗುವಿನ ಶಿಕ್ಷಣದಲ್ಲಿ ಮರೆಯಬಹುದು ತನಗೆ ಬೇಕಾದಂತೆ ತನ್ನ ಪುಟ್ಟ ಕಂದಮ್ಮನನ್ನು ರೂಪಿಸಿಕೊಳ್ಳಬಹುದು. ಆದರೆ ಯಾಕೆ ತಡವಾಗುತ್ತಿದೆ?"[೨೬] ಎಂಬ ಗೊಂದಲದಲ್ಲಿ ಗೀತಾಳು ತಾಯಿಯಾಗುವುದನ್ನು ಬಯಸುವ ಹೆಣ್ಣಾಗಿ ಬಿಂಬಿತವಾಗಿದ್ದಾಳೆ. ಆದರೆ ಸಮಾಜ ಗೀತಾಳಂತಹ ಹೆಣ್ಣಿನಲ್ಲು ತಾಯಿಯಾಗುವ ಬಯಕೆ ಇರುತ್ತದೆ ಎಂಬುದನ್ನರಿಯದೆ ಚುಚ್ಚು ಮಾತಗಳನ್ನಾಡುವುದು ಮಕ್ಕಳಿಲ್ಲದ ಹೆಣ್ಣಿನ ಸ್ಥಾನವನ್ನು ಶೂನ್ಯಗೊಳಿಸುವುದೆ ಆಗಿದೆ.

ಗೀತಾಳ ಅತ್ತೆ ಇಂದಿರಮ್ಮ ಪುರುಷಪ್ರಧಾನ ಸಮಾಜದ ಶೋಷಕಿಯಾದರೆ, ಗೀತಾಳ ಗಂಡನಾದ ರಾಜಶೇಖರ ಶೋಷಣೆಯ ಪ್ರತಿನಿಧಿಯಾಗಿದ್ದಾನೆ.  ಸತ್ಯಾಂಶ ತಿಳಿಯದ ಇಂದಿರಮ್ಮನವರಿಗೆ ಮಗನ ಮೇಲೆ ಸಂಶಯದ ಗಾಳಿಯು ಸುಳಿಯದಂತೆ ಸಂಪೂರ್ಣ ನಂಬಿಕೆಯಿಟ್ಟಿರುವುದು ತಿಳಿಯುತ್ತದೆ. ಇಂದಿರಮ್ಮನ ಮಗಳು ಎರಡು ಮಕ್ಕಳ ತಾಯಿಯಾಗಿದ್ದು, ಪ್ರಜ್ಞಾವಂತೆಯಾಗಿ ಕಂಡುಬರುತ್ತಾಳೆ. ಅತ್ತಿಗೆಯಾದ ಗೀತಾಳಿಗೆ ಪರೀಕ್ಷಿಸಿಕೊಳ್ಳುವ ಸಲಹೆ ನೀಡುವಲ್ಲಿ ಆಧುನಿಕ ಜ್ಞಾನದ ಅರಿವು ಇರುವುದು ತಿಳಿಯುತ್ತದೆ. ಪರೀಕ್ಷಿಸಿಕೊಂಡಿದ್ದ ಗೀತಾಳಲ್ಲಿ ಯಾವ ದೋಷವೂ ಇಲ್ಲದಿರುವುದು ಖಚಿತಗೊಂಡ ಮೇಲೆ 'ಅಣ್ಣನೂ ಪರೀಕ್ಷೆ ಮಾಡಿಸಿಕೊಳ್ಳುವ ಸೂಚನೆ ನೀಡಿದಾಗ "ಛೇ! ಎಂಥ ಮಾತ್ತಾಡ್ತೀಯೆ ನಾಚಿಕ್ಕೇಡು! ಇವಳ ಬಂಜೆತನಕ್ಕೆ ಅವನು ಹೊಣೆಯೇ!"[೨೭] ಎಂಬ ಇಂದಿರಮ್ಮನ ಮಾತಿನಲ್ಲಿ ಪ್ರಾಪಂಚಿಕ ಜ್ಞಾನವಿಲ್ಲದಿರುವುದು

ಅರಿವಾಗುತ್ತದೆ. ಅಲ್ಲದೆ ಇಂದಿರಮ್ಮನಂತಹವರ ಮನೋಧೋರಣೆಗೆ ರಾಜಶೇಖರನಂತಹವರೆ ಕಾರಣೀಭೂತರಾಗಿರುವುದು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ.

ನಿರ್ವೀರ್ಯನಾಗಿದ್ದ ರಾಜಶೇಖರ ಪುರಾಣದ ರಾಜರಂತೆ ಚಟಕೆ ಬಿದ್ದವನಲ್ಲ. ಅಥವಾ ತಾನಾಗಿಯೇ ಪುರುಷತ್ವವನ್ನು ಕಳೆದುಕೊಂಡವನಲ್ಲ. ಆಟೋಇಮ್ಯುನಿಟಿ ಎಂಬ ಭಯಂಕರ ಜ್ವರದಿಂದ ಮಕ್ಕಳಾಗುವ ಶಕ್ತಿ ಕಳೆದುಕೊಂಡಿದ್ದನು. ಈ ಸತ್ಯ ರಾಜಶೇಖರನಿಗೆ ಮತ್ತು ಉಪಚರಿಸಿದ ವೈದ್ಯರಿಗೆ ಮಾತ್ರವಲ್ಲದೆ ಯಾರಿಗೂ ತಿಳಿದಿರುವುದಿಲ್ಲ. ರಾಜಶೇಖರ ತಿಳಿಸುವ ಪ್ರಯತ್ನವೂ ಮಾಡುವುದಿಲ್ಲ. ರಾಜಶೇಖರನ ಇಂತಹ ಪರಿಸ್ಥಿತಿಗೆ ಕನಿಕರ ಉಂಟಾದರೂ ಅದನ್ನು ತೋರ್ಪಡಿಸಿಕೊಳ್ಳುವಲ್ಲಿ ಹಿಂಜರಿಯುವುದು ಮಾತ್ರವಲ್ಲದೆ ತನ್ನ ಮುಂದೆಯೆ ತಾಯಿಯಾದಿಯಾಗಿ ಸಮಾಜದಲ್ಲಿ ಗೀತಾ ಬಂಜೆ ಎಂಬ ಆಪಾದನೆಗೆ ಒಳಗಾಗುತ್ತಿದ್ದರು ಮೌನ ವಹಿಸುವುದು ಸ್ತ್ರೀ ಕುಲಕ್ಕೆ ಮಾಡಿದ ದ್ರೋಹವೆಂದೆನಿಸುತ್ತದೆ.

ಸಮಾಜದಲ್ಲಿ ಪುರುಷ ಮೇಲ್ಪಂಕ್ತಿಯಲ್ಲೆ ಇರಲು ಬಯಸುತ್ತಾನೆ ನಿಂದನೆ ತೆಗಳುವಿಕೆಗಳಿಗೆಲ್ಲ ತಪ್ಪೇ ಇಲ್ಲದ ಹೆಣ್ಣನ್ನು ಗುರಿಪಡಿಸಿ ತಾನು ಮಾತ್ರ ಜಾರಿಕೊಳ್ಳುತ್ತಿದ್ದಾನೆ. ವಿದ್ಯಾವಂತನಾದ ರಾಜಶೇಖರನು ಮದುವೆಗು ಮುಂಚೆಯೆ ಸತ್ಯ ತಿಳಿದಿದ್ದರು ಯಾರೊಂದಿಗು ಹೇಳಿಕೊಳ್ಳುವ ಪ್ರಯತ್ನ ಮಾಡದಿರುವುದನ್ನು ಮಾನವತೆಯ ಯಾವ ಮನುಷ್ಯನು ಒಪ್ಪುವುದಿಲ್ಲ. ನಿಜಾಂಶ ತಿಳಿದಿದ್ದರೆ ಇಂದಿರಮ್ಮನಂತಹವರು ಮಗನ ಮರು ಮದುವೆಯಂತಹ ಯೋಚನೆಯನ್ನು ಮಾಡುತ್ತಿರಲಿಲ್ಲ. ಮಾತು ಮಾತಿಗು ಬಂಜೆಯ ಕೈಯಿಂದ ಅದು ಕುಡಿಬೇಡ, ಇದು ಮುಟ್ಟಬೇಡ ಎಂಬ ಬೈಗುಳ ಗೀತಾಳಿಗೆ ತಪ್ಪುತ್ತಿತ್ತು.

ಒಟ್ಟಿನಲ್ಲಿ ಗೀತಾ, ಮನೆಯವರಿಗೆ ಬೇಡವಾದ ಹೆಣ್ಣಾದಳು. ಗೀತಾಳ ಜೀವನ ಮುಗಿಯಿತು ಎಂದುಕೊಳ್ಳುತ್ತಿದ್ದಂತೆ ಮದುವೆಗೂ ಮುಂಚೆ ಇದ್ದ ಪಿಎಚ್.ಡಿ. ವ್ಯಾಸಂಗಕ್ಕೆ ಸೇರಬೇಕೆಂಬ ಕನಸು ಈ ಸಂದರ್ಭದಲ್ಲಿ ಗೀತಾಳ ಜೀವನಕ್ಕೆ ಪುನಶ್ಚೇತನ ನೀಡುತ್ತದೆ. ಅಲ್ಲಿಯೂ ಗೀತಾಳ ನಡವಳಿಕೆಯ ಮೇಲೆ ಸಂಶಯಿಸುವ ಪತಿ, ಅತ್ತೆಯ ಅಪನಂಬಿಕೆಗೆ ಗುರಿಯಾಗುತ್ತಾಳೆ. 'ಕಾಮಾಲೆ ಕಣ್ಣಿಗೆ ಕಾಣುವುದೆಲ್ಲಾ ಹಳದಿ' ಎಂಬ ಗಾದೆ ಮಾತಿನಂತೆ ಹೆಣ್ಣನ್ನು ಅಪವಾದಗಳಿಗೆ ಗುರಿಪಡಿಸುವುದು ಕಂಡುಬರುತ್ತದೆ. ಪಿಎಚ್.ಡಿ. ಮಾರ್ಗದರ್ಶಕರ ಗೆಳೆಯ ರಾಜಶೇಖರನಿಗೆ ಉಪಚರಿಸಿದ್ದ ವೈದ್ಯರಾಗಿತ್ತಾರೆ. ಗೀತಾಳಿಗೆ ಆಕಸ್ಮಿಕವಾಗಿ ವೈದ್ಯರ ಪರಿಚಯವಾಗುತ್ತದೆ. ಅವರಿಂದ ಸತ್ಯ ಸಂಗತಿ ತಿಳಿದು ಆ ವಿಷಯವನ್ನು ಗಂಡನ ಎದುರು ಪರೋಕ್ಷವಾಗಿ ಪ್ರಸ್ತಾಪಿಸುತ್ತಾಳೆ. ಸತ್ಯ ಹೇಳುವ ಅವಕಾಶ ಸಿಕ್ಕಿದರೂ ರಾಜಶೇಖರ

ಮೌನಿಯಾಗುತ್ತಾನೆ. ಇದನ್ನು ಗಮನಿಸಿದ ಗೀತಾಳಲ್ಲಿ ದ್ವೇಷ ಬೆಳೆಯುತ್ತದೆ. "ರಾಜಶೇಖರನಿಂದಾಗಿ ತನಗೆ ಮಕ್ಕಳಾಗುವುದು ಸಾಧ್ಯವಿಲ್ಲ. ಆದರೆ ಪ್ರಪಂಚದ ದೃಷ್ಟಿಯಲ್ಲಿ ತಾನೇ ಬಂಜೆ. ಮಕ್ಕಳನ್ನು ಹೆರುವ ಯೋಗ್ಯತೆಯಿಲ್ಲದವಳು. ಹೆಣ್ಣಾಗಿ ತಾಯಿಯ ಪಟ್ಟಕೇರುವ ಅರ್ಹತೆ ಇಲ್ಲದವಳು. ಮನೆಯವರ, ಆತ್ಮೀಯರ ಅಪರಿಚಿತರ ಎಲ್ಲರ ದೃಷ್ಟಿಯಲ್ಲಿ ತಾನು ಬಂಜೆ ಇಂಥದೊಂದು ಅಪವಾದ ತನ್ನ ಮೇಲೆ ಬಂದಿರುವುದಕ್ಕೆ ಕಾರಣ ರಾಜಶೇಖರ ಆದರೆ ಅದಕ್ಕಾಗಿ ಅವನನ್ನು ಯಾರು ಅಪಹಾಸ್ಯ ಮಾಡುವುದಿಲ್ಲ, ಸುಳ್ಳು ಅನುಕಂಪ ತೋರಿಸುವುದಿಲ್ಲ. ಆದರೆ ತಪ್ಪಿಲ್ಲದ ತಾನೇ ಜನರ ದೃಷ್ಟಿಯಲ್ಲಿ ದೋಷಿ"[೨೮] ಎನ್ನುವಲ್ಲಿ ಅವಳಿಗಿರುವ ದುಃಖಕ್ಕಿಂತ ಏನನ್ನೊ ಸಾಧಿಸ ಹೊರಡುವ ನಿಶ್ಚಲತೆ ಕಾಣುತ್ತದೆ. ಇಲ್ಲಿ ಗೀತಾ ಕಿರುಚಾಡಲಿಲ್ಲ, ಸಮಾಜಕ್ಕೆ ರಾಜಶೇಖರನೆ ದೋಷಿ ಎಂದು ಸಾರಲಿಲ್ಲ ನಿರ್ದೋಷಿಯಂತೆ ವರ್ತಿಸುತ್ತಿರುವ ರಾಜಶೇಖರನಲ್ಲಿ ಬಯಸಿದ್ದು ಆತನಿಂದ ಸಾಂತ್ವನದ ನುಡಿಗಳನ್ನು. ಅವನಲ್ಲಿ ನಿಜವಾದ ಮರುಕ ಕಂಡು ಬಂದಿದ್ದರೆ 'ತಾನೆ ಸಹಾನುಭೂತಿ ತೋರುತ್ತಿದ್ದೆ' ಎಂದುಕೊಳ್ಳುವಲ್ಲಿ ಸ್ತ್ರೀ ಉದಾರ ಗುಣವನ್ನು ಹೇಳುವಂತಿದೆ. ರಾಜಶೇಖರನಿಗೆ, ಆತನ ತಪ್ಪಿನ ಅರಿವೇ ಇಲ್ಲದೆ ಇರುವುದನ್ನು ಗಮನಿಸಿದ ಗೀತಾಳಿಗೆ ಮಾತ್ರವಲ್ಲ ಲೋಕಪವಾದಕ್ಕೆ ಒಳಗಾಗಿರುವ ಯಾವ ಹೆಣ್ಣಿಗೂ ರಾಜಶೇಖರನ ಮೇಲೆ ದ್ವೇಷ ಬಾರದಿರದು. ತನ್ನ ಮೊದಲ ಪ್ರೇಮಿಯಿಂದ ಗರ್ಭಿಣಿಯಾಗುವ ಮೂಲಕ ಸಮಾಜಕ್ಕೆ ತಾನು 'ಬಂಜೆ' ಅಲ್ಲ ಎಂಬುದನ್ನು ತೋರಿಸುವ ಮೂಲಕ ದ್ವೇಷವನ್ನು ಸೇಡಾಗಿ ಈಡೇರಿಸಿಕೊಳ್ಳುತ್ತಾಳೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಗೀತಾ ಅಧೀನ ಜೀವನಕ್ಕೆ ಅಣಿಯಾಗುವುದಿಲ್ಲ. ಪತಿಯ ಮೇಲಿನ ಕ್ರೋಧ ಅವಳನ್ನು ಈ ಮಟ್ಟಕ್ಕೆ ತಂದು ನಿಲ್ಲಿಸುತ್ತದೆ. ಅದನ್ನು ನಿಬಾಯಿಸುವಲ್ಲಿ ಗೀತಾಳ ಗಟ್ಟಿತನ ಕಂಡುಬರುತ್ತದೆ. ಇಂದಿರಮ್ಮ, ಜಯಮ್ಮನವರು ಗೀತಾಳ ತಾಯ್ತನದ ವಿಷಯ ಕೇಳಿ ಸಂಭ್ರಮಿಸುತ್ತಿದ್ದರೆ, ರಾಜಶೇಖರನ ಮುಖ ಕಪ್ಪಿಟ್ಟುತ್ತದೆ. ಇಲ್ಲಿ ರಾಜಶೇಖರನು ತನ್ನ ವ್ಯಕ್ತಿತ್ವಕ್ಕೆ ಧಕ್ಕೆಯಾಗದಂತೆ ಕಾಪಾಡಿಕೊಳ್ಳುವುದರತ್ತ ಯೋಚಿಸುತ್ತಾನೆಯೆ ಹೊರತು ಗೀತಾ ಗರ್ಭ ಧರಿಸಿದಾಗಲಾದರು ನಡೆದ ಘಟನೆ ಅರುಹುವ ಪ್ರಯತ್ನ ಮಾಡುವುದಿಲ್ಲ. ಇದನ್ನರಿತ ಗೀತಾ ತನ್ನ ವಿವೇಕತನದಿಂದ ಜಾಗೃತಳಾಗಿ ತಂದೆಯ ಸಲಹೆಯ ಮೇರೆಗೆ ರಾಜಶೇಖರನಿಂದ ವಿಚ್ಛೇದನ ಪಡೆಯುವ ನಿರ್ಧಾರಕ್ಕೆ ಬರುತ್ತಾಳೆ.

ಗೀತಾ ತನ್ನ ಸುಖ-ಶಾಂತಿಗಾಗಿ ಬದುಕಿದವಳಲ್ಲ. ಗೀತಾಳ ಪಾತ್ರದ ಮೂಲಕ ಲೇಖಕಿ ರಾಜಶೇಖರನಂತಹ ಮುಖವಾಡಧಾರಿಗಳಿಗೆ ನೀಡಿರುವ ಎಚ್ಚರಿಕೆಯಾಗಿದೆ. ಸಮಾಜದಲ್ಲಿ ಪುರುಷನ ನೆಲೆಯಿಲ್ಲದೆ ಬದುಕುವುದು ಸಾಧ್ಯವಿಲ್ಲ ಎಂಬುದಕ್ಕೆ ವಿರುದ್ಧವಾಗಿ ಲೇಖಕಿ ಚಿತ್ರಿಸಿದ್ದಾರೆ.

ಸತ್ಯಕಾಮ ಜಬಾಲಾನ ಕಥೆ ಹೇಳುವ ಗೀತಾಳ ತಂದೆ "ತಂದೆ ಯಾರೂ ಅಂತ ಗೊತ್ತಿಲ್ಲದಿದ್ದ ಹುಡುಗ, ತಾಯಿಯ ಹೆಸರು ಹೇಳಿಕೊಂಡೇ ಗುರುಗಳಲ್ಲಿ ವೇದಾಭ್ಯಾಸ ಮಾಡಿದನಂತೆ ನೀನಾದರೂ ಅಷ್ಟೆ, ಸಮಾಜದ ಅಂಜಿಕೆಗೆ ಒಳಗಾಗಿ ನೀನು ತಂದೆಯಲ್ಲದವನ ಆಶ್ರಯದಲ್ಲಿ ಮಗುವನ್ನು ಬಿಟ್ಟರೆ, ಪಾಪದ ಸಂತಾನವನ್ನು ಬೆಳೆಸಿದ ಹಾಗಾಗುತ್ತೆ"[೨೯] ಎಂದು ಹುರಿದುಂಬಿಸುವಲ್ಲಿ ಹುಟ್ಟಿದ ಮಗುವಿಗೆ ತಂದೆ ತಾಯಿಯಾಗಿ ಬೆಳೆಸುವಂತೆ ಗೀತಾಳಿಗೆ ಧೈರ್ಯ ತುಂಬುತ್ತಾನೆ. ಗೀತಾಳ ತಂದೆ ನರಸಿಂಹಮೂರ್ತಿ ಕಾದಂಬರಿಯ ನಾಯಕರೆಂದರೆ ತಪ್ಪಾಗಲಾರದು. ಕಾದಂಬರಿಯಲ್ಲಿ ರಾಜಶೇಖರನಂತಹ ಶೋಷಕರು ಒಂದೆಡೆ, ನರಸಿಂಹಮೂರ್ತಿಯಂತಹ ಜಾಗೃತಿಕಾರರು ಮತ್ತೊಂದೆಡೆ ಚಿತ್ರಿಸಿರುವುದು ಒಬ್ಬನಿಂದ ಜೀವನ ಹಾಳಾದರು ನರಸಿಂಹಮೂರ್ತಿಯಂತಹ ಪುರುಷನಿಂದಲೆ ಹೊಸ ಜೀವನಕ್ಕೆ ಸ್ಫೂರ್ತಿಯಾಗುತ್ತದೆ ಎಂಬುದು ಕಂಡುಬರುತ್ತದೆ. ಯಾರು ಯಾವ ಆಶಯಗಳನ್ನು ತುಂಬಿದರು ಅದನ್ನು ನಿಬಾಯಿಸುವ ಸಾಮರ್ಥ್ಯ ಗೀತಾಳಲ್ಲಿದ್ದರಿಂದ ವಿಚ್ಛೇದನ ಪಡೆದು ಏಕಾಂಗಿಯಾಗಿ ತನ್ನ ಮಗುವಿನೊಂದಿಗೆ ಬದುಕುವ ನಿರ್ಧಾರ ತೋರುತ್ತಾಳೆ.

## ನೆಲೆ-ಬೆಲೆ

'ಜಬಾಲಾ' ಕಾದಂಬರಿಯಂತೆ 'ನೆಲೆ-ಬೆಲೆ' ಕಾದಂಬರಿಯು ವಸ್ತುವಿಷಯದಲ್ಲಿ ಸಾಮ್ಯತೆ ಪಡೆದಿದೆ. ಜಬಾಲಾ ಕಾದಂಬರಿ ನಗರವಾಸಿಗರಾದ ಆಧುನಿಕ ಸುಶಿಕ್ಷಿತರ ನಡುವೆ ಬಂಜೆತನವನ್ನು ನೀಗಿಸಿಕೊಳ್ಳುವ ಪರಿ ಕಂಡುಬಂದರೆ, 'ನೆಲೆ-ಬೆಲೆ' ಕಾದಂಬರಿಯಲ್ಲಿ ಗ್ರಾಮೀಣ ಬದುಕಿನ ಅವಿದ್ಯಾವಂತರ ಸಮೂಹಕ್ಕೆ ನಗರ ಪ್ರದೇಶದ ಗಾಳಿ ಬೀಸಿದ್ದರಿಂದ ಬಂಜೆತನ ನೀಗಿಸಿಕೊಂಡ ಕಥಾವಸ್ತು ರಚಿತವಾಗಿದೆ. ಈ ಕಾದಂಬರಿಯಲ್ಲಿ ಕೇಂದ್ರ ಭಾಗ ಬಂಜೆತನವೇ ಆದರೂ ಅದರ ಸುತ್ತ ಚೂರಾದ ಪ್ರೇಮಕಥೆಗಳು, ಹೆಣ್ಣಿನ ಮರುವಿವಾಹಕ್ಕೆ ಇರುವ ತೊಡಕು. ಹೆಣ್ಣಿನ ಮೇಲೆ ನಡೆಯುವ ಅತ್ಯಾಚಾರಗಳನ್ನು ವಾಸ್ತವ ನೆಲೆಗಟ್ಟಿನಲ್ಲಿಯೇ ಚಿತ್ರಿಸಿರುವುದು ಮುಖ್ಯ ವಸ್ತುವಿಗೆ ಪೂರಕವಾಗಿದೆ. ಅಂದರೆ "ನೆಲೆ-ಬೆಲೆ ಕಾದಂಬರಿಯಲ್ಲಿ ಹೆಣ್ಣಿನ ನೆಲೆಯೇನು? ಆಕೆಯ ಆಶೋತ್ತರಗಳಿಗೆ ಇಂದಿನ ಸಮಾಜದಲ್ಲಿ ಬೆಲೆಯೇನು? ಎನ್ನುವಂತಹ ವಿಚಾರಗಳನ್ನು ಅತ್ಯಂತ ವಾಸ್ತವವಾಗಿ ಚಿತ್ರಿಸಲಾಗಿದೆ".[೩೦] ಶೋಷಣೆಯ ಆಗರವಾದ ಸಮಾಜದಲ್ಲಿ ಹೆಣ್ಣಿಗೆ ನೆಲೆಯಿಲ್ಲದಂತೆಯೆ ನಡೆಸಿಕೊಳ್ಳುತ್ತಿದೆ. ಹೆಣ್ಣಾದವಳು ತನ್ನ ನೆಲೆ ಭದ್ರಪಡಿಸಿಕೊಳ್ಳಲು ಪುರುಷಶಾಹಿ ಸಮಾಜದ ಸ್ತ್ರೀ ವಿರೋಧ ನಿಯಮಗಳಿಗೆ ಮನ್ನಣೆ ನೀಡದೆ ಉಲ್ಲಂಘಿಸಿದಾಗ ಮಾತ್ರ ಆಕೆಯ ಸ್ಥಾನಮಾನದ ಬೆಲೆ ಹೆಚ್ಚಾಗುತ್ತದೆ ಎಂಬುದು ಕಾದಂಬರಿಯ ವಸ್ತುವಿನಿಂದ ಅರಿವಾಗುತ್ತದೆ.

ಬಂಜೆತನ ಎಂಬ ವಸ್ತುವನ್ನಿಟ್ಟುಕೊಂಡು ಶಿಕ್ಷಿತ–ಶಿಕ್ಷಿತರಲ್ಲದ ನಡುವಿನ ಮಾನಸಿಕ ಹೊಯ್ದಾಟಗಳನ್ನು, ಎಲ್ಲದಕ್ಕು ಮೂಢನಂಬಿಕೆಯ ಒರೆ ಹಚ್ಚಿನೋಡುವ ಗ್ರಾಮೀಣ ವಾಸಿಗರ ಬದುಕನ್ನು ಸ್ತ್ರೀತ್ವಕ್ಕಾಗಿ ಹೋರಾಡುತ್ತಿರುವ ನಗರವಾಸಿಗಳ ಮನಸ್ಸುಗಳನ್ನು ಕಾದಂಬರಿ ಬಿಚ್ಚಿಡುತ್ತದೆ. ಲೇಖಕಿ ಈ ಕಾದಂಬರಿಯ ಮೂಲಕ "ಸಂಘಟನೆ ಮತ್ತು ವಿಚಾರ ಶಕ್ತಿಯಿಂದ ಮತ್ತು ಸ್ವಪ್ರಯತ್ನದಿಂದ ಪಾಚಿಗಟ್ಟಿದ, ಮೌಢ್ಯತೆಯಿಂದ ಕೂಡಿದ ಸಮಾಜವನ್ನು ತಿದ್ದಲು ಸಾಧ್ಯ ಎಂಬ ಆಶಯದೊಂದಿಗೆ ಸ್ತ್ರೀ ಸ್ವಾತಂತ್ರ್ಯ ಸಮಾನತೆಯ ಆಶಯಗಳನ್ನು ಎತ್ತಿಹಿಡಿದಿದ್ದಾರೆ"[೩೧] ಹೆಣ್ಣು ನಗರವಾಗಲಿ, ಗ್ರಾಮೀಣವಾಗಲಿ ಶೋಷಣೆಗೊಳಪಟ್ಟವಳೆ. ಆದರೆ ಶೋಷಣೆಯ ಮಡುವಿನಲ್ಲಿ ಬಿದ್ದು ಒದ್ದಾಡುವುದಕ್ಕಿಂತ ತನ್ನ ಅಸ್ತಿತ್ವವನ್ನು ಸ್ಥಾಪಿಸುವುದಕ್ಕಾಗಿ ಪ್ರಯತ್ನಿಸಬೇಕು ಎಂಬುದನ್ನು ಕಾದಂಬರಿಯಲ್ಲಿ ಅಂತರ್ಗತವಾಗಿರುವಂತೆ ಎಚ್ಚರಿಸಿದ್ದಾರೆ.

ಆಯ್ಕೆ ಎಂಬುದು ಹೆಣ್ಣಿಗೆ ಯಾವ ಕಾಲ್ಕಕ್ಕೂ ನೀಡಿಲ್ಲ. ಆಕೆಯನ್ನು ಮನಸ್ಸು, ಹೃದಯಗಳಿಲ್ಲವೆಂಬಂತೆಯೆ ನಡೆಸಿಕೊಳ್ಳುತ್ತಿದೆ. ಬಂಜೆ ಎಂಬ ಆಪಾದನೆಗೆ ಒಳಗಾಗಿರುವ ಜಯಾ ತುಂಬಿದ ಕುಟುಂಬದಲ್ಲಿ ದುಡಿಯುವ ಹೆಣ್ಣಾಗಿದ್ದಾಳೆ. ಮಕ್ಕಳಿಲ್ಲದ ಹೆಣ್ಣಿನ ಸ್ಥಾನ ಕೇವಲ ದುಡಿಮೆಗೆ ಮಾತ್ರ ಎಂಬಂತೆ ಗ್ರಾಮೀಣ ವಾಸಿಗರಲ್ಲಿ ಬೇರೂರಿಬಿಟ್ಟಿದೆ. ಅದರಂತೆ ಬಿಡುವೇ ಇಲ್ಲದೆ ಕತ್ತೆಯಂತೆ ದುಡಿಯುವ ದೈಹಿಕ ಯಾತನೆಯ ಜೊತೆಗೆ ಬಂಜೆ ಎಂಬ ಆಪಾದನೆಯ ನಿಂದನೆಯ ಮಾತುಗಳು ಮಾನಸಿಕವಾಗಿ ಕುಗ್ಗಿಸಿ ಸಮಾಜದಲ್ಲಿ ಅವಳ ಪಾತ್ರವೆ ಇಲ್ಲವೆಂಬಂತೆ ನಡೆಸಿಕೊಳ್ಳುವುದಿದೆ. ಜಯಾಳು ಈ ಜೀವನಕ್ಕೆ ಒಗ್ಗಿಹೋದವಳೆ. ಆದರೂ ತಾನು ಬಯಸಿದ್ದ ಜೀವನವೆ ಬೇರೆಯಾಗಿತ್ತು. ವಿದ್ಯಾವಂತನಾಗಿ ನೌಕರಿಯಲ್ಲಿರುವ ನಾಗರಿಕನ ಕೈಹಿಡಿಯಬೇಕೆಂದು ಬಯಸಿದ್ದವಳಿಗೆ ಕಾಂತಯ್ಯ ತಕ್ಕವರವೇ ಆಗಿರುತ್ತಾನೆ. ಇಬ್ಬರಲ್ಲು ಪ್ರೇಮಾಂಕುರವಾಗಿದ್ದರು ಅದನ್ನರಿಯದೆ ತಮ್ಮ ಆಲೋಚನೆಗಳಿಗೆ ತಕ್ಕಂತೆ ಹೊಲ, ಮನೆ, ಹಾಲು–ಹೈನು ಇರುವ ಮನೆಗೆ ಮದುವೆ ಮಾಡಬೇಕೆಂಬ ತಂದೆಯ ಹಠಕ್ಕೆ ಬಲಿಯಾಗುತ್ತಾಳೆ.

ಜೀವನಪರ್ಯಂತ ಜೀವನ ಸಾಗಿಸುವವಳ ಆಸೆ–ಕನಸುಗಳಿಗೆ ಬೆಲೆಯಿಲ್ಲದಂತೆ ಹಿರಿಯರ ಭಾವನೆಗಳಿಗೆ ಬದುಕಬೇಕೆಂದು ಬಯಸುವವರ ನಡುವೆ ಹಾಳಾಗುವುದು ಜಯಾಳ ಜೀವನ. ಇಷ್ಟವಿಲ್ಲದವನ ಕೈಹಿಡಿದು ಅಲ್ಲಿಯೂ ತೃಪ್ತಿ ಸಿಗದಾಗ ಹೆಣ್ಣಿನ ಬಾಳು ಕತ್ತಲೆಯೆ ಆಗುತ್ತದೆ. ಆ ಅಂಧಕಾರದ ಯಾತನೆ ಏನೆಂಬುದು ಜಯಾಳ ಮಾತುಗಳಿಂದಲೆ ಅರಿವಾಗುತ್ತದೆ. "ಹೌದು ನಾನು ಕಟ್ಟಿದ್ದ ಕನಸುಗಳೆಲ್ಲಾ ನನ್ನ ಮದುವೆ ಮಂಟಪದ ಜತೆಯಲ್ಲೇ ಸುಟ್ಟುಹೋದ್ವು! ನಾನೀಗ ಒಂದು ದುಡಿಯುವ ಯಂತ್ರ ಅಷ್ಟೆ. ಪ್ರಾಯಶಃ ನಾನು ಬಂಜೆ ಅಲ್ಲದೆ ಹೋಗಿದ್ದರೆ ಈ ಐದು ವರ್ಷಗಳಲ್ಲಿ

ಒಂದೆರಡು ಮಕ್ಕಳನ್ನೂ ಹೆರುವ ಯಂತ್ರವಾಗಿರುತ್ತಿದ್ದೆ"[೩೨] ಎನ್ನುವಲ್ಲಿ ಹೆಣ್ಣಿನ ಸ್ಥಾನ ಹಿರಿಯರು ತೋರಿಸಿದವನೊಂದಿಗೆ ಮದುವೆಯಾಗಿ ಆತನ ಇಷ್ಟಾರ್ಥಗಳನ್ನು ಪೂರೈಸುತ್ತ ತಾಯಿಯಾಗುವುದರಲ್ಲಿ ಅವಳ ಜೀವನ ಮುಗಿದಂತೆ. ಇನ್ನು ಯಾವ ಹುರುಪು ಅವಳಲ್ಲಿರುವುದಿಲ್ಲ. ಸ್ವಇಚ್ಛೆಯಂತೆ ಮದುವೆಯಾಗಿದ್ದರೆ ಸಮಾಧಾನದ, ನೆಮ್ಮದಿಯ ನೆರಳಲ್ಲಿ ಕಷ್ಟಸುಖಗಳೆಲ್ಲವು ಹಿತ ನೀಡುವಂಥವೆ ಆಗಿರುತ್ತವೆಂಬ ಭಾವನೆ ಜಯಾಳಲ್ಲಿ ಒಡಮೂಡಿದೆ.

ಸಂಬಂಧದಲ್ಲಿ ಜಯಾಳ ಅಕ್ಕಳಾದ ಕನಕಾಳ ಕೈಹಿಡಿದ ಕಾಂತಯ್ಯ ನಗರದಲ್ಲಿ ಬದುಕುತ್ತಿದ್ದ ಸ್ತ್ರೀ ಸಮಾನ ಮನಸ್ಥಿತಿಯವನು. ಕನಕಾಳ ಎರಡನೇ ಮಗುವಿನ ಬಾಣಂತನಕ್ಕಾಗಿ ಬಂದ ಜಯಾಳಿಗೆ ರೇಖಾಳ ಪರಿಚಯ ಬದುಕನ್ನು ಕಲಿಸಿಕೊಡುತ್ತದೆ. ಪುರುಷಪ್ರಧಾನ ವ್ಯವಸ್ಥೆಯ ಅಧಿಪತಿಯಾಗಿ ಕಂಡುಬರುವ ಶಾಂತಮ್ಮ ಎಂಬಾಕೆ ಕನಕಾಳ ಮನೆಯ ಪಕ್ಕದವಳು. ಗಂಡ, ಮನೆ, ಸಂಸಾರದಲ್ಲಿ ತೃಪ್ತಿಯನ್ನು ಕಂಡವಳು. ಶಾಂತಮ್ಮ, ಕನಕಾಳಿಗೆ ಜಯಾ ಮತ್ತು ಕಾಂತಯ್ಯನವರ ಮನಸ್ಸಿನಲ್ಲಿ ಏನಿದೆ ಎಂಬುದರ ಅರಿವೂ ಇಲ್ಲದೆ ಇಲ್ಲಸಲ್ಲದ ವಿಚಾರಗಳನ್ನು ತುರುಕುತ್ತಾಳೆ. ಕೊನೆಗೆ ಶಾಂತಮ್ಮ ಗಂಡನನ್ನು ಕಳೆದುಕೊಂಡರೆ, ಕನಕಾ ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಾಳೆ. ಈ ಮೂಲಕ ಲೇಖಕಿ ಪುರುಷಪ್ರಧಾನ ಸಮಾಜಕ್ಕೆ ಅಡಿಯಾಳಾಗಿ ಬದುಕುವವರ ಜೀವನ ದುರಂತದಲ್ಲಿ ಕೊನೆಯಾಗುತ್ತದೆ ಎಂಬುದನ್ನು ಹೇಳಿರುವಂತೆ ಚಿತ್ರಿಸಿದ್ದಾರೆ.

ಲೋಕ ವ್ಯವಹಾರ ಜ್ಞಾನವಿಲ್ಲದ ಶಾಂತಮ್ಮ, ಕನಕರಂತಹವರು ಇಂದಿಗೂ ನಗರ–ಹಳ್ಳಿಗಳಲ್ಲಿ ಅವಿದ್ಯಾವಂತರಲ್ಲಿ, ಕನಿಷ್ಟ ಶಿಕ್ಷಿತರಲ್ಲಿ ಕಾಣಸಿಗುತ್ತಾರೆ. ಪರರ ವಿಚಾರವಾಗಿ ತಲೆಕೆಡಿಸಿಕೊಳ್ಳುವ ಇವರು ಹೆಣ್ಣಿನ ವಿಚಾರವಾಗಿ ನಿಕೃಷ್ಟವಾಗಿ ಮಾತನಾಡುವವರು. ಬಂಧನದ ವ್ಯವಸ್ಥೆಯಲ್ಲಿ ಬೆಳೆದುಬಂದ ಶಾಂತಮ್ಮ, ಕನಕರಂತಹ ಸಂಕುಚಿತ ಮನೋಭಾವದವರು, ಹೆಣ್ಣಿನ ಸ್ವಾತಂತ್ರವನ್ನು ಸಂಶಯಾಸ್ಪದವಾಗಿ ಕಾಣುವವರು. ರೇಖಾ ಸ್ತ್ರೀಸ್ವಾತಂತ್ರ್ಯ, ಸ್ತ್ರೀಸಮಾನತೆಗಾಗಿ 'ವಿಮೋಚನಾ ಮಹಿಳಾ ಸಂಘ'ವನ್ನು ಸ್ಥಾಪಿಸಿ ಕಾರ್ಯಕರ್ತರೊಡನೆ ಸಮಯದ ಮಿತಿ ಇಲ್ಲದೆ ಕೆಲಸಕಾರ್ಯಗಳಲ್ಲಿ ತೊಡಗಿರುವುದನ್ನೇ ಅಪಾರ್ಥವಾಗಿ ಭಾವಿಸುವುದು ಸಮಾಜ ಹೆಣ್ಣಿಗೆ ಮಿತಿ ಹಾಕಿರುವುದರಿಂದಲೆ. ಅದನ್ನು ಮೀರಿದಾಗ ಶಾಂತಮ್ಮನಂತಹವರು "ಗಂಡುಬೀರಿ ಅಂದ್ರೆ ಪಕ್ಕಾ ಗಂಡುಬೀರಿ ಕಣ್ರಿ ಆಕೆ! ಏನ್ ಮಾಡೋಕೂ ಹೇಸೊಲ್ಲ. ತನ್ನ ಗಂಡ ಮನೇಲಿ ಇರ್ಲಿ ಬಿಡ್ಲಿ. ಮನೇಗ್ ಬರುವ ಗಂಡಸರನ್ನೆಲ್ಲ ಒಳಗಡೆ ಸೇರಿಸಿಕೊಂಡು ಗಂಟೆಗಟ್ಲೆ ಚರ್ಚೆ ನಡೆಸ್ತಿರ್ತಾಳೆ"[೩೩] ಎರಡು ತಿಂಗಳಿಗೊಮ್ಮೆ ಬೆಂಗಳೂರಿಗೆ ಆಗಾಗ್ಗೆ ಹೋಗುತ್ತಿರುತ್ತಾಳೆ. ಗಂಡನನ್ನ ಇಲ್ಲೇ ಬಿಟ್ಟು ಎಂದು ರೇಖಾಳ ಜೀವನವನ್ನು ಒಳಹೊಕ್ಕು ನೋಡದೆ ಆಡುವ ಮಾತುಗಳಾಗಿವೆ. ಗೃಹಿಣಿಯಾಗಿ

ಮನೆಯ ಚಾಕರಿ ಮಾಡಿಕೊಂಡೆ ಬದುಕಬೇಕೆಂಬ ಲಕ್ಷ್ಮಣ ರೇಖೆಯಿಂದ ಹೊರಬಂದರೆ ಸೀತೆಗೆ ಒದಗಿದ ಅಪವಾದಗಳು ಆಧುನಿಕ ಹೆಂಗಳೆಯರಿಗೂ ತಪ್ಪಿದಲ್ಲ ಎಂಬುದು ಅರಿವಾಗುತ್ತದೆ. ಸ್ವತಂತ್ರ ಜೀವನಕ್ಕಾಗಿ ಅವರ ಇಚ್ಛೆಗನುಗುಣವಾಗಿ ಬದುಕುವ ಹೆಂಗಳೆಯರನ್ನು ಬಿಡದೆ ಅವರಿಗೆ 'ಗಂಡುಬೀರಿ' ಎಂದು ನಾಮಕರಣ ಮಾಡಿ ತಿರಸ್ಕಾರ ಭಾವದಿಂದ ನೋಡುವುದು ಹೆಣ್ಣಿನ ಮಾನಸಿಕ ಧೈರ್ಯವನ್ನು ಕುಗ್ಗಿಸುವುದೇ ಆಗಿದೆ.

ರೇಖಾ ಜನಾಪವಾದಕ್ಕೆ ಹೆದರಿ ಕುಗ್ಗವ ಹೆಣ್ಣಾಗಲಿಲ್ಲ ತಾನು ಶೋಷಣೆಗೊಳಪಟ್ಟ ಹೆಣ್ಣಾದ್ದರಿಂದಲೆ ತನ್ನಂತಹ ಅನೇಕ ಹೆಂಗಳೆಯರಿಗೆ ಆಗುವ ಶೋಷಣೆಯನ್ನು ತಡೆಗಟ್ಟುವ ಪ್ರಯತ್ನವಾಗಿ ಸಂಘದ ಕೆಲಸ ಮಾಡುತ್ತಾಳೆ. ವಿಪರ್ಯಾಸವೆಂದರೆ ಇಂತಹ ದಿಟ್ಟಿಗೂ ತನ್ನ ಪತಿಯಿಂದಲೆ ನಡೆಯುತ್ತಿರುವ ಶೋಷಣೆಯನ್ನು ತಡೆಯಲಾಗುತ್ತಿಲ್ಲದಿರುವುದೆ ರೇಖಾಳಂತಹ ಹೆಣ್ಣಿನ ಅಸಹಾಯಕತೆಯನ್ನು ತೋರಿಸುತ್ತದೆ. ಒಂದು ಮೂಲ ಉದ್ದೇಶದಿಂದ ಹೋರಾಟ ಪ್ರಾರಂಭಿಸಿದರೆ ತಕ್ಷಣಕ್ಕೆ ಫಲ ಕೊಡುವುದಿಲ್ಲ. ನಿಧಾನವಾಗಿ ಸಮಾಜ ಪರಿವರ್ತನೆಯಾಗುತ್ತಾ ಸಾಗಿದಾಗ ಫಲ ದೊರಕುತ್ತದೆ ಎಂಬ ಆಶಯದೊಂದಿಗೆ ಲೇಖಕಿ ಶೋಷಣೆಗೊಳಪಟ್ಟ ರೇಖಾಳಂತಹ ಹೆಣ್ಣಿನಿಂದ ಸ್ತ್ರೀಸ್ವಾತಂತ್ರ್ಯಕ್ಕಾಗಿ ಹೋರಾಡುವುದನ್ನು ಬಿಂಬಿಸಿದ್ದಾರೆ. ಅದನ್ನು "ನಾವು ಮೊದಲಿನ ಮನೆಯಲ್ಲಿದ್ದುಕೊಂಡೇ ಹೊಸ ಮನೆಯನ್ನು ಕಟ್ಟಬೇಕಾಗುತ್ತದೆ. ಜಯ ಅದನ್ನು ಪೂರ್ಣಗೊಳಿಸಿದ ನಂತರ ಹೊಸ ಮನೆಯ ವಾಸ! ಈ ಸಂಘ, ಇದರ ಉದ್ದೇಶ, ಗೊತ್ತು ಗುರಿಗಳೆಲ್ಲ ಮುಂದಿನ ಪೀಳಿಗೆಗೆ ಸಹಕಾರಿಯಾಗಬಹುದಷ್ಟೆ. ಏಕೆಂದರೆ ನಾವು ವೈಯಕ್ತಿಕವಾಗಿ ಮುಂದುವರೆಯುವಷ್ಟು ವೇಗವಾಗಿ ಸಮಾಜ ಮುಂದುವರಿಯೋದಿಲ್ಲ. ಆದ್ದರಿಂದ ಹೆಣ್ಣಿನ ಹೆಜ್ಜೆ ಹೆಜ್ಜೆಗೂ ನಾವು ಇದಕ್ಕೆ ಹೊಂದಿಕೊಂಡು ಬದುಕುತ್ತಲೇ ಮೌಲ್ಯ ಬದಲಾವಣೆಯ ಬೀಜವನ್ನು ಸಾವಕಾಶವಾಗಿ ಬಿತ್ತಬೇಕಾಗುತ್ತದೆ"[೩೪] ಎಂಬ ರೇಖಾಳ ಮಾತುಗಳಿಂದಲೆ ತಿಳಿಯುತ್ತದೆ. ತಾನು ಶೋಷಿತಳಾಗುತ್ತಿದ್ದರು ಹೊಂದಿಕೊಂಡವಳಾಗುವುದಿಲ್ಲ ವೈಯಕ್ತಿಕ ಹೋರಾಟವಿಲ್ಲದಿದ್ದರು ನೊಂದವರಿಗಾಗಿ ಸಾಮೂಹಿಕ ಹೋರಾಟದ ಮೂಲಕ ವರದನಂತಹ ಕಾಮುಕ ಪತಿಯೊಂದಿಗೆ ಇದ್ದುಕೊಂಡೆ ಸಾಧಿಸುತ್ತಾಳೆ.

ಹೆಣ್ಣಿಗೆ ಅಸಹಾಯಕತೆ ಇದೆ ಎನ್ನುವುದಾದರೆ ಸಮಾಜದಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನ ಆಕೆಯ ಅಸಹಾಯಕತೆಗೆ ಕಾರಣ. ಕಾಮದ, ಭೋಗದ, ವಸ್ತುವಾಗಿಯೆ ನೋಡುವವರ ನಡುವೆ ಆಕೆ ಸಿಲುಕಿರುವುದರಿಂದಲೆ ಇಂದಿಗು ಸಮಾಜವನ್ನು ಆಶ್ರಯಿಸಬೇಕಾಗಿರುವ ದುಸ್ಸಂಗತಿ ಹೆಣ್ಣಿನ ಸ್ಥಿತಿಯಾಗಿದೆ. ರೇಖಾಳ ಜೀವನದಲ್ಲೂ ಆದದ್ದು ಈ

ಕಾರಣದಿಂದಲೆ. ಜಯಾಳಂತೆ, ರೇಖಾಳಿಗು ಶಂಕರ ಎಂಬ ವ್ಯಕ್ತಿಯ ಮೇಲೆ ಪ್ರೇಮಾಂಕುರವಾಗಿರುತ್ತದೆ. ಆದರೆ ವರದನ ಅತ್ಯಾಚಾರದಿಂದ ಶಂಕರನಿಂದ ತಿರಸ್ಕೃತಳಾಗುತ್ತಾಳೆ. ಮುಂದೆ ವರದನ ಅತ್ಯಾಚಾರದಿಂದ ತಪ್ಪಿಸಿಕೊಳ್ಳಲು ಶಂಕರನಿಗೆ ಮೈಒಪ್ಪಿಸಿದ್ದೇನೆಂದು ಹೇಳಿದ ಒಂದೇ ಒಂದು ಸುಳ್ಳಿನಿಂದ ಹೆತ್ತ ಮಗಳನ್ನೇ ದೂರದ ಊರಿನಲ್ಲಿ ಸಾಕುವಂತಹ ಶಿಕ್ಷೆಗೆ ಗುರಿಯಾಗುತ್ತಾಳೆ. ಸಭ್ಯಸ್ಥನಾದ ಶಂಕರ, ವ್ಯಗ್ರನಾದ ವರದನಂತಹವರ ನಡವಳಿಕೆ ಭಿನ್ನವಾದರು ಹೆಣ್ಣನ್ನು ನೋಡುವ ಪರಿ ಅವಳ ದೇಹ ತನಗೆ ಮಾತ್ರ ಮೀಸಲು ಎಂದು ಅಧಿಪತ್ಯ ಸ್ಥಾಪಿಸುವಲ್ಲಿ ಹೆಣ್ಣಿನ ಶೀಲಕ್ಕೆ ಕೊಡುವ ಪಾವಿತ್ರ್ಯತೆ, ತೆಗೆಯ ಹೊರಟವರಿಗೆ ಇರುವುದಿಲ್ಲ.

ಇತ್ತೀಚೆಗೆ ಅತ್ಯಾಚಾರದ ಅಬ್ಬರ ಹೆಚ್ಚಾಗುತ್ತಿದೆ. ೨೧ನೇ ಶತಮಾನದಲ್ಲಿ ಪುರುಷರಿಂದ ಹೆಣ್ಣಿನ ಮೇಲೆ ಕ್ರೂರರೀತಿಯ ಅತ್ಯಾಚಾರಗಳು ನಡೆಯುತ್ತಿವೆ. ಇತ್ತೀಚೆಗೆ (೨೦೧೨ರಲ್ಲಿ) ನಡೆದ ದೆಹಲಿಯ ನಿರ್ಭಯ ಪ್ರಕರಣ ಯಾವ ಕಾಲಕ್ಕು ಮರೆಯುವಂತಿಲ್ಲ. ದಿನನಿತ್ಯದ ಪತ್ರಿಕೆಗಳಲ್ಲಿ ಅತ್ಯಾಚಾರದ ವಿಷಯವಿಲ್ಲದ ವಿಷಯವೇ ಇಲ್ಲ. ಪ್ರಾಪ್ತರು, ಅಪ್ರಾಪ್ತ ಬಾಲಕಿಯರ ಮೇಲೆ ಸಂಬಂಧದ ಅಹಮ್ಮಿಕೆಯಿಲ್ಲದೆ ಅತ್ಯಾಚಾರಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ವರ್ಷಕ್ಕೆ ಕನಿಷ್ಠ ೪೩೦೦ ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತಿವೆ. ದಿನಕ್ಕೆ ೧೨ ಅತ್ಯಾಚಾರ ಪ್ರಕರಣಗಳು ಎರಡು ಗಂಟೆಗೆ ಒಂದರಂತೆ ಪ್ರಕರಣ ನಡೆಯುತ್ತಿವೆ ಎಂದಾಯಿತು. ವರದಿಯಲ್ಲಿ ಪ್ರಕರಣಕ್ಕೆ ಬಾರದಿರುವುದು ಇನ್ನೆಷ್ಟೊ? ಎಂಬ ಪ್ರಶ್ನೆ ಉಂಟಾಗುತ್ತದೆ. ಅತ್ಯಾಚಾರದ ಹಿಂಸೆಗೊಳಪಟ್ಟ ಹೆಣ್ಣು ಸಮಾಜದ ಹಿಂಸೆಯನ್ನು ಎದುರಿಸಲು ಸಿದ್ಧವಾಗಿರಬೇಕು. "ಶೇ. ೬೦ರಷ್ಟು ಪ್ರಕರಣಗಳಲ್ಲಿ ಅತ್ಯಾಚಾರಕ್ಕೆ ಒಳಗಾದ ಮಹಿಳೆಯನ್ನು ಅವಳ ಮನೆಯವರೇ ಹೀನಾಯವಾಗಿ ಕಾಣುತ್ತಾರೆ! ಶೇ.೨೫ರಷ್ಟು ಪ್ರಕರಣಗಳಲ್ಲಿ ಅತ್ಯಾಚಾರಿಯನ್ನು ತೊಂದರೆಗೀಡುಮಾಡುವುದಕ್ಕಾಗಿ ಮಾನಭಂಗಕ್ಕೊಳಗಾದ ಮಹಿಳೆಯನ್ನೇ ದೂರುತ್ತಾರೆ. ಶೇ.೨೫ರಷ್ಟು ಪ್ರಕರಣಗಳಲ್ಲಿ ಮಹಿಳೆಯ ಬಗ್ಗೆ ಯಾವುದೇ ರೀತಿಯ ಅಸಮಾದಾನವನ್ನು ವ್ಯಕ್ತಪಡಿಸಿಲ್ಲ ಕೇವಲ ಬೆರಳೆಣಿಕೆಯಷ್ಟು ಪ್ರಕರಣಗಳಲ್ಲಿ ಮಾತ್ರ ಅತ್ಯಾಚಾರಿಗೆ ಛೀಮಾರಿ ಹಾಕಿದ್ದಾರೆ"[೩೫] ಎಂಬ ವರದಿಯ ಆಧಾರದ ಮೇಲೆ ಅತ್ಯಾಚಾರಿಯ ಜೀವನ ತಿಳಿಯುತ್ತದೆ. ಅತ್ಯಾಚಾರ ಮಾಡಿದ ವ್ಯಕ್ತಿಗೆ ಕಾನೂನಿನ ರೀತ್ಯವಾಗಿ ಶಿಕ್ಷೆಯಾದರೆ ಮುಗಿಯಿತು, ಆತನ ಶೀಲದ ಮೇಲೆ ಯಾರು ಶಂಕಿಸುವುದಿಲ್ಲ.

ಹೆಣ್ಣಿಗಿರುವ ಶೀಲ, ಪಾವಿತ್ರ್ಯತೆಯನ್ನು ಗಂಡಿಗು ಹೊರಿಸುವುದರಿಂದ ಅತ್ಯಾಚಾರಗಳು ಕಡಿಮೆಯಾಗಬಹುದು ಅಥವಾ ಅತ್ಯಾಚಾರಕ್ಕೊಳಪಟ್ಟ ಹೆಣ್ಣನ್ನು ಸ್ವೀಕರಿಸುವ ಮನೋಭಾವ ಸಮಾಜದಲ್ಲಿ ಬರಬೇಕು. ರೇಖಾ, ಜಯಾ ಇಂತಹ ವಿಷಯಗಳನ್ನು ತುಂಬಾ ಗಾಢವಾಗಿ

ವಿವೇಚನಾಯುಕ್ತವಾಗಿ ಚರ್ಚಿಸುತ್ತಾರೆ. "ಶೀಲ ಹೆಣ್ಣಿಗಷ್ಟೇ ಅಲ್ಲ ಗಂಡಿಗೂ ತುಂಬ ಮುಖ್ಯ ಅಂತ ನನ್ನ ಭಾವನೆ. ಜನಗಳು ದನಗಳಾಗದಂತೆ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕೆ ತಾವಾಗಿಯೇ ಹಾಕಿಕೊಂಡಿರುವಂಥ ಶಿಸ್ತಿನ ಚೌಕಟ್ಟು ಅದು"[೩೬] ಎನ್ನುವ ರೇಖಾಳಂತಹ ಅನಿಸಿಕೆ ಎಲ್ಲರಲ್ಲು ಮೂಡಿದಾಗ ಅತ್ಯಾಚಾರಿಗಳ ಮೇಲೂ ಅಪವಾದಗಳು ಉಂಟಾಗಿ ನಿರ್ನಾಮ ಮಾಡಬಹುದು. ಈ ರೀತಿಯ ಆಲೋಚನೆಗಳಿಂದ ಮುಂದೆ ಮಗಳನ್ನು ತನ್ನ ಬಳಿಯೆ ಇಟ್ಟುಕೊಳ್ಳುವಲ್ಲಿ ಯಶಸ್ವಿಯಾಗುತ್ತಾಳೆ.

ರೇಖಾಳ ಗೆಳತನ ಸಂಘದ ವೈಚಾರಿಕ ವಿಚಾರಗಳು ಜಯಾಳ ನಡತೆಯನ್ನು ಮಾತ್ರವಲ್ಲ ಆಲೋಚನೆಗಳನ್ನು ಬದಲಾಯಿಸಿರುತ್ತವೆ. ಕನಕಾಳ ಸಾವಿನ ನಂತರ ಹಳ್ಳಿಗೆ ಮರಳಿದ ಜಯಾ ಹೊಸ ದಾರಿಯಲ್ಲಿ ನಡೆದಾಗ "ದಿನಾ ಮೈತೊಕ್ಕೊಂಡು ದಿನಾತಲೆ ಕೆರ್ಕೊಳಾಕೆ ನೀನೇನು ಪ್ಯಾಟಿ ಊರಿನ ಸೂಳೆ ಕೆಟ್ಟೋದ್ಯಾ?"[೩೭] ಎಂಬ ಹೊಸ ಆರೋಪಗಳು ಕೇಳಿ ಬರುತ್ತವೆ. ಜಯಾಳ ವರ್ತನೆ ಸರಿಕಾಣದ ಮನೆಯವರು ಶಿವಮಲ್ಲುವಿಗೆ ಎರಡನೇ ಮದುವೆ ಮಾಡುತ್ತಾರೆ. ಆದರೂ ಜಯ ಪ್ರತಿಭಟಿಸಲಿಲ್ಲ. ತಬ್ಬಲಿಯಾದ ಕಾಂತಯ್ಯನ ಮಕ್ಕಳಿಗೆ ತಾಯಿಯಾಗುವ ಅಲ್ಲದೆ ಕಾಂತಯ್ಯನ ವಿಚಾರಗಳು, ಜಯಾಳ ವಿಚಾರಗಳು ಒಂದೇ ಆಗಿದ್ದರಿಂದ ಕಳೆದುಕೊಂಡಿದ್ದ ಬದುಕನ್ನು ಮತ್ತೊಮ್ಮೆ ಕಟ್ಟಿಕೊಳ್ಳುವ ಕನಸು ಕಾಣುತ್ತಾಳೆ. ಶಿವಮಲ್ಲು ಮತ್ತೊಬ್ಬಳನ್ನು ಮದುವೆಯಾಗುವ ಸ್ವಾತಂತ್ರ್ಯವಿರುವಾಗ ಜಯಾಳಿಗು ಆ ಸ್ವಾತಂತ್ರ್ಯವಿರಬಾರದೇಕೆ? ಜಯಾಳು ಆ ನೆಲೆಯಲ್ಲಿಯೆ ಯೋಚಿಸುತ್ತಾಳೆ. ಜಯಾ ಸಂಪ್ರದಾಯದ ಹೆಸರಿನಲ್ಲಿ ಮರ್ಯಾದೆಗೆ ಅಂಜಿ ಬದುಕುವ ಹೆಣ್ಣಾಗಿರುವುದಿಲ್ಲ. ತನ್ನ ಸುಖಕ್ಕಾಗಿ ಹೊಸ ಬದುಕಿಗಾಗಿ ಹಾತೊರೆಯುತ್ತಿದ್ದಂತೆ ಅನಾಮಿಕನೊಬ್ಬನಿಂದ ಅತ್ಯಾಚಾರಕ್ಕೊಳಪಟ್ಟು ತಾಯಿಯಾಗುತ್ತಾಳೆ. ಬಂಜೆ ಎಂದು ನಿಂದಿಸುತ್ತಿದ್ದವರೆಲ್ಲ ಸಂತಸಿಸುತ್ತಾರೆ.

ಅದೇ ಸಂದರ್ಭದಲ್ಲಿ ಎರಡನೇ ಹೆಂಡತಿಯಾಗಿ ಬಂದಿದ್ದ ಸಾವಂತ್ರಿ ಪ್ರೀತಿಸಿದವನೊಂದಿಗೆ ಓಡಿ ಹೋಗುತ್ತಾಳೆ. ಇತ್ತ ಜಯಾ ತನ್ನ ಮನಸ್ಸು ಭಾವನಿಗಾಗಿ ಕಾತರಿಸುತ್ತಿದ್ದರು ಶಿವಮಲ್ಲು ಜೊತೆ ಬದುಕುವ ನಿರ್ಧಾರ ಮಾಡುತ್ತಾಳೆ. ಸಮಾಜದಲ್ಲಿ ಆಸರೆ ತಪ್ಪಿದ ಎಷ್ಟೊ ಅಬಲೆಯರಿಗೆ ತಾವು ಆಸರೆ ನೀಡುತ್ತೇವೆಂದು ಹೆಣ್ಣಿಗೆ ಗಂಡಿನ ಆಸರೆ ಮುಖ್ಯವೆಂಬಂತೆ ಸೃಷ್ಟಿಯಾಗಿರುವ ನಡುವೆ ಎರಡನೆ ಹೆಂಡತಿಯನ್ನು ಕಳೆದುಕೊಂಡು ದುಃಖಿಸುತ್ತಿರುವವನಿಗೆ ಜಯಾ ಆಸರೆಯಾಗುತ್ತಾಳೆ.

'ನೆಲೆ-ಬೆಲೆ' ಕಾದಂಬರಿಯಲ್ಲಿ ಹೆಣ್ಣಿನ ಮೇಲಿನ ಶೋಷಣೆಯ ಹಲವು ಮುಖಗಳು ತೆರೆದುಕೊಂಡಿವೆ. ಬಂಜೆಯಾಗಿದ್ದ ಜಯಾರಂತಹವರು ತಾಯಿಯಾಗಿ ಸುಖಸಂಸಾರ

ನಡೆಸಬೇಕೆಂಬ ಬಯಕೆ ಹೊತ್ತವರಲ್ಲ. ಸ್ವಇಚ್ಛೆಯಿಂದ ಬದುಕುವ ಕನಸು ಕಂಡವರು. ಜಯಾಳ ಒಂದು ರಾತ್ರಿಯ ಸವಿಗನಸಿನಿಂದ ಮೈಮರೆತು ಗರ್ಭಿಣಿಯಾದಾಗಲು ಅದನ್ನು ಹೇಳಿಕೊಳ್ಳುವ ಪ್ರಯತ್ನ ಮಾಡಲಿಲ್ಲವಲ್ಲ ಎಂದು ನಿಂದಿಸುವವರಿಗೆ ತಕ್ಕ ಉತ್ತರವನ್ನು ನೀಡಲಾಗಿದೆ. ಶೀಲ ಪಾವಿತ್ರ್ಯತೆಯ ಬಗ್ಗೆ ತಲೆಕೆಡಿಸಿಕೊಳ್ಳದೆ ವ್ಯವಸ್ಥೆಗೆ ಹೊಂದಿಕೊಳ್ಳುವ ಮೂಲಕ ಒಂದು ಸಂಸಾರ ಸೃಷ್ಟಿಸಿಕೊಂಡ ಘನತೆಗೆ ತಕ್ಕ ಸೊಸೆಯಾಗುತ್ತಾಳೆ.

ಈ ಕಾದಂಬರಿಯಲ್ಲಿ ಗ್ರಾಮೀಣ ಬದುಕಿನ ಜನರ ಜೀವನ ಬಿತ್ತರಗೊಂಡಿದೆ. ಸಮಾಜ ಮುಂದುವರಿಯುತ್ತಿದೆ. ಆದರೂ ಗ್ರಾಮೀಣ ಪ್ರದೇಶಗಳು ಹಾಗೆಯೇ ಉಳಿದಿರುವುದರ ಸೂಚನೆಯು ಕಂಡುಬರುತ್ತದೆ. ಅಲ್ಲಿ ಹೆಣ್ಣು ಹಳೆಯ ನಂಬಿಕೆಗಳಿಗೆ ಬಲಿಯಾಗುತ್ತಿದ್ದಾಳೆ. ಜಯಾ ಬಂಜೆತನದ ಆರೋಪಕ್ಕೆ ಒಳಗಾಗಿದ್ದಾಳೆ. ಅವಳ ಬಂಜೆತನಕ್ಕೆ ಕಾರಣವೇನು? ಅಥವಾ ಅವಳು ಬಂಜೆಯಾಗಿದ್ದಾಳೆಯೇ? ಎಂಬ ಪ್ರಶ್ನೆಯನ್ನು ಹಾಕಿಕೊಳ್ಳದೇ, ಯಾವುದೇ ಪರೀಕ್ಷೆಗೂ ಒಳಪಡಿಸದೇ ಆಕೆಯನ್ನು ನಿಂದಿಸುವುದು ಸಮಾಜದಲ್ಲಿ ಗ್ರಾಮೀಣ ಪ್ರದೇಶಗಳ ಅಜ್ಞಾನವನ್ನು ತೋರಿಸುತ್ತದೆ. ಬದಲಾವಣೆ ಎಂಬುದು ಎಲ್ಲರಿಗೂ ಒಪ್ಪಿತವಾಗಿರುತ್ತದೆ. ಅಂತಹ ಮನವರಿಕೆಗಳು ಗ್ರಾಮೀಣ ಪ್ರದೇಶದಲ್ಲಿ ಉಂಟಾಗಬೇಕು. ಇಲ್ಲಿ ಜಯಾ ಶುಚಿತ್ವದಿಂದಿರುವುದನ್ನು "ಜೈ ಪ್ಯಾಟಿಗೆ ಹ್ವಾಗಿ ಬಂದ ಮ್ಯಾಲೆ ಮುಂಚಿನಂಗಿಲ್ಲ..... ಕೂಂತಲ್ಲೇ ಕುಂತ್‌ಬಿಡ್ತಾಳೆ; ನಿಂತಲ್ಲೆ ನಿಂತ್‌ಬಿಡ್ತಾಳೆ. ಒಂದೊಂದಪ ಮೈಮ್ಯಾಲೆ ಗ್ಯಾನೇನೆ ಇರಕಲ್ಲ! ಗಾಳಿಗೀಳಿ ಏನಾರ ಸೇರಕೊಂಡೈತೇನೋ ಅಂತೀನಿ!"[೩೮] ಎಂದು ಮಾತನಾಡಿಕೊಳ್ಳುವಲ್ಲಿ ಬದುಕಿನ ಎಲ್ಲಾ ಸನ್ನಿವೇಶಗಳನ್ನು ಮೂಢನಂಬಿಕೆಯ ಒರೆಹಚ್ಚಿ ನೋಡುವುದು ಕಂಡುಬಂದಿದೆ. ಅದರಲ್ಲೂ ಒಂದು ಹೆಣ್ಣು ಮೊದಲಿಗಿಂತ ಬದಲಾದರೆ ಅವಳನ್ನು ಹೀಗೆಳೆಯುತ್ತಾ ಬದುಕುವ ಹುನ್ನಾರಗಳು ಬಿತ್ತರಗೊಂಡಿವೆ. ಇಂತಹ ಮನಸ್ಥಿತಿಯವರ ನಡುವೆ ಜಯಾ ಬದುಕುವುದು ಕಷ್ಟಕರವಾಗಿರುತ್ತದೆ. ಬದಲಾವಣೆಯನ್ನು ಒಪ್ಪಿಕೊಳ್ಳುವಲ್ಲಿ ಇವರಿಗಿರುವ ಪೂರ್ವಗ್ರಹ ಪೀಡನೆ ಹೆಣ್ಣು ನಿಯಮಗಳಡಿಯಲ್ಲಿ ಬದುಕುಬೇಕಾದವಳು ಎಂಬುದಾಗಿದೆ. ಇದು ಕೇವಲ ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರವಲ್ಲ, ನಗರ ಪ್ರದೇಶಗಳಲ್ಲೂ ಇರುತ್ತವೆ. ಈ ನಿಟ್ಟಿನಲ್ಲಿ ರೇಖಾಳ ನಡತೆ ಕುರಿತು ಅಪಮಾನಗಳು ಕೇಳಿಬರುತ್ತವೆ. ಇಂತಹ ಸಮಾಜದ ಆಪಾದನೆಗಳಿಗೆ ಹೆದರಿ ಹೆಣ್ಣು ಕೂರಬಾರದು. ಅವುಗಳನ್ನು ಭೇದಿಸಿ ನಿಂತಾಗ ಮುಂದಿನ ಪೀಳಿಗೆಯವರಲ್ಲಿ ನಂಬಿಕೆ ಹುಟ್ಟುತ್ತದೆ. ಅಲ್ಲದೇ ಸತ್ಯಾಸತ್ಯತೆಗಳನ್ನು ತಿಳಿಯದೇ ಅಪವಾದಗಳ ನಂಬಿಕೆಯಲ್ಲಿ ಬಾಳಬಾರದು ಎಂಬುದನ್ನು ಶಾಂತಮ್ಮ, ಕನಕಾಳ ದುರಂತ ಕತೆಯ ಮೂಲಕ ಪರಿಚಿತವಾಗುತ್ತದೆ.

ಈ ಕಾದಂಬರಿಯಲ್ಲಿ ಎಲ್ಲಿಯೂ ಪುರುಷನಿಂದ ಹೆಣ್ಣು ಶೋಷಿತಳಾಗುವುದಿಲ್ಲ. ಪುರುಷಪ್ರಧಾನದ ಅಡಿಯಲ್ಲಿ ಬದುಕುತ್ತಿರುವ ಸ್ತ್ರೀಯರಿಂದಲೇ–ಸ್ತ್ರೀಯರಿಗೇ ಆಗುವ ಅಪಮಾನಗಳು ಎರಡು ಅಂಶವನ್ನು ಬಿಂಬಿಸುತ್ತವೆ. ಒಂದು ಪ್ರತಿಯೊಬ್ಬ ಹೆಣ್ಣು ಪುರುಷ ಪಾಲಕ ನಿಯಮಗಳಿಂದ ಹೊರಬರುವ ಸೂಚನೆಯಾದರೆ, ಮತ್ತೊಂದು ಜಯಾ ಬಂಜೆತನಕ್ಕೆ ಮೂಲಕಾರಣಕರ್ತ ಅವಳ ಗಂಡನೇ ಆಗಿದ್ದು ಅದರ ಕಲ್ಪನೆಯೂ ಇಲ್ಲದಂತೆ ಸೃಷ್ಟಿಯಾಗಿರುವ ಸಮಾಜದಲ್ಲಿ ಹೆಣ್ಣಿನ ಶೋಷಣೆಗೆ ಮೂಲ ಪುರುಷಪಾಲಕ ಎಂಬುದನ್ನು ಹೇಳುತ್ತದೆ. ಇವೆಲ್ಲಕ್ಕೂ ಮಿಗಿಲಾಗಿ ಕಾದಂಬರಿಯ ಉದ್ದಕ್ಕೂ ಗಾಂಭೀರ್ಯ ಪಡೆದಿರುವ ಬಂಜೆತನದ ಆರೋಪ ಅಂತ್ಯದಲ್ಲಿ ಪಡೆದುಕೊಳ್ಳುವ ತಿರುವು ಮುಖ್ಯವಾಗುತ್ತದೆ. ಕಾದಂಬರಿಗಾರ್ತಿ ಅನಾಮಿಕ ವ್ಯಕ್ತಿಯಿಂದ ಅತ್ಯಾಚಾರ ಪಡಿಸಿರುವ ಉದ್ದೇಶ ಹೆಣ್ಣು ನಿರ್ದೋಷಿ ಎಂಬುದನ್ನು ಸಾಬೀತುಪಡಿಸುವುದು ಮುಖ್ಯವಾಗಿ ತೋರಿಸಿದಂತಿದೆ. ಜೀವನ ಹೀಗೆ ಸಾಗುತ್ತದೆ ಎಂದು ಹೇಳುವುದು ಕಷ್ಟಕರ. ಆದರೆ ಹೆಣ್ಣು ಸ್ವ–ಜೀವನಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕು ಎಂಬ ಆಶಯ ಈ ಕಾದಂಬರಿಯಿಂದ ವೇದ್ಯವಾಗುತ್ತದೆ. ಗ್ರಾಮೀಣ ಪ್ರದೇಶದಲ್ಲಿನ ಹೆಂಗಳೆಯರಲ್ಲಿ ತಾನು ನಿರ್ದೋಷಿ ಎಂಬ ಅರಿವು ಇಲ್ಲದೇ ಕಣ್ಣೀರಿಡುತ್ತಿರುವವರನ್ನು ಎಚ್ಚರಿಸುವುದಾಗಿದೆ.

ತಾಯ್ತನದಿಂದಲೆ ಹೆಣ್ಣಿಗೆ ಮುಕ್ತಿ ಸಿಗುವುದೆಂಬ ತಪ್ಪುಕಲ್ಪನೆ ಸಮಾಜದಲ್ಲಿ ಬೇರೂರಿಬಿಟ್ಟಿದೆ. ಈ ತಪ್ಪುಕಲ್ಪನೆಯ ಹಿಂದೆ ಪುರುಷನ ಆಧಾರವನ್ನು ಗೌಣವಾಗಿಸಿಬಿಟ್ಟಿದೆ. “ಮಹಿಳೆಯೊಬ್ಬಳ ಬದುಕುವ ಹಕ್ಕಿಗೂ ಅವಳ ಸಂತಾನೋತ್ಪತ್ತಿ ಸಾಮರ್ಥ್ಯಕ್ಕೂ ನೇರವಾಗಿ ತಳುಕು ಹಾಕುವ ಸಮಾಜ ಪುರುಷನ ಬದುಕಿಗೂ ಅವನ ಸಂತಾನ ಶಕ್ತಿಗೂ ತಳಕು ಹಾಕುವದಿಲ್ಲ. ಎಲ್ಲ ವೈಜ್ಞಾನಿಕ ತಿಳುವಳಿಕೆ, ಮಾನವೀಯ ವಿಶ್ಲೇಷಣೆ ಬದಲಾಗುತ್ತಿರುವ ಸಾಮಾಜಿಕ ಸ್ಥಾನಮಾನಗಳ ನಡುವೆಯೂ ಮಹಿಳೆ ಬಂಜೆತನವನ್ನು ಅವಳ ಅಸ್ತಿತ್ವದ ಪ್ರಜ್ಞೆಯಾಗಿ ಪರಿಗಣಿಸುತ್ತಿರುವುದು ನಾಗರಿಕ ಸಮಾಜದ ಕ್ರೂರ ವ್ಯಂಗ್ಯಗಳಲ್ಲೊಂದಾಗಿದೆ”.[೩೯] ಇದಕ್ಕೆ ಪುರುಷಪ್ರಧಾನ ಸಮಾಜವೇ ಪ್ರಮುಖ ಕಾರಣವಾಗಿದ್ದು ಇಂದು ವೈಜ್ಞಾನಿಕತೆ ಜಗತ್ತಿನಾದ್ಯಂತ ಹರಡಿದ್ದರೂ ಇವತ್ತಿಗೂ ಮಕ್ಕಳಾಗದಿರಲು ಹೆಣ್ಣನ್ನೆ ಗುರಿಮಾಡುವುದರಲ್ಲಿ ಹಳ್ಳಿ, ಪಟ್ಟಣ, ನಗರವೆಂಬ ಭೇದವಿಲ್ಲ ಎಂಬುದು ಈ ಮೇಲಿನ ಎರಡು ಕಾದಂಬರಿಗಳಿಂದ ಮನನವಾಗುತ್ತದೆ.

## ಗಂಡಸರು

ಕಾದಂಬರಿಗಾರ್ತಿ ವೀಣಾ ಶಾಂತೇಶ್ವರರವರು ೧೯೭೮ರ ವೇಳೆಗೆ ಈ ಕಾದಂಬರಿ ಬರೆದಿದ್ದರೂ ಪ್ರಸ್ತುತ ಸಮಾಜಕ್ಕೆ ತೀರಾ ಹತ್ತಿರವಾದಂತಿದೆ. ಹೆಂಗಳೆಯರು ಗಂಡಸರ

ಸವಿನುಡಿಗಳಿಗೆ ಮರುಳಾಗಿ ಮೋಹವೆಂಬ ಪಾಶಕ್ಕೆ ಬಲಿಯಾಗುತ್ತಿದ್ದಾರೆ. ಅಂಥವರನ್ನು ಜಾಗೃತಗೊಳಿಸುವಂತೆ ಈ ಕಾದಂಬರಿ ಚಿತ್ರಿತವಾಗಿದೆ. ಇಲ್ಲಿನ ಕಥಾವಸ್ತು ಮುಖವಾಡ ಧರಿಸಿದ್ದ ನಾಲ್ಕು ಜನ ಗಂಡಸರ ಕಪಿಮುಷ್ಠಿಗೆ ಸಿಲುಕಿ ಶೋಷಣೆಗೆ ಒಳಗಾಗುವ ಒಂದು ಹೆಣ್ಣಿನ ಚಿತ್ರಣವಾಗಿದೆ.

ಪ್ರೀತಿ–ಪ್ರೇಮ ಎಂಬ ಹೆಸರಿನಲ್ಲಿ ಎಷ್ಟೋ ಹೆಣ್ಣು ಮಕ್ಕಳ ಜೀವನ ಹಾಳಾಗಿದೆ. ಹಾಳುಮಾಡಿದ ಗಂಡಸರು ಮಾತ್ರ ಸಮಾಜದ ದೃಷ್ಟಿಯಿಂದ ತಪ್ಪಿಸಿಕೊಳ್ಳುತ್ತಾರೆ. ಅಲ್ಲಿ ಸಿಲುಕುವವಳು ಹೆಣ್ಣು. ಸಮಾಜ ಹೆಣ್ಣನ್ನೇ ಬೆರಳುಮಾಡಿ ತೋರಿಸುತ್ತದೆ. ಇಂಥ ಪ್ರೀತಿ–ಪ್ರೇಮ ಎಂಬ ಹೆಸರಿನಲ್ಲಿ ಬಲಿಯಾದವಳು ಕಾದಂಬರಿಯ ಮೊದಲಿನಿಂದ ಕೊನೆಯತನಕ ಕಾಣಿಸಿಕೊಳ್ಳುವ ಶಾಂತಿ ಈ ಕಥೆಯ ಕೇಂದ್ರಬಿಂದು. ಮೊದಲಿಗೆ ಶಂಕರ ಶಾಂತಿಯನ್ನು ಪ್ರೀತಿಸುತ್ತಿರುವುದಾಗಿ 'ಐ ಲವ್ ಯು ಶಾಂತಿ' ಎಂದು ಪತ್ರ ಬರೆಯುತ್ತಾನೆ. ಈ ಪತ್ರ ಓದಿದಾಗ ಶಾಂತಿ ಪುಳಕಗೊಂಡರೂ ಪ್ರೇಮದ ಗುಂಗಿನಲ್ಲಿ ಕಳೆದು ಹೋಗುವುದಿಲ್ಲ ಇಂತಹ ವಿಷಯಗಳಿಗೆ ಸೊಪ್ಪು ಹಾಕಬಾರದೆಂದೇ ಯೋಚಿಸುತ್ತಾಳೆ. ಕಾರಣ ಇಷ್ಟೇ ಸಮಾಜದಲ್ಲಿ ಹೆಣ್ಣಿಗೊಂದು–ಗಂಡಿಗೊಂದು ನಿಯಮಗಳಿರುವುದನ್ನು ಚೆನ್ನಾಗಿ ಅರಿತಿದ್ದರಿಂದಲೇ "ಗಂಡಸರು ಏನು ಮಾಡಿದರೂ ತಪ್ಪಲ್ಲ, ಹೆಂಗಸರಿಗೇ ಎಲ್ಲ ರೂಲ್ಸು, ಕಟ್ಟು, ಮಣ್ಣು"[೪೦] ಎನ್ನುತ್ತಾ ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಮನೋಭಾವ ವ್ಯಕ್ತಪಡಿಸುತ್ತಾಳೆ. ತನಗರಿವಿಲ್ಲದಂತೆಯೇ ಶಂಕರನ ಪ್ರೀತಿಗೆ ವಾಲುತ್ತಾಳೆ. ಶಂಕರ, ಶಾಂತಿಯನ್ನು ಪ್ರೀತಿಸುತ್ತಿರುವ ಅಧಿಕಾರದಿಂದ ಅಲ್ಲಿ ಇಲ್ಲಿ ಓಡಾಡುವುದನ್ನು ನಿಲ್ಲಿಸುವಂತೆ ಆಜ್ಞಾಪಿಸುತ್ತಾನೆ. ಶಾಂತಿ ಆ ಮಾತಿನ ಪರಿವೆಯೂ ಇಲ್ಲದೆ ಸ್ತ್ರೀಪರ ಕಾಳಜಿಯುಕ್ತಳಾಗಿದ್ದರಿಂದ ಸ್ತ್ರೀ ಸಮಾನತೆ, ಸ್ತ್ರೀ ಸ್ವಾತಂತ್ರ್ಯ ಅಂಶಗಳನ್ನು ಕುರಿತಂತೆ ಭಾಷಣ ಮಾಡುವುದು ಅವಳಿಗೆ ತಪ್ಪಾಗಿ ಕಂಡಿರುವುದಿಲ್ಲ. ಅದು ಸಮಾಜಕ್ಕೆ ಪೂರಕವಾದದ್ದೇ ವಿನಹ ಮಾರಕವಾದುದ್ದಲ್ಲ. ಶಂಕರನ ದೃಷ್ಟಿಯಲ್ಲಿ ಇವು ತಪ್ಪಾಗಿ ತೋರುತ್ತವೆ. ಶಾಂತಿಯನ್ನು ತಿರಸ್ಕರಿಸುತ್ತಾನೆ. ಹೆಂಡತಿಯಾಗುವವಳು ತಾನು ಹೇಳಿದಂತೆ ಕೇಳಬೇಕು ಎಂಬಂತೆ ಕಂಡುಬರುವಲ್ಲಿ ಶಂಕರ ಮೊದಲ ವ್ಯಕ್ತಿಯಾಗಿದ್ದಾನೆ.

ಶಂಕರನ ಪ್ರೀತಿಯಿಂದ ಆಘಾತಗೊಂಡಿದ್ದ ಶಾಂತಿ ಸ್ತ್ರೀ ಸಮಾನತೆಯ ಕೆಲಸಕಾರ್ಯಗಳಲ್ಲಿ ಹುರುಪನ್ನು ಕಳೆದುಕೊಳ್ಳುವುದಿಲ್ಲ. ಇವಳ ಆಶಾಗೋಪುರಗಳಿಗೆ ಇಂಬುಕೊಡುವಂತೆ ಶಾಂತಿಯ ಮೇಲೆ ಕಾಮೋದ್ರಿಕ್ತನಾಗಿ ಕಂಡುಬರುವವನು ಪ್ರೊ.ಮಠದ. ಶಾಂತಿಯ ಭಾಷಣವನ್ನು ಹೊಗಳುತ್ತಾ ಸ್ತ್ರೀ ಪರ ಕಾಳಜಿ ಕುರಿತಂತೆ ಮೋಡಿ ಮಾತುಗಳನ್ನಾಡುತ್ತಾನೆ. ಹಂತ ಹಂತವಾಗಿ ಶಾಂತಿಯನ್ನು

ತನ್ನತ್ತ ವಾಲುವಂತೆ ಮಾಡಿಕೊಳ್ಳುತ್ತಾನೆ. ಕೊನೆಗೆ ಶಾಂತಿ ತಾನಾಗಿಯೇ ತನಗೆ ದಕ್ಕುವಂತೆ “ನನಗ ಗೊತ್ತದ, ನಿನ್ನ boldness ಎಲ್ಲಾ ಬರೇ ಭಾಷಣದಾಗ, ಬಾಯಿ ಮಾತಿನ್ಯಾಗ. Freedom ಇರಬೇಕು ಹೆಂಗಸರಿಗೆ–ಅಂತೀದಿ. ಆದರ ಸ್ವತಃ ನಿನಗ ನೀನ ಒಂದನೂರು Restrictions ಹಾಕ್ಕೊಂಡೀದಿ. ನಿನ್ನದು ನಾ ಎಣಿಸಿಧಾಂಗ ‘Take all give all’ ಥರದ ಪ್ರೀತಿ ಅಲ್ಲ. ಒಂದ ನಮೂನೀ ಮಡೀ ಪ್ರೀತಿ. Extremeಗೆ ಹೋಗೋ ಧೈರ್ಯಾ ಇಲ್ಲ ನಿನಗ”[೪೧] ಎಂದು ಸ್ತ್ರೀ ಸಮಾನತೆಯ ಅಡಿಯಲ್ಲಿ ಪುರುಷನಿಗೆ ಇಚ್ಚಾ ಪೂರಕವಾಗಿ ನಡೆದುಕೊಳ್ಳುವಂತಹ ಮಾತುಗಳನ್ನಾಡುತ್ತಾನೆ. ಈ ಮಾತುಗಳಿಗೆ ಕರಗಿದ ಶಾಂತಿ ತನ್ನನ್ನು ತಾನು ಅರ್ಪಿಸುವ ನಿರ್ಧಾರದಲ್ಲಿ ಮಠದನ ಕಾಮುಕತನ ಗೆಳತಿಗೂ ಬರೆದಿದ್ದ ಪತ್ರದಿಂದ ಅರಿವಾಗುತ್ತದೆ. ಮಠದ ಈಗಾಗಲೇ ಮದುವೆಯಾಗಿರುವ ವ್ಯಕ್ತಿ. ಅಲ್ಲದೆ ಶಾಂತಿಗೆ ಹೇಳುತ್ತಿದ್ದ ಮಾತುಗಳನ್ನೇ ಗೆಳತಿಗೂ ಹೇಳಿ ಬರೆದಿದ್ದ ಪತ್ರದಿಂದ ಈಗಾಗಲೇ ಸಾಕಷ್ಟು ಹೆಂಗಳೆಯರನ್ನು ಮೋಸಗೊಳಿಸಿರುವ ಸಂಗತಿ ತಿಳಿಯುತ್ತದೆ.

ಮುಂದೆ ಶಾಂತಿ ಸ್ಥಳವನ್ನು ಬದಲಾಯಿಸುತ್ತಾಳೆ. ಮುಂಬೈನಲ್ಲಿ ಮಾಂಶಿಯ ಮನೆಯನ್ನು ಸೇರುತ್ತಾಳೆ. ಅಲ್ಲಿಯೇ ‘ಕೈಗಾರಿಕಾ ಸಾಮಾನುಗಳ ಶೋ ರೂಮ್‌ನಲ್ಲಿ ರಿಸೆಪ್ಶನಿಸ್ಟ್’ ಆಗಿ ಕೆಲಸಕ್ಕೆ ಸೇರುತ್ತಾಳೆ. ಅಲ್ಲಿ ಪರಿಚಯವಾದ ಎರಡನೇ ವ್ಯಕ್ತಿ ರಮಾಕಾಂತಶಿಂಧೆ. ಈತನ ಸಹಜತೆ, ಸ್ನೇಹತನ ಶಾಂತಿಯಲ್ಲಿ ಹಿರಿಯ ಅಣ್ಣನ ಭಾವನೆ ಹುಟ್ಟಿಸುತ್ತದೆ. ಆನಂತರ ಗೆಳೆತನವಾಗಿ ಮದುವೆಯ ಹಂತಕ್ಕೂ ತಲುಪುತ್ತಾರೆ. ಮದುವೆಯಾಗುವ ಹೆಣ್ಣು ಸಂಪೂರ್ಣವಾಗಿ ಮದುವೆಯಾಗುವವನಿಗೆ ಸೀಮಿತವಾಗಿರ–ಬೇಕೆಂದು ಬಯಸುವ ಗಂಡಸರ ದರ್ಶನವನ್ನು ಮಠದನಿಂದ ಮೂಡಿಬಂದಿದೆ. ಇದು ಗಂಡಸರಿಗೆ ಅನ್ವಯಿಸದಿರುವುದು ಶಾಂತಿಯ ಪ್ರಾಮಾಣಿಕ ಪ್ರೀತಿಗೆ ಬೆಲೆ ಇಲ್ಲದಂತಾಗಿದೆ. ಶಿಂಧೆಯು ಈಗಾಗಲೇ ಮದುವೆಯಾಗಿರುವ ವ್ಯಕ್ತಿ. ಹೆಂಡತಿಯನ್ನು ಬಿಟ್ಟು ಮುಂಬೈಗೆ ಬಂದಿರುವ ಕಾರಣ, ಮದುವೆಗೂ ಮುಂಚೆ ಒಬ್ಬಳನ್ನು ಪ್ರೇಮಿಸಿದ್ದು, ಸಂಸಾರವನ್ನು ಮಾಡಿದ್ದು, ಅವಳು ಮತ್ತೊಬ್ಬನನ್ನು ಮದುವೆಯಾಗಿ ಶಿಂಧೆಯನ್ನು ತಿರಸ್ಕರಿಸಿದ್ದಳು. ಆನಂತರ ಇಷ್ಟವಿಲ್ಲದೆ ಹಳ್ಳಿ ಹೆಣ್ಣನ್ನು ಮದುವೆಯಾಗಿ ಸಂಸಾರಸ್ಥನಾಗಲು ಇಷ್ಟಪಡದೆ ಹೆಂಡತಿಯನ್ನು ಬಿಟ್ಟು ಬಂದಿರುತ್ತಾನೆ. ಇವನ ಈ ತಪ್ಪುಗಳ ಮುಂದೆ ಶಾಂತಿಯ ತಪ್ಪು ಒಂದು ಪ್ರಮಾಣದಷ್ಟು ಇಲ್ಲ. ಶಾಂತಿ ಕೇವಲ ಪ್ರೀತಿಯ ಮೋಸಕ್ಕೆ ಬಲಿಯಾಗಿರುತ್ತಾಳೆ. ಶಿಂಧೆಯಂತೆ ಈ ಹಿಂದೆ ಸಂಸಾರಸ್ಥೆಯಾಗಿರುವುದಿಲ್ಲ. ಆದರೆ ಈಗ ಶಿಂಧೆಯನ್ನು ನಂಬಿ living together ಸಂಬಂಧದಲ್ಲಿ ಶಿಂಧೆಯ ಸಂಪೂರ್ಣ ಸ್ವತ್ತಾಗಿರುತ್ತಾಳೆ. ಒಮ್ಮೆ ಹೀಗೆಯೇ ಇಬ್ಬರೂ

ಹಿಂದಿನ ಘಟನೆಗಳನ್ನು ಹಂಚಿಕೊಂಡಾಗ ಶಾಂತಿ ಶಿಂಧೆಯನ್ನು ಕ್ಷಮಿಸುತ್ತಾಳೆ. ಶಿಂಧೆ ಮಾತ್ರ ಶಾಂತಿಯೊಂದಿಗೆ ಬಾಳಲು ಇಚ್ಛಿಸಿದೆ "ನನ್ನನ್ನು ಕ್ಷಮಿಸು ಶಾಂತೀ ಇಷ್ಟೊಂದನ್ನು ತಡೆದುಕೊಳ್ಳಲು ನಾನು ಅಸಮರ್ಥ. ನನ್ನ ಹೃದಯ ಒಡೆದು ಹೋಗುತ್ತಿದೆ. ಈ ಜೀವನದಲ್ಲಿ ಮತ್ತೊಮ್ಮೆ ಸೋತಿರುವೆ ನನ್ನನ್ನು ಮರೆತುಬಿಡು, ಕ್ಷಮಿಸುಬಿಡು"[೪೨] ಎಂದು ಪತ್ರ ಬರೆದು ಹೊರಟುಹೋಗಿರುತ್ತಾನೆ.

ಶಾಂತಿ ಶಂಕರ, ಮತದನನ್ನು ಪ್ರೀತಿಸಿದ್ದೇ ತಪ್ಪಾ? ಹಾಗಾದರೆ ಅವರಿಬ್ಬರ ಮೋಸಕ್ಕೆ ಅವರಿಗೆ ಯಾವ ಶಿಕ್ಷೆ? ಶಾಂತಿಯದು ತಪ್ಪೇ ಆದರೆ, ಶಿಂಧೆಯದು ಮಹಾ ಅಪರಾಧವಲ್ಲವೇ? ಆದರೂ ಸಮಾಜ ಶಂಕರ, ಮತದ, ಶಿಂಧೆಯಂತಹವರನ್ನು ರಕ್ಷಿಸುತ್ತಿದೆ, ಅಭಿನಂದಿಸುತ್ತಿದೆ. ಅವರೆಲ್ಲರಿಗೂ ಜೀವನವಿದೆ ಎಂದಾದರೆ, ಶಾಂತಿಗೂ ಬದುಕು ಇದೆ ಎಂಬುದನ್ನು ಕಾದಂಬರಿಗಾರ್ತಿ ತೋರಿಸಿಕೊಟ್ಟಿದ್ದಾರೆ. ಮುಂದೆ ಜಾನ್ ಅಶೋಕ್ ಕುಮಾರ್ ಎಂಬ ವ್ಯಕ್ತಿ ನಡೆಸುತ್ತಿದ್ದ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರುತ್ತಾಳೆ. ಜಾನ್‌ಅಶೋಕ್‌ಕುಮಾರ್ ಈ ಮೂವರಿಗಿಂತ ಹೊರತಾಗಿರಲಿಲ್ಲ. "ನನಗೆ ಗೊತ್ತಿದೆ ಮಿಸ್ ಕಾಮತ. ನಾವು ಎಷ್ಟೇ ಮುಂದುವರಿದರೂ, ಕ್ರಾಂತಿಯ ಮಾತಾಡಿದರೂ ಸ್ವಾತಂತ್ರ್ಯ ಹಕ್ಕುಗಳ ಬಗ್ಗೆ ಹೋರಾಡಿದರೂ, ನಂ ದೇಶದಲ್ಲಿ ಯಾವಾಗ್ಲೂ ಗಂಡಸ್ರಿಗೊಂದು ಕಾಯ್ದೆ, ಹೆಂಗಸರಿಗೆ ಬೇರೆ ಕಾಯಿದೆ. ಒಂದು ಕೆಲಸಾನ, ಅದೆಷ್ಟೇ ಕೆಟ್ಟದ್ದಾಗಿರ್ಲಿ, ಗಂಡಸು ಮಾಡಿದ್ರೆ ಸಮಾಜ ಆ ಕಡೆ ನೋಡೋ ದೃಷ್ಟಿನೇ ಬೇರೆ, ಅದೇ ಕೆಲ್ಸಾ ಒಂದು ವೇಳೆ ಹೆಂಗಸು ಮಾಡಿದ್ರೆ ಅದೇ ಸಮಾಜ ರಂಭಟಾ ಮಾಡಿಬಿಡುತ್ತೆ. ಮೇಲೇರಲು ಹೇಗೆ ಹೆಂಗಸಿಗೆ ಸ್ವಾತಂತ್ರ್ಯ ಇಲ್ಲವೋ ಹಾಗೆಯೇ ತನಗೆ ಬೇಕೆಂದಾಗ ಕೆಟ್ಟು ಹೋಗಲೂ ಆಕೆಗೆ ಸ್ವಾತಂತ್ರ್ಯವಿಲ್ಲ. ತಪ್ಪು ಯಾವುದೇ ಆಗಿದ್ದರೂ, ಕೆಟ್ಟ ಹೆಸರು ಬರೋದು ಹೆಂಗಸಿಗೇ"[೪೩] ಎಂದು ಸ್ತ್ರೀವಾದಿತನದ ಮಾತುಗಳನ್ನು ಆಡುತ್ತಾನೆ. ಮದುವೆಯಾಗುವ ಭರವಸೆ ನೀಡುತ್ತಾನೆ. ಇಲ್ಲೂ ಜಾನ್‌ಅಶೋಕ್‌ಕುಮಾರ್‌ನನ್ನು ನಂಬುತ್ತಾಳೆ. ಇಬ್ಬರೂ ಕೂಡಿಬದುಕುತ್ತಾರೆ. ಇಲ್ಲಿ ಶಾಂತಿಗೆ ಸ್ವಾತಂತ್ರ್ಯದಕ್ಕಿತೇ? ಎಂಬ ಪ್ರಶ್ನೆ ಸಹೃದಯರಲ್ಲಿ ಹುಟ್ಟುವುದು ಸಹಜ. ಈ ಪ್ರಶ್ನೆಗೆ ಶಾಂತಿ ಜಾನ್‌ಅಶೋಕ್‌ಕುಮಾರ್‌ನನ್ನು ತಿರಸ್ಕರಿಸುತ್ತಾಳೆ. ಕಾರಣವೆಂದರೆ ಶಾಂತಿಯ ಎಲ್ಲಾ ಸ್ವಾತಂತ್ರ್ಯಗಳಿಗೂ ಜಾನ್ ಅಶೋಕ್‌ಕುಮಾರ್ ಅಡ್ಡಗಾಲು ಹಾಕುತ್ತಾನೆ ಮತ್ತು ಮನೆಯಲ್ಲೇ ಇರುವ ಬಂಧನ ಹೇರುತ್ತಾನೆ. ಶಾಂತಿ ಇವೆಲ್ಲವನ್ನೂ ಸಹಿಸಿಕೊಂಡರೂ ಕ್ರಿಶ್ಚಿಯನ್ ಧರ್ಮಕ್ಕೆ ಬದಲಾಗುವಂತೆ ಅಧಿಕಾರ ಚಲಾಯಿಸಿದಾಗ ಆತನನ್ನು ಬಿಟ್ಟು ಕಲ್ಕತ್ತಾದಿಂದ ಅರಸಿ ಬಂದಿದ್ದ ಉದ್ಯೋಗಗಕ್ಕೆ ಹೊರಡುತ್ತಾಳೆ. ವಿಮಾನದಲ್ಲಿ ಐರೀಷ್ ದೇಶದ ವ್ಯಕ್ತಿಯ ಪರಿಚಯವಾಗುತ್ತದೆ.

ಆತನು ಶಾಂತಿಯ ಮೊದಲ ಭೇಟಿಯಲ್ಲೇ ಪ್ರೀತಿಸುತ್ತಿರುವುದಾಗಿ ಹೇಳಿ ಶಾಂತಿಯ ಅಭಿಪ್ರಾಯ ಕೇಳುತ್ತಾನೆ. ಶಾಂತಿ ಈಗಾಗಲೇ ನಾಲ್ವರನ್ನು ಪ್ರೀತಿಸಿ ಕಂಡುಕೊಂಡಿದ್ದ ಸತ್ಯವೆಂದರೆ ಪ್ರೀತಿಯ ಅನರ್ಥ. ಇದರಿಂದಲೇ ಐರೀಷ್ ವ್ಯಕ್ತಿಗೆ ಪ್ರೀತಿಸುವುದಿಲ್ಲ ಎನ್ನುವುದನ್ನು 'ಹಾಗೆಂದರೇನು ನನಗೆ ಗೊತ್ತಿಲ್ಲ' ಎನ್ನುವಲ್ಲಿಯೇ ಅಭಿಪ್ರಾಯ ವ್ಯಕ್ತಪಡಿಸಿದ್ದಾಳೆ.

ಈ ಕಾದಂಬರಿಯಲ್ಲಿ ಗಂಡಸರು ಎಲ್ಲರೂ ಒಂದೇ ಎಂಬಂತೆ ಬಿಂಬಿತವಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರೀತಿ–ಪ್ರೇಮ ಬಹು ಆಕರ್ಷಣೀಯವಾಗಿದ್ದು, ಅಷ್ಟೇ ಬೇಗ ದೂರವಾಗುತ್ತಿದ್ದಾರೆ. ಅದಕ್ಕೆ ಗಂಡಸರೇ ಕಾರಣೀಭೂತರಾಗಿರುತ್ತಾರೆ ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಹೆಣ್ಣಿನಿಂದಲೂ ಪ್ರಾಮಾಣಿಕ ಪ್ರೇಮಿಗಳಿಗೆ ಅನ್ಯಾಯವಾಗುತ್ತಿದೆ. ಆದರೆ ಸಮಾಜದಲ್ಲಿ ಒಟ್ಟಾರೆ ಶೇಕಡವಾರು ತುಲನೆ ಮಾಡಿದಾಗ ಗಂಡಿನಿಂದ ಹೆಣ್ಣು ಮೋಸ ಹೋಗುತ್ತಿದ್ದಾರೆ ಎಂಬುದು ಗರಿಷ್ಠ ಪ್ರಮಾಣದಲ್ಲಿದೆ. ಇಂತಹ ಮೋಸಕ್ಕೆ ಅನೇಕ ಕಾರಣಗಳಿರಬಹುದು. ಅವುಗಳಲೆಲ್ಲಾ ಮುಖ್ಯವಾದ ಕಾರಣವೆಂದರೆ ಪ್ರೀತಿಸಿದವಳು ಅಥವಾ ಮದುವೆಯಾಗುವವಳು ಗಂಡನಾಗುವವನು ಹೇಳಿದಂತೆ ಕೇಳಿಕೊಂಡಿರಬೇಕು. ಮತ್ತು ಅವಳು ಒಬ್ಬನಿಗೇ ಮಾತ್ರ ಸೀಮಿತವಾಗಿರಬೇಕು ಎಂಬುದೇ ಆಗಿದೆ. ಈ ನೆಲೆಗೆ ಹೆಣ್ಣಾದವಳು ಹೊಂದಿಕೊಂಡರೆ ಸಾಮರಸ್ಯವುಂಟಾಗುತ್ತದೆ. ಹೆಣ್ಣಿನಲ್ಲೂ ಅಂತಹದೇ ಭಾವನೆ, ಸ್ವಾತಂತ್ರ್ಯದ ಬದುಕನ್ನು ಬಯಸುವಿಕೆ ಇರುವುದರಿಂದ ಅಡಿಯಾಳಾಗಿ ಬದುಕಲಾಗದೆ ಇದ್ದಾಗ ವಿರಸಗಳುಂಟಾಗುತ್ತವೆ. ಈ ವಿರಸಕ್ಕೆ ಗುರಿಯಾಗುವವಳು ಮಾತ್ರ ಹೆಣ್ಣು. ಹೊಂದಿಕೊಳ್ಳುವ ಮನೋಭಾವ ಗಂಡಸರಲ್ಲಿ ಇಲ್ಲದಿರುವುದು ಕಂಡುಬಂದಿದೆ.

ಶಾಂತಿಯಂತಹ ಪ್ರಾಮಾಣಿಕ ಪ್ರೀತಿಗೆ ಸಿಗುವುದು ನಾಲ್ವರಿಂದಲೂ ಬಂಧನ. ಮೊದಲಿಗೆ ಹೆಣ್ಣನ್ನು ಒಲಿಸಿಕೊಳ್ಳಲು ಅವರಿಗೆ ಇಷ್ಟವಾಗುವ ದಾರಿಯಲ್ಲಿಯೇ ನಡೆಯುವುದನ್ನು ಲೇಖಕಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಸ್ತ್ರೀಪರ ಮಾತುಗಳನ್ನಾಡುವ ಈ ನಾಲ್ವರು ಸ್ವಜೀವನದಲ್ಲಿ ಹೇಳುವಂತೆ ನಡೆದುಕೊಳ್ಳುವುದಿಲ್ಲ. ಈ ನಾಲ್ವರ ಮಾತಿಗೂ, ನಡವಳಿಕೆಗೂ ಹೋಲಿಕೆಗಳೇ ಕಂಡುಬರುವುದಿಲ್ಲ. ಈ ವಿಷಯದಲ್ಲಿ 'ಗಂಡಸರು' ಕಾದಂಬರಿ ಸಮಾಜದ ಪ್ರತಿಬಿಂಬವೆನಿಸುತ್ತದೆ. ಸ್ತ್ರೀ ಸಮಾನತೆ ಕುರಿತು ಭಾಷಣ, ಘೋಷಣೆ ಕೂಗುವವರು ತಮ್ಮ ಮನೆಯ ಹೆಣ್ಣು ಮಕ್ಕಳನ್ನೇ ಬಂಧಿಸುವುದನ್ನು ಕಾಣುತ್ತಿದ್ದೇವೆ. ಅದನ್ನು ನಾವು ಸಮಾಜಕ್ಕೆ ಸೇರಿಕೊಳ್ಳುತ್ತೇವೆ ಎಂಬ ಅರಿವೂ ಇಲ್ಲದೆ ಸಮಾಜವೇ ಹಾಗೇ ಎಂದು ಜಾರಿಕೊಳ್ಳುತ್ತಿರುವುದು ಕಣ್ಣೆದುರಿಗೇ ನಡೆಯುತ್ತಿದೆ.

ಇಂತಹವರ ನಡುವೆ ಶಾಂತಿಯಂತಹ ಹೆಣ್ಣು ನಿಜವಾದ ಸ್ತ್ರೀಪರ ಹೋರಾಟಗಾರ್ತಿಯಾಗಿ ಕಂಡುಬರುತ್ತಾಳೆ.

ಒಬ್ಬರು ಮತ್ತೊಬ್ಬರಂತೆ ಇರುವುದಿಲ್ಲ ಎಂಬ ಮಾತನ್ನು ಗಂಡಸರ ವಿಚಾರವಾಗಿ ಒಪ್ಪಿಕೊಳ್ಳಲಾಗುವುದಿಲ್ಲ. ಯಾವ ದೇಶಕ್ಕೆ ಹೋದರೂ ಗಂಡಸರ ಬುದ್ಧಿ ಹೆಣ್ಣನ್ನು ಅಧೀನಳಾಗಿಸಿ–ಕೊಳ್ಳುವುದು, ಇಲ್ಲವೇ ಕಾಮಿಸುವಂತೆಯೇ ನೋಡುತ್ತಾರೆ. ಇದಕ್ಕೆ ಶಾಂತಿ ಸ್ವಂತ ಊರಿನಲ್ಲಿ ಶಂಕರ, ಮಠದ ಮುಂಬೈನಲ್ಲಿ ರಮಾಕಾಂತಶಿಂಧೆ ಕೊನೆಗೆ ಐರೀಷ್ ದೇಶದ ವ್ಯಕ್ತಿಯೂ ಶಾಂತಿಯನ್ನು ಪ್ರೀತಿಸುವುದಾಗಿ ಹೇಳುವಲ್ಲಿ ಹೆಣ್ಣನ್ನು ನೋಡುವ ದೃಷ್ಟಿಕೋನ ಒಂದೇ ರೀತಿಯಲ್ಲಿರುವುದನ್ನು ಕಾಣುತ್ತೇವೆ. ಲೇಖಕಿ ನವ್ಯ ಬರಹಗಾರ್ತಿಯಾದ್ದರಿಂದ ಈ ಕಾದಂಬರಿಯಲ್ಲಿ ದೈಹಿಕ ಸಂಬಂಧಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವುದಿಲ್ಲ. ಶಾಂತಿಯದು ಒಬ್ಬರಲ್ಲ ಇಬ್ಬರಲ್ಲ ನಾಲ್ವರನ್ನು ನಂಬುವುದು ಅತಿರೇಖ ಎನಿಸಿದರೂ ಹೆಣ್ಣು ಶುದ್ಧವಾದ ಪ್ರೀತಿ ವಿಶ್ವಾಸವನ್ನು ಬಯಸುತ್ತಾಳೆ. ಹಾಗೆ ಬಯಸುವ ಸಂದರ್ಭದಲ್ಲಿ ಪುರುಷನು ಮಹಿಳೆಯರ ಬಗ್ಗೆ ತೋರುವ ಕಾಳಜಿ, ಅಭಿಮಾನ ಆಕೆಯನ್ನು ಅಂಧಕಾರದಲ್ಲಿ ಮುಳುಗಿಸುವಂತೆ ಮಾಡುತ್ತದೆ.

**ಬದುಕು**

ಸಮಾಜದಲ್ಲಿ ಮಾನವನ ಹೆಸರು ಸಾರ್ಥಕಗೊಳ್ಳುವುದು ಆತನ ಬದುಕಿನಿಂದ ಈ ಕಾದಂಬರಿಯು ಮಾನವ ಸಮಾಜದ ಕನ್ನಡಿಯಾಗಿದೆ. ಹೈದರಾಬಾದ್ ಕರ್ನಾಟಕಕ್ಕೆ ಸೇರಿದ ಕಲ್ಬುರ್ಗಿ ಜಿಲ್ಲೆಯ ಸುತ್ತಮುತ್ತಲಿನ ಬದುಕಿನ ವಿವರಗಳನ್ನು ಕಾದಂಬರಿ ಒಳಗೊಂಡಿದೆ. ಕೆಳವರ್ಗದವರ ದಲಿತ ಬದುಕಿನ ಚಿತ್ರಣ ವಾಸ್ತವಿಕ ನೆಲೆಗಟ್ಟಿನಲ್ಲಿ ಮೂಡಿರುವುದೆ ಕಾದಂಬರಿಯ ವೈಶಿಷ್ಟ್ಯವಾಗಿದೆ. "ಕಥಾವಸ್ತು, ಆಶಯ ಎಲ್ಲವೂ ಬದುಕೇ ಆಗಿರುವುದರಿಂದ, ವಿಶೇಷವಾಗಿ ಕೆಳವರ್ಗದವರ ಸುಖ, ದುಃಖಗಳ ಚಿತ್ರಣವಾದ್ದರಿಂದ, ಕಾಮ – ಪ್ರೇಮ, ಲೈಂಗಿಕತೆ, ಮನುಷ್ಯ–ಮನುಷ್ಯರ, ಗಂಡು ಹೆಣ್ಣುಗಳ ನಡುವಿನ ಸಂಬಂಧಗಳು, ಪರಂಪರಾಗತ ನಂಬಿಕೆ, ಸಂಪ್ರದಾಯಗಳು, ಶೋಷಣೆಗಳು, ಮೌಢ್ಯ, ಪ್ರಾಣಿಬಲಿ, ಸಿಂದಿ ಕುಡಿಯುವ ಹೆಣ್ಣು – ಗಂಡಾದಿಯಾಗಿ ಅಭ್ಯಾಸ, ಖಂಡ, ಮಾಂಸದಡುಗೆಗಳು, ಹಬ್ಬಹರಿದಿನ, ಜಾತ್ರೆ ಎಲ್ಲವೂ ಹಾಸು ಹೊಕ್ಕಾಗಿ ಕಥೆಯ ಅವಿಭಾಜ್ಯ ಅಂಗಗಳಾಗಿವೆ".[೪೪]

ಬದುಕು ಕಾದಂಬರಿಯ ಕಥೆ ಕಲಬುರ್ಗಿ, ಪಕ್ಕದಲ್ಲಿರುವ ಸೊಲ್ಲಾಪುರ, ಕಲಬುರ್ಗಿ ಜಿಲ್ಲೆಯ ಮರಾಠವಾಡಕ್ಕೆ ಹತ್ತಿರವಿರುವ ಶಿವಳ್ಳಿ ಸುತ್ತಮುತ್ತಲಿನ ಚುಂಚೂರು, ಸಾವಳಿಗಿ,

ನರೋಣಾ, ಜಂಬಗಿ ಊರುಗಳ ಸುತ್ತ ಎಣೆದಿದೆ. ಶಿವಳ್ಳಿಯ ಮೂಲಕ ಎಲ್ಲಾ ಹಳ್ಳಿಯ ಬದುಕಿನ ಬದಲಾವಣೆಗಳನ್ನು ಕಾದಂಬರಿ ಒಳಗೊಂಡಿದೆ. ಮ್ಯಾಗೇರಿ, ತೆಳಗೇರಿ, ಹೊಲಗೇರಿಗಳ ಜೀವನ ಚಿತ್ರಣ, ಗೌಡ, ಕುಲಕರ್ಣಿ, ಸಾವ್ಕಾರ, ಮೊದಲಾದ ದೊಡ್ಡ ಕುಳಗಳ, ಸಾಮಾನ್ಯ ವರ್ಗದವರ ಕೆಳಸ್ತರದವರ ಬದುಕಿನ ಸಂಪೂರ್ಣ ಚಿತ್ರಣವಿದೆ. ಶಿವಳ್ಳಿಯಲ್ಲಿ ವಾಸವಿರುವ ಕಬ್ಬಲಿಗ ಜನಾಂಗ (ಬೆಸ್ತ, ಬೇಡ) ದವನಾದ ಜಮಾದಾರ ಮಲ್ಲಪ್ಪನ ಕುಟುಂಬದ ಕಥೆಯೊಂದಿಗೆ ಸಮಾಜದಲ್ಲಿ ತಾಂಡವವಾಡುತ್ತಿರುವ ಸಾಮಾಜಿಕ ಸಮಸ್ಯೆಗಳನ್ನು ಲೇಖಕಿ  ಹೆಕ್ಕಿ ತೆಗೆದಿದ್ದಾರೆ.

ಮೂರು ತಲೆಮಾರಿನ ನಡುವೆ ನಡೆಯುವ ಕಥೆಯೇ ಕಾದಂಬರಿಯ ಮುಖ್ಯಭಾಗ. ಮೊದಲ ತಲೆಮಾರಿನವರಾಗಿ ಮಲ್ಲಪ್ಪ-ಮಲ್ಲವ್ವ ಮಧ್ಯಮವರ್ಗದ ಜೀವನ ನಡೆಸುತ್ತಿದ್ದಾರೆ. ಇವರ ಮೂರು ಮಕ್ಕಳು ಶಾಣಮ್ಮ, ಕಾಶಮ್ಮ, ಕಲ್ಯಾಣಿ ಎರಡನೇ ತಲೆಮಾರಿನವರು. ಶಾಣಮ್ಮ-ಹಾಲಪ್ಪನ ಮಗಳು ಮೂರನೇ ತಲೆಮಾರಿಗೆ ಸೇರಬೇಕಾದ ಬೆಳ್ಳಿ. ಇವಳು ಕಲ್ಯಾಣಿಯನ್ನು ಮದುವೆಯಾಗಿದ್ದರಿಂದ ಇವರಿಬ್ಬರು ಎರಡನೇ ತಲೆಮಾರಿನವರಾಗುತ್ತಾರೆ.  ಇವರಿಗೆ ಸುಕದೇವಿ, ಚಿಕ್ಕಮಲ್ಲು ಎಂಬ ಮಕ್ಕಳು ಜನಿಸುತ್ತಾರೆ. ಇವರ ವೈವಾಹಿಕ ಜೀವನದವರೆಗೂ ಕಥೆ ಮುಂದುವರೆದಿದ್ದು ಇವರು ಮೂರನೇ ತಲೆಮಾರಿನವರಾಗಿ ಕಾಣಸಿಗುತ್ತಾರೆ. ಈ ಪಾತ್ರಗಳೊಂದಿಗೆ ಸಾಕಷ್ಟು ಪಾತ್ರಗಳು ಬಂದು ಹೋಗುತ್ತವೆಯಾದರು ಕೆಲವು ಪಾತ್ರಗಳು ಮುಖ್ಯವೆನಿಸುತ್ತವೆ. ಹಾಲಪ್ಪ, ಮಾರ್ತಂಡ, ಲಿಂಗರಾಜ, ಜೋಗಣೇರು, ಆಳುಮಕ್ಕಳು ಹೀಗೆ ಹಲವು ಪಾತ್ರಗಳೊಂದಿಗೆ ಸಾಗುತ್ತದೆ. ನಾಗವ್ವಾಯಿ, ಫತರೂ ಪಾತ್ರಗಳು ಕಾದಂಬರಿಯುದ್ದಕ್ಕೂ ಶಾಶ್ವತವಾಗಿ ನಿಲ್ಲುತ್ತವೆ. ಶ್ರೇಣೀಕೃತ ಸಮಾಜದ ವ್ಯವಸ್ಥೆಯೊಳಗೆ ಮಧ್ಯಮ ವರ್ಗದ ಜೀವನ ನಡೆಸುತ್ತಿರುವ ಮಲ್ಲಪ್ಪನ ಕುಟುಂಬದ ಮೂಲಕ ಮಾನ ಮರ್ಯಾದೆಗೆ ಅಂಜಿ ನಡೆಯುವ ಬದುಕು, ಪ್ರೇಮವಿವಾಹ, ಅಂತರ್‌ಜಾತಿ ವಿವಾಹದ ಬಗ್ಗೆ ಇದ್ದ ಮನೋಧೋರಣೆ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ದೇವರು ದಿಂಡ್ರು, ದೆವ್ವದಲ್ಲಿ ನಂಬಿಕೆಯಿಟ್ಟು ಭಯ, ಭಕ್ತಿಗಳಿಂದ ಬದುಕುತ್ತಿರುವ ವಾತಾವರಣದಲ್ಲಿ ಮೌಢ್ಯತೆಯ ಕರಿನೆರಳು ಕಾಣುತ್ತದೆ. ಅಜ್ಞಾನ, ಅಂಧಕಾರದ ನಂಬಿಕೆಯೊಳಗೆ ಬೆಳೆಯುತ್ತಿರುವ ಮಂದಿಯೊಳಗೆ ಕಾಶಮ್ಮಳ ಪ್ರೀತಿಗೆ ಬೆಲೆ ಇಲ್ಲ.  ಒಂದು ಹೆಣ್ಣು-ಗಂಡಿನ ಪ್ರೀತಿ ಭೋಗಿಸಲೆಂದೇ ಎಂದು ನಡೆದುಕೊಂಡಿರುವವರ ಸಾಕ್ಷ್ಯಗಳಿಂದ ಕಾಶಮ್ಮ-ಲಿಂಗರಾಜನ ಪ್ರೀತಿಗೆ ಎರಡು ಕುಟುಂಬದವರು ಅಡ್ಡವಾಗುತ್ತಾರೆ. ಮೇಲ್ವರ್ಗದ ಗಂಡಸರು ಕೆಳಜಾತಿಯ ಹೆಣ್ಣೊಂದಿಗೆ ದೈಹಿಕ ಸಂಪರ್ಕ ಇಟ್ಟುಕೊಳ್ಳುವುದು ಸರ್ವೇ ಸಾಮಾನ್ಯವಾಗಿದ್ದರಿಂದ ಲಿಂಗರಾಜ-ಕಾಶಮ್ಮಳ ಪ್ರೀತಿ ಬಯಲಿಗೆ ಬಂದಾಗ "ಅಲ್ಲಾಽ ಆ ಸಾವ್ಕಾರನ ಮಗಾಯೇನು ಇಕೀಗಿ ಕಡೀಗಿ ಹಚ್ಚತಾನೇನು?

ಕಲಬುರ್ಗಿಯಂತಾ ಶಾರಪಟ್ಟಣದಾಗಿದ್ದು ಬಂದಂವ ಅಲ್ಲಿ ಏಸು ಹೆಣ್ಣುಗೋಳ ರುಚಿ ನೋಡ್ಯಾನೋ ಏನೋ ಹಳ್ಳಿ ಮರದಾಗ ಬೆಳ್ದು ನಿಂತ ಜಂಬೂ ನೀಲದ ಹಣ್ಣಂತ ಇದಕ್ಕನೂ ಕಚ್ಚಿ ತಿಂದು, ರುಚಿ ನೋಡಿ ಒಟಾಕತಾನ ಆಯ್ತು. ಆ ಮ್ಯಾಲ ಇಕಿನ ಗತಿಯೇನು? ಅದರ ಇಚಾರ ಮಾಡಬಾರ್ದಾ ಈ ಕರಿಮಾರಿ ಸೂಳೀ"[೪೫] "ನಾಯಿ ಮುಟ್ಟಿದ ಮಡಕಿ ಆಗ್ತಾಳ, ಉಂಡು ಬಿಸಾಡಿದ ಪತ್ರೋಳಿಗಿ ಆಗ್ತಾಳ"[೪೬] ಎಂಬ ಮಂದಿಯ ಮಾತುಗಳು ಅಂದಿನ ಸಮಾಜದಲ್ಲಿ ಹೆಣ್ಣನ್ನು ಕಾಣುತ್ತಿದ್ದ ಪರಿಸರವನ್ನು ಪರಿಚಯಿಸುತ್ತದೆ. ಪ್ರೀತಿ–ಪ್ರೇಮ ನಂಬಿಕೆಗೆ ಅನರ್ಹವಾಗಿದ್ದ ಕಾಲದ ಪರಿಚಯವಾಗುತ್ತದೆ.

ಲಿಂಗರಾಜ–ಕಾಶಮ್ಮಳ ಪ್ರೀತಿಯನ್ನು ಬೇರುಸಹಿತ ಕಿತ್ತುಹಾಕುವ ಹುನ್ನಾರ, ಇಬ್ಬರಿಗೂ ಬೇರೆ ಬೇರೆ ಮದುವೆ ಮಾಡುವ ನಿರ್ಧಾರವಾಗುತ್ತದೆ. ಲಿಂಗರಾಜ–ನೀಲಮ್ಮಳನ್ನು, ಕಾಶಮ್ಮ–ಮಾರ್ತಾಂಡನನ್ನು ವಿವಾಹವಾಗದೆ ಅನ್ಯ ಮಾರ್ಗವಿರಲಿಲ್ಲ. ಮದುವೆ ಕೇವಲ ಸಾಂಪ್ರದಾಯಿಕವಾದದ್ದು, ನಿಜವಾದ ಮದುವೆ ಮನಸ್ಸಿನದ್ದು, ಎಂಬಂತೆ ಲಿಂಗರಾಜ–ಕಾಶಮ್ಮಳ ಪುನರ್ಮಿಲನ ಕಾದಂಬರಿಯ ಮುಖ್ಯ ಭಾಗವಾಗಿದೆ.

ವಿವಾಹಬಾಹಿರ ಪ್ರಣಯವನ್ನು ನಮ್ಮ ಸಮಾಜ ಒಪ್ಪಿಕೊಳ್ಳುವುದಿಲ್ಲ ಎಂಬುದಕ್ಕೆ ನೀಲಮ್ಮಳ ತಂದೆ, ಮಲ್ಲಪ್ಪನನ್ನು ಕರೆಸಿ "ನಿಮ್ಮವ್ವನ ಸೂಳ್ಯಾಮಗನೇ. ನೀವು ಕಮಜಾತಿ ಮಂದೀ ಚಾಲ ನನಗೊತ್ತಿಲ್ಲೇನು? ಮಗಳಿಗಿ ಊರ ಸಾವ್ಕಾರನ ತೆಳಗೆ ಹಾಕಿ, ಅಂವಗ ಬುಟ್ಟ್ಯಾಗ ಹಾಯ್ಕೊಂಡು ಅವನ ಸಂಪತ್ತೆಲ್ಲಾ ಹಡಪ ಮಾಡ್ಕೋಳ್ಳೋ ಹುನ್ನಾರ ಮಾಡ್ತೀರಿ, ಇಗಾ ನಿನಗೇಸು ರೊಕ್ಕಾ ರುಪೈ ಬೇಕ್ಹೇಳು ತಗೊಂಡು ನಿನ್ ಮಗಳಿಗೆ ಕರ್ಕೊಂಡು ಈ ಊರು ಬಿಟ್ಟು ಹೋಗು"[೪೭] ಎನ್ನುವಲ್ಲಿ ಮೇಲ್ವರ್ಗದ ಪುರುಷಷಾಹಿತ್ವದ ದಬ್ಬಾಳಿಕೆ ಕೆಳವರ್ಗದ ಬದುಕನ್ನು ಹೀಯಾಳಿಸುವುದಾಗಿದೆ. ಅವಮಾನ ತಾಳಲಾರದ ಮಲ್ಲಪ್ಪ ಮಾನ–ಮರ್ಯಾದೆಗಂಜಿ ಪ್ರಾಣ ಕಳೆದುಕೊಳ್ಳುತ್ತಾನೆ. ಸಿಂದಿ ದುಕಾನಿನಲ್ಲಿ ಮುಕಡ್ಯಾನ ಮಾತು ಕೇಳಿ ಕೋಪವೇರಿದ ಕಲ್ಯಾಣಿ ತಳ್ಳಿದ ರಭಸಕ್ಕೆ ಮುಕಡ್ಯಾ ಸಾಯುತ್ತಾನೆ. ಈ ಕೇಸ್‌ನಿಂದ ಕಲ್ಯಾಣಿ ೧೪ ವರ್ಷ ಜೈಲುಪಾಲಾಗುತ್ತಾನೆ. ಮಲ್ಲಪ್ಪನ ಸಾವು, ಕಲ್ಯಾಣಿಯ ಜೈಲುವಾಸದಿಂದ ಮಲ್ಲವ್ವ ಮಾನಸಿಕ ಹೈರಾಣದಿಂದ ಎರಡು ಮೊಮ್ಮಕ್ಕಳನ್ನು ನೋಡಿ ಕಣ್ಮುಚ್ಚುತ್ತಾಳೆ. ಅಲ್ಲಿಗೆ ಮೊದಲ ತಲೆಮಾರು ಅಂತ್ಯವಾಗುತ್ತದೆ. ವ್ಯವಸ್ಥೆಯೊಳಗಿನ ಬದಲಾವಣೆಯನ್ನು ಸ್ವೀಕರಿಸುವ ಮನೋಭಾವಗಳು ತುಂಬಾ ಕಡಿಮೆ ಸಮಾಜದ ಒಪ್ಪಿತ ಮೌಲ್ಯಗಳಿಗೆ ಒಗ್ಗಿಕೊಂಡವರು ಸ್ವನಿರ್ಧಾರಗಳಿಗೆ ಮನ್ನಣೆ ನೀಡುವುದಿಲ್ಲ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಮಲ್ಲಪ್ಪನ ಕುಟುಂಬ ಊನವಾಗುವುದನ್ನು ಲೇಖಕಿ ತಿಳಿಸಿದ್ದಾರೆ.

ಶಾಣಮ್ಮ-ಹಾಲಪ್ಪನವರ ಶಿಷ್ಟಸಂಸಾರದ ಬದುಕು, ಕಾಶಮ್ಮಳ ವಿವಾಹಬಾಹಿರ ಬದುಕು, ಕಲ್ಯಾಣಿ ಜೈಲುವಾಸದ ಬದುಕು ಹಾಲಪ್ಪ, ಬೆಳ್ಳಿ, ಫತರೂ ಈ ಮೂವರೂ ಕಲ್ಯಾಣಿಯನ್ನು ಬಿಡಿಸಲು ಪಟ್ಟ ಹರಸಾಹಸದ ಬದುಕು, ಬೆಳ್ಳಿಯ ಏಕಾಂಗಿತನದ ಹೋರಾಟದ ಬದುಕು ಗಂಭೀರತೆಯನ್ನು ಪಡೆದುಕೊಳ್ಳುತ್ತವೆ. ಕಾಶಮ್ಮ ತಮ್ಮನಿಗಾಗಿ ಧನಸಹಾಯ ನೀಡುವಲ್ಲಿ ಸಂಬಂಧದ ಬೆಸುಗೆ ಕಂಡು ಬಂದರೆ, ಕಲ್ಯಾಣಿ ಮಗ ಚಿಕ್ಕಮಲ್ಲು ಸಂಬಂಧವನ್ನು ಕಡಿದುಕೊಳ್ಳುವಲ್ಲಿ ಸಂಬಂಧದ ವಿಷಮತೆ ಕಾಣುತ್ತದೆ. ಕುಟುಂಬದಲ್ಲಿ ಸಂಬಂಧಗಳನ್ನು ಕಡಿದುಕೊಳ್ಳುವುದು, ಸಂಬಂಧಕ್ಕೆ ಹೊಸ ಸೇರ್ಪಡೆಯಾಗುವುದು ಸಾಮಾನ್ಯ. ಅದರ ಹಿಂದಿನ ದೃಷ್ಟಿಕೋನದ ಮೂಲಕ ಸಮಾಜದ ಮತ್ತೊಂದು ಮುಖ ಪರಿಚಯವಾಗುತ್ತದೆ. ಜೈಲಿಗೆ ಹೋಗಿ ಬಂದವನು ಅಪರಾಧಿಯಾಗಲೀ, ನಿರಪರಾಧಿಯಾಗಲೀ ಸಮಾಜದ ದೃಷ್ಟಿಯಲ್ಲಿ ಜೈಲುವಾಸವೇ ಅಪರಾಧ. ಕಲ್ಯಾಣಿ ಮುಕಡ್ಯಾನ ಮೇಲೆ ಹರಿಹಾಯ್ದದ್ದು ನಿಜವಾದರೂ ಕೊಲೆ ಮಾಡುವ ಉದ್ದೇಶವಿರಲಿಲ್ಲ. ಹೊಟ್ಟೆ ತುಂಬಾ ಕುಡಿದಿದ್ದ ಮುಕಡ್ಯಾ ತಳ್ಳಿದ್ದೆ ನೆಪವಾಗಿ ಸತ್ತನು. ಅದಕ್ಕೆ ಶಿಕ್ಷೆಯೆಂಬಂತೆ ಹದಿನಾಲ್ಕು ವರ್ಷ ಜೈಲುವಾಸ ಅನುಭವಿಸಿಯೂ ಬಂದಿದ್ದಾನೆ. ಸಮಾಜದಲ್ಲಿ ನಿಂದನೆಯ ಶಿಕ್ಷೆಗೆ ಒಳಗಾಗುವುದು ನಿರಪರಾಧಿಗಳ ನೋವಿಗೆ ಮತ್ತಷ್ಟು ಇಂಬು ಕೊಡುವಂಥದ್ದು. ಕಲ್ಯಾಣಿ ಸ್ಥಿತಿ ಆಗಿದ್ದು ಹೀಗೆಯೆ. ಕಲ್ಯಾಣಿಯ ಮಗಳನ್ನು ಮದುವೆ ಆಗಲು ಯಾರು ಮುಂದೆ ಬರುವುದಿಲ್ಲ. ತನ್ನ ಅಂತಸ್ತಿಗೆ ತಕ್ಕವನಲ್ಲದಿದ್ದರು ಒಬ್ಬಂಟಿಗನಾದ ದೇವೇಂದ್ರನಿಗೆ ಮದುವೆಮಾಡಿ ಮನೆ ಅಳಿಯ ಮಾಡಿಕೊಳ್ಳುತ್ತಾನೆ. ಈ ಸಂದರ್ಭದಲ್ಲಿ ಸ್ವಂತ ಮಗನೇ "ಇದ್ದಕ್ಕ ಒಂದು ಮಗಳಿಗೆ ಒಂದು ಛಲೋ ವರಾ ನೋಡ್ಲಿಕ್ಕ ಆಗಲಿಲ್ಲ ನಿಮಗ. ಹ್ಯಾಂಗಾಗ್ತದ, ಜೈಲಿನ್ಯಾಗ ಬಿದ್ದು ಬಂದವನ ಮಗಳಿಗಿ ಮದಿ ಮಾಡ್ಕೋಳಕ್ಕ ಯಾರು ಮುಂದ ಬರ್ತಾರೆ? ಎಲ್ಲಿಂದ ಹಿಡ್ಕೊಂಡು ಬಂದೀರಿ ಈ ಪರದೇಸಿ ಕಂಗಾಲ ಬಕರಾಕ್ಕ?"[೪೮] ಎನ್ನುವಲ್ಲಿ ಸಮಾಜದ ಪ್ರತಿಬಿಂಬನಾಗಿ ತೋರುತ್ತಾನೆ. ಈ ಮೂಲಕ ಆಧುನಿಕ ಕಾಲದ ಸುಶಿಕ್ಷಿತರು ಕಾನೂನಿನ ಮೇಲೆ ಇಟ್ಟಿರುವ ನಂಬಿಕೆಯನ್ನು, ಸಮಾಜದ ನಿಂದನೆಗೆ ಒಳಗಾಗಿ ಅನುಭವಿಸುತ್ತಿರುವ ನೋವನ್ನು ತೋರ್ಪಡಿಸಿರುವಂತಿದೆ. ಹೊರಗಿನವರ ಕನಿಕರ, ಆದರ, ಚುಚ್ಚು ನುಡಿಗಳು ಕಲ್ಯಾಣಿಯನ್ನು ಏಕಾಂಗಿ ಬದುಕಿಗೆ ದೂಡುತ್ತದೆ. ಜೀವನದಲ್ಲಿನ ಜಿಗುಪ್ಸೆಯಿಂದ ಶ್ರೀಶೈಲಕ್ಕೆ ಹೋಗುವ ಬೆಳ್ಳಿ-ಕಲ್ಯಾಣಿ ತಿರುಗಿ ಬರುವುದಿಲ್ಲ. ಅವರ ಸಾವಿನ ದುಃಖದೊಂದಿಗೆ ಕಾದಂಬರಿ ಅಂತ್ಯವಾಗುತ್ತದೆ. ಇಲ್ಲಿಗೆ ಎರಡನೆಯ ತಲೆಮಾರು ಕೊನೆಯಾಗುತ್ತದೆ. ಈ ನಿಟ್ಟಿನಲ್ಲಿ ನಿರಪರಾಧಿಯಾದರು ಆಕಸ್ಮಿಕ ಅವಘಡದಿಂದ ಜೈಲುಪಾಲಾದ ಕಲ್ಯಾಣಿಯಂತಹವರನ್ನು ನೋಡುವ ಸಮಾಜದ ದೃಷ್ಟಿಕೋನವು ಅತ್ಯಂತ ವಾಸ್ತವಿಕ ನೆಲೆಗಟ್ಟಿನಲ್ಲಿ ಚಿತ್ರಿತವಾಗಿದೆ.

ಝೋಪಡಿ ಪಟ್ಟಿಯ ಬದುಕನ್ನು ಹೇಳುವ ಈ ಕಾದಂಬರಿ ಹಳ್ಳಿಯ ಮತ್ತು ಪಟ್ಟಣದ ಎರಡು ರೀತಿಯ ಬದುಕನ್ನು ಒಳಗೊಂಡಿದೆ. "ದುಡಿಯುವ ವರ್ಗದ, ಕಪ್ಪು ಮಂದಿಯ ಜೀವನದ ರೀತಿ, ನೀತಿ, ರಿವಾಜು, ರೂಢಿ, ಅಳು, ನಗು, ಪ್ರೀತಿ, ಪ್ರಣಯ, ಕಾಮ, ಪ್ರೇಮ, ಹಾದರ, ಕಳವು, ಹಸಿವು, ಕುಡಿತ, ಹವ್ಯಾಸಗಳೆಲ್ಲ ಒಳಗೊಂಡಿರುವ ಸಾಂಸ್ಕೃತಿಕ ದಾಖಲೆಯಾಗಿದೆ."[೪೯] ಎಂದಿರುವ ಲೇಖಕಿ ಪಟ್ಟಣ, ಗ್ರಾಮೀಣ ಬದುಕಿನ ಮೂಲಕ ಸಾಬೀತಿಸಿದ್ದಾರೆ. ಹಳ್ಳಿಯ ಚಿತ್ರಣದಂತೆ ಪಟ್ಟಣದ ಚಿತ್ರಣ ಕಾದಂಬರಿಯಲ್ಲಿ ಚಿತ್ರಿತವಾಗಿದೆ. ಪಟ್ಟಣದ ನಡುಮಧ್ಯದಲ್ಲಿರುವ ಝೋಪಡಿ ಪಟ್ಟಿಯಲ್ಲಿ ನೋವು, ನಗು, ಅಳು ಎಲ್ಲವೂ ತುಂಬಿರುತ್ತದೆ. ಮುಖ್ಯವಾಗಿ ಒಗ್ಗಟ್ಟಿನ ಮಹತ್ವ ಕಂಡುಬರುತ್ತದೆ. ಶಾಣಮ್ಮ-ಮಲ್ಲಪ್ಪ ಇದೇ ಝೋಪಡಿ ಪಟ್ಟಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಇಲ್ಲಿ ಎಲ್ಲಾ ಜಾತಿಕುಲದ ಬಡುಮಂದಿಯ ಜೀವನವಿದೆ.  ಈ ಝೋಪಡಿ ಪಟ್ಟಿಯಲ್ಲಿ ಎಲ್ಲಾ ರೀತಿಯ ಕೆಲಸ ಮಾಡುವವರು ಇದ್ದಾರೆ.  ಗಿರಿಣ್ಯಾಗ ಮಾಡೋ ಲೇಬರ್, ಗಂಜಿನ್ಯಾಗ ದುಡ್ಯೋ ಹಮಾಲರು, ಝೂಡಮಾಲಿಗೋಳು ಬಸ್‌ಟ್ಯಾಂಡಿನ ಕೂಲಿಗೋಳು, ಕೈಗಾಡಿ ಒತ್ತವರು, ಬಂಡಿ ಹೊಡೆವರು, ಸಮಗಾರ್‍ರು, ಹಜಾಮರು, ಸಫಾಯಿಗಾರು ಹೀಗೆ ಮುಂತಾದವರ ಕೆಳಹಂತದ ಜೀವನ ನಡೆಸುತ್ತಿರುವವರ ಆವಾಸಸ್ಥಾನದ ಝೋಪಡಿ ಪಟ್ಟಿಯ ಹೆಸರು ಮಾರುತಿ ಝೋಪಡಿ ಪಟ್ಟಿ. ಇದನ್ನು ಕಟ್ಟಿ ಬೆಳೆಸಿದ ಮುದುಕ ಇವರ ನಾಯಕ. ತಮ್ಮ ತಮ್ಮ ಅಂತಸ್ಥಿಗೆ ತಕ್ಕಂತೆ ಬದುಕುತ್ತಿರುವ ಈ ಮಂದಿಯಲ್ಲಿ ನಾಗ್ಯಾ ಎಂಬುವವನು ಈ ಝೋಪಡಿಯ ಒಬ್ಬ ಸದಸ್ಯ.  ಈತ ಕಳ್ಳತನ ಮಾಡಿ ಜೀವನ ಸಾಗಿಸುವುದು ಝೋಪಡಿ ಪಟ್ಟಿಯಲ್ಲಿ ಎಲ್ಲಾ ರೀತಿಯ ಕೆಲಸದ ಮಂದಿಗೆ ಸಾಕ್ಷಿಯಾಗಿದ್ದಾನೆ. ಈತನನ್ನು ಹುಡುಕಿ ಬಂದ ಪೊಲೀಸರಿಗೆ ಸುಳಿವು ನೀಡದೆ ನ್ಯಾಗ್ಯಾನನ್ನು ರಕ್ಷಿಸುವುದು ಬಡೂ ಮಂದಿಯ ಒಗ್ಗಟ್ಟನ್ನು ಹೇಳುತ್ತದೆ. ನ್ಯಾಗ್ಯಾನಂತಹವರ ಒಂದೊಂದು ಬದುಕಿನ ಹಿಂದಿನ ಕಣ್ಣೀರು ತರಿಸುವಂತಹ ಘಟನೆಗಳಿರುತ್ತವೆ ಎಂಬುದಕ್ಕೆ ಆತನ ಹೆಂಡತಿಯ ಹೊಟ್ಟೆ ಆಪರೇಷನ್ನಿಗಾಗಿ ಕದಿಯುವ ತುರ್ತು ಅಲ್ಲಿನ ಮಂದಿಯ ಬಡತನವನ್ನು ಹೇಳುತ್ತದೆ. ಹಳ್ಳಿಯ ಬದುಕಿನೊಂದಿಗೆ ಪಟ್ಟಣದ ಝೋಪಡಿ ಪಟ್ಟಿಯ ಬದುಕು ತಿಳಿಯುತ್ತದೆ.

ಲೇಖಕಿಯೆ ಹೇಳಿರುವಂತೆ 'ಕಾಮ-ಕುಡಿತ-ಹಸಿವು' ಈ ಮೂರು ಮಂದಿಯ ಬದುಕಿನ ಅವಿಭಾಜ್ಯ ಅಂಗಗಳು. ಕಾದಂಬರಿ ಪ್ರಾರಂಭವಾಗುವುದೆ ಮಲ್ಲಪ್ಪ ಸಿಂದಿಗಾಗಿ ಬನದ ಕಡೆಗೆ ಹೋಗುವುದರಿಂದ ಈ ಮಂದಿಯ ಜೀವನದಲ್ಲಿ ಕುಡಿತ ಹಾಸು ಹೊಕ್ಕಾಗಿದೆ. ಹಬ್ಬ-ಹರಿದಿನ, ಸಾವು-ನೋವು, ಸುಖ-ಸಂತೋಷಗಳಷ್ಟೇ ಅಲ್ಲದೆ ಯಾವ ಕಾರಣವಿಲ್ಲದಿದ್ದರು ಮಕ್ಕಳಾದಿಯಾಗಿ

ಹೆಣ್ಣು-ಗಂಡು ಕುಡಿಯುವುದು ಸಾಂಪ್ರಾದಾಯಿಕವಾಗಿದೆ. ಕುಡಿತ ಇಲ್ಲಿನವರ ಬದುಕಿಗೆ ಹಾಸುಹೊಕ್ಕಾಗಿದೆ.

ಸಂಪ್ರದಾಯದ ಹೆಸರಿನಲ್ಲಿ ನಡೆಯುವ ಕಾದಂಬರಿಯ ಮುಖ್ಯ ವಸ್ತು 'ಜೋಗಣಿ' ತಮ್ಮದೇ ರೀತಿ ರಿವಾಜುಗಳಿಂದ ಬದುಕುತ್ತಿರುವ ಈ ಮಂದಿಯಲ್ಲಿ ದೇವರು, ದಿಂಡ್ರು, ದೆವ್ವದ ಬಗ್ಗೆ ನಂಬಿಕೆ ಇದ್ದವರು. ಸಾಂಪ್ರದಾಯಿಕವಾಗಿ ಬಂದಂತಹ ಆಚರಣೆಗಳನ್ನು ಪಾಲಿಸುವವರು. ಮಲ್ಲಪ್ಪನ ತಾಯಿ ಜಕಣಿ ದೆವ್ವ ಹಿಡಿದು ಸತ್ತಳೆಂದು ಮಲ್ಲವ್ವ ಮಾನಸಿಕವಾಗಿ ತತ್ತರಿಸಿ ಸಾಯುವುದನ್ನು ಮಾದರ ಕಳಸ, ಜಂಬಗಿ ಮುಕಡ್ಯಾ ದೆವ್ವರಾಗಿ ಮಲ್ಲವ್ವಳನ್ನು ಸಾಯಿಸಿತು ಎಂಬ ನಂಬಿಕೆಯಲ್ಲಿ ಬದುಕುತ್ತಿರುವವರು. ಇವರ ಈ ವಾತಾವರಣ 'ಜೋಗಣಿ' ಪದ್ದತಿಯಲ್ಲಿಯೂ ನಂಬಿಕೆ ಇಟ್ಟಿರುವುದು ಕಂಡುಬರುತ್ತದೆ. ಜೋಗಣಿಯ ಸಂಪೂರ್ಣ ಚಿತ್ರಣವನ್ನು ಕಾದಂಬರಿ ಕಟ್ಟಿಕೊಡುತ್ತದೆ. ಈ ಪದ್ಧತಿ ಪುರುಷಪ್ರಧಾನ ಸಮಾಜ ನಡೆಸುವ ಹಲ್ಕಟ್ ದಂಧೆಯಾಗಿದೆ. ಕೆಳ ಜಾತಿಯ ಹೆಣ್ಣು ಮಕ್ಕಳನ್ನು ಊರಿನ ಸಾವ್ಕಾರ ಕನ್ಯತ್ವ ಕಳೆದು ತನ್ನ ಆಸೆ ಈಡೇರಿದ ಮೇಲೆ ಬಿಟ್ಟು ಹೋಗುತ್ತಾನೆ. ಮುಂದೆ ಅವಳು ಎಲ್ಲಾ ಪುರುಷರ ಬಯಕೆಯ ವಸ್ತುವಾಗಿ ಸೂಳೆಯಾಗುತ್ತಾಳೆ. ಒಂದು ಅಧ್ಯಾಯವಾಗಿ ತೋರುವ ಜೋಗಣಿ ವಸ್ತುವಿಷಯ ಜೋಗಣೇರ ನಿಯಮಬದ್ದ ಜೀವನ ಮಾತ್ರ ತಿಳಿಸುವುದಿಲ್ಲ ಬದುಕಿ ಬೆಂಡಾದ ನಿಂಬವ್ವನಂತಹವರ ಅನೇಕ ಜೋಗಣೇರ ಸ್ಥಿತಿಯನ್ನು ಅವರ ಬದುಕಿನ ಬವಣೆಗಳನ್ನು ಕಣ್ಣಾಲಿಗಳಲ್ಲಿ ನೀರಾಡುವಂತೆ ಚಿತ್ರಿಸಿದ್ದಾರೆ. ಒಪ್ಪಿಕೊಳ್ಳುವವರಾದಿಯಾಗಿ, ಪ್ರತಿಭಟಿಸುವ ನೆಲೆಗಟ್ಟಿನಲ್ಲಿ ಚಿತ್ರಿಸಿರುವುದು ಕಾದಂಬರಿಯ ವೈಶಿಷ್ಟವಾಗಿದೆ. ಒತ್ತಾಯಕ್ಕೆ ಮಣಿದು ಜೋಗಣಿಯಾದ ನೀಲವ್ವನ ಸಾವು ಪುರುಷಪ್ರಧಾನ ಸಮಾಜಕ್ಕೆ ಪ್ರಶ್ನಾತೀತವಾಗಿ ಕೇಳುವಂತದ್ದು, ನಿಂಬವ್ವಳು ಪ್ರತಿಭಟಿಸುವ ಎಚ್ಚರಿಕೆಯ ಮೂರ್ತಿಯಾದರೆ, ತುಳಜಾ ಸಾಕಾರ ಮೂರ್ತಿಯಾಗಿದ್ದಾಳೆ. 'ಜೋಗಣಿ' ಎಂಬುದು ಪುರುಷರ ಕೈವಾಡದಿಂದ ದೇವರ ಹೆಸರಿನಲ್ಲಿ ನಡೆಯುತ್ತಿರುವ ಒಂದು ದಂಧೆ ಎಂಬ ಅಭಿಪ್ರಾಯವನ್ನುಂಟು ಮಾಡುತ್ತದೆ. ತುಳಜಾಳಂತಹವಳ ಮೂಲಕ ಶೋಷಿತರು ಶೋಷಣೆಯ ಅರಿವನ್ನು ಪಡೆಯಬೇಕು, ಅನ್ಯಾಯದ ವಿರುದ್ಧ ಪ್ರತಿಭಟಿಸಬೇಕು ಎಂಬುದನ್ನು ಸಮಾಜಕ್ಕೆ ಲೇಖಕಿ ಬಿತ್ತಿದ್ದಾರೆ.

ಕಾದಂಬರಿಯ ಗಂಭೀರವಾದ ವಿಚಾರಗಳೊಂದಿಗೆ ಹೊರಭಾಗಕ್ಕೆ ಹಬ್ಬಗಳ ವರ್ಣನೆ, ಪ್ರಕೃತಿಯ ಹೋಲಿಕೆ ಬದುಕಿಗೆ ಪೂರಕವಾಗಿರುವುದನ್ನು ಗುರುತಿಸಬಹುದು. ಹಬ್ಬ, ಜಾತ್ರೆಗಳು ಇಲ್ಲಿನವರ ಸಂಪೂರ್ಣ ಬದುಕಿಗೆ ಪೂರಕವಾಗಿದೆ. ಚುಂಚೂರು ಮಾಪುರತಾಯಿ ಜಾತ್ರೆ, ಶಾಣ ಬಸಪ್ಪನ ತೇರು, ಕಾರ ಹುಣ್ಣಿಮೆಯ ದಿನ ಕರಿ ಹರಿಯುವ ಸಂಪ್ರದಾಯ, ಹೋಳಿ ಹುಣ್ಣಿಮೆ,

ಮೊಹರಂ ಹಬ್ಬದ ಆಚರಣೆ ಅವುಗಳಿಗೆ ಹೊಂದಿಕೊಂಡಂತೆ ಕುಣಿತ, ಭೋಜನ ಇಲ್ಲಿನವರ ಭಕ್ತಿ, ನಂಬಿಕೆಯನ್ನು ಹೇಳುವುದಾಗಿದೆ. ಇವು ಕೇವಲ ಚಿತ್ರಣವಾಗಿರದೆ ಸಂಸ್ಕೃತಿಯನ್ನು ಬಿಂಬಿಸುವ ವಸ್ತುಗಳಾಗಿದ್ದು, ಕಥೆಯ ದುರಂತದ ಮುನ್ಸೂಚನೆಯು ಆಗಿದೆ. ನಿಂಬಾಜಿಪೀರ ಮಲ್ಲಪ್ಪನ ಅಂಗಳದಲ್ಲಿ ನಿಂತು ಅಂಧಕಾರಮಯವಾದ ಭವಿಷ್ಯದ ಮಾತುಗಳನ್ನಾಡುವುದು ಸಾಕ್ಷಿಯಾಗಿದೆ.

ಪ್ರಕೃತಿಯನ್ನು ಲೇಖಕಿ ಉಪಮೆಗಳಂತೆ ಬಳಸಿಕೊಂಡಿರುವುದು ಕಾದಂಬರಿಗೆ ಮತ್ತೊಂದು ಮೆರಗು. ಕಥೆಯು ಪ್ರಾರಂಭವಾಗುವ ಮೊದಲು ಬೆಳಗು–ಸಂಜೆಗಳ ವರ್ಣನೆ ಸಂದರ್ಭಕ್ಕೆ ತಕ್ಕಂತೆ ಸೂಚ್ಯವಾಗಿದೆ. “ಆಕಾಸೆಂಬೋ ಆಕಾಸದ ಮಾರಿಯೆಲ್ಲಾ ಚಾಜ ಒರೆಸಿದಂಗಾಗಿ ಕೆಂಪಗೆ ಲಾಲ್ ಲಾಲ್ ಆಗಿತ್ತು. ತಣ್ಣಗ ಆವಾಜು ಮಾಡುತ್ತ ಬೀಸಿ ಬರೋ ಅಡವಿ ಮ್ಯಾಲಿನ ಗಾಳಿ ಆ ಗುಡ್ಡದ ಮೈಗೆ ತಂಪೆರಚಿ, ಕೆಳಗಿಳಿದು ಸಿಂದಿ ಬನದ ಕಡೆಗೆ ನಡೆದಿತ್ತು. ನೋಡು ನೋಡುತ್ತಿದ್ದಂಗೇ ಮುಗಿಲ ಮಾರಿಯ ಕೆಂಪಿನಲ್ಲಿ ಅಲ್ಲೀಟು ಹಳದಿ, ಇಲ್ಲೀಟು ಕೇಸರಿ; ಮತ್ತೀಟು ಬಂಗಾರ ಬಣ್ಣ ಕಲೆಸಿದಂಗಾಗಿ ಬೆಳಗು ಹುಟ್ಟಿ ಕೈಕಾಲು ಬಡಿಯುತ್ತಿತ್ತು,”[೫೦] ಕಾದಂಬರಿಯ ಪ್ರಾರಂಭದ ಈ ವರ್ಣನೆ ಶಿವಳ್ಳಿಯ ಪ್ರವೇಶದ ಪರಿಚಯ ಮಾಡುತ್ತದೆ. ಕಾದಂಬರಿಯುದ್ದಕ್ಕೂ ಇಂತಹ ವರ್ಣನೆ ರೋಮಾಂಚನಕಾರಿಯಾಗಿದೆ. ಮೂಕ್ಯನ ಅತ್ಯಾಚಾರಕ್ಕೆ ಬಲಿಯಾದ ಕಲ್ಲವ್ವಳ ಸಾವಿನ ಸಂದರ್ಭದಲ್ಲಿ “ಮೂಡಲ ಆಕಾಸದ ಕುತ್ತಿಗೆಗೆ ಚೂರಿ ಹಾಕಿದಂಗಾಗಿ ಈಟೀಟೀ ನೆತ್ತರು ಸೋರುತ್ತ ಚುಮು ಚುಮು ಬೆಳಗಾಯಿತು. ಹಕ್ಕಿಪಕ್ಕಿಗಳು ಬಾಯಿ ಬಾಯಿ ಬಡ್ಕೊಂಡು ಲಬೋ ಲಬೋ ಅಂತ ಹೊಯ್ಕೋಳ್ಳುತ್ತ ಎದ್ದು ಬಿದ್ದು ಹಾರಿ ಹೋಗತೊಡಗಿದವು”[೫೧] ಎಂದು ಹೇಳಿರುವುದು ಸಂದರ್ಭೋಚಿತ ಸನ್ನಿವೇಶಗಳಲ್ಲಿ ಪ್ರಕೃತಿಯ ವರ್ಣನೆ ಕಾಣುತ್ತದೆ. ದುಃಖ, ಅಳು, ನಗುವಿನಲ್ಲಿ ಪ್ರಕೃತಿಯು ಭಾಗಿಯಾಗಿದ್ದು ಸನ್ನಿವೇಶದ ಅರಿವು ಉಂಟಾಗುತ್ತದೆ.

ಬದುಕು ಕಾದಂಬರಿಯು ಮಾನವನ ಬದುಕಿನಲ್ಲಿ ಪರಿಸರದ ಪಾತ್ರದ ಪ್ರಾಮುಖ್ಯತೆ, ಇದರೊಂದಿಗೆ ಭಾಷೆ, ವಸ್ತು ಕಥೆಯಿಂದ ವಿಭಿನ್ನವಾಗಿದೆ. ಕಾದಂಬರಿಯ ಆಶಯ ಬದಲಾವಣೆಯನ್ನು ಸೂಚಿಸುವುದಾಗಿದೆ. ಚಿಕ್ಕಮಲ್ಲು ಅಂತರ್‌ಜಾತಿ ವಿವಾಹ ಮಾಡಿಕೊಳ್ಳುವಲ್ಲಿ, ತುಳಜಾ, ಜೋಗಣಿಯಾಗಿದ್ದವಳು ಹುಸನಪ್ಪನನ್ನು ಮದುವೆಯಾಗಿ ಗರತಿಯಾಗಿ ಬಾಳುವಲ್ಲಿ ಸಾಮಾಜಿಕ ಬದಲಾವಣೆಯನ್ನು ಎತ್ತಿಹಿಡಿದಿದೆ. ದಲಿತ ಸಂವೇದನೆಯೊಂದಿಗೆ, ಸ್ತ್ರೀ ಸಂವೇದನೆ ಬಂಡಾಯದ ಹಿನ್ನೆಲೆಯಲ್ಲಿ ರಚಿತವಾಗಿರುವುದು ಲೇಖಕಿಯ ದಲಿತ, ಸ್ತ್ರೀ ಪ್ರಜ್ಞೆಯನ್ನು ಹೇಳುತ್ತದೆ. ಎಲ್ಲಿಯೂ ಕಥೆಯ ಮುನ್ಸೂಚನೆಯಿಲ್ಲದೆ ಓದಿಸಿಕೊಂಡು ಹೋಗುವ ಕುತೂಹಲಕಾರಿ ಸಂಗತಿಗಳು ಸಹೃದಯರನ್ನು ಆಕರ್ಷಿಸುವುದು ಕಾದಂಬರಿಯ ಮೇಲ್ಮಟ್ಟದ ವೈಶಿಷ್ಟ್ಯತೆಯಾಗಿದೆ.

ಈ ಕಾದಂಬರಿ ಬದುಕಿನ ನಾನಾ ಪದರುಗಳನ್ನು ಬಿಚ್ಚಿಡುತ್ತದೆ. ಗುಲಬರ್ಗಾ ಜಿಲ್ಲೆಯ ಗ್ರಾಮೀಣ ಪ್ರದೇಶದ ಕೆಳವರ್ಗದವರ ಬದುಕಿನ ಚಿತ್ರಣ ಬಿತ್ತರಗೊಂಡಿದೆ. ಹಳೆಯ ಸಂಪ್ರದಾಯ, ಮೂಢನಂಬಿಕೆ ಇಲ್ಲಿನವರ ಬದುಕನ್ನು ಆವರಿಸಿಕೊಂಡುಬಿಟ್ಟಿದೆ. ಮಲ್ಲವ್ವಳಿಗೆ ದೆವ್ವ ಬರುವುದು, ಜೋಗಣಿ ಪದ್ಧತಿಯಲ್ಲಿ ಸಂಪೂರ್ಣ ಪುರುಷ ಕೈವಾಡವಿದ್ದರೂ ದೇವರ ಹೆಸರಿನಲ್ಲಿ ನಂಬಿಕೆ ಹುಟ್ಟಿಸುವುದು, ಪೂಜಾರಿಗೆ ದೇವರು ಬರುವುದು ಇಂತಹ ನಂಬಿಕೆಗಳಲ್ಲಿ ಬದುಕುತ್ತಿರುವವರ ಜೀವನ ಕೆಳಮಟ್ಟದಲ್ಲಿರುವುದನ್ನು ಸೂಚಿಸುತ್ತದೆ. ಈ ಎಲ್ಲಾ ನಂಬಿಕೆಗಳಿಗೆ ಸಿಲುಕುವವಳು ಮಾತ್ರ ಹೆಣ್ಣು.

## ಚಂದ್ರಗಿರಿಯ ತೀರದಲ್ಲಿ

ಚಂದ್ರಗಿರಿಯ ತೀರದಲ್ಲಿ ಕಾದಂಬರಿಯು ಇಂಗ್ಲಿಷ್, ಹಿಂದಿ, ತಮಿಳು, ಮಲೆಯಾಳಂ, ಮರಾಠಿ, ಒರಿಯಾ, ತೆಲುಗು ಮೊದಲಾದ ಭಾಷೆಗಳಿಗೆ ಅನುವಾದಗೊಂಡಿದೆ. ಈ ಅನುವಾದಗಳೇ ಕಾದಂಬರಿಯ ವಸ್ತುವಿನ ಪ್ರಾಮುಖ್ಯತೆಯನ್ನು ಹೇಳುತ್ತದೆ. ಕೆಳವರ್ಗದ ಮುಸ್ಲಿಂ ಜನಾಂಗದ ಬದುಕನ್ನು ಲೇಖಕಿ ಈ ಕಾದಂಬರಿಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪುರುಷರ ದರ್ಪ ಒಂದೆಡೆಯಾದರೆ, ಮತ್ತೊಂದೆಡೆ ಧರ್ಮದ ತಪ್ಪು ಕಲ್ಪಿತ ಆಚರಣೆಗಳು ಹೆಣ್ಣಿನ ಬದುಕನ್ನು ನಿರ್ನಾಮಗೊಳಿಸುವುದನ್ನು ಕಾದಂಬರಿ ಒಳಗೊಂಡಿದೆ. ವಿಚ್ಛೇದನ, ವಿಚ್ಛೇದನ ನಂತರ ಮೊದಲ ಗಂಡ–ಹೆಂಡತಿ ಸೇರಲು ಇರುವ ನಿಯಮ, ಅವುಗಳ ಬಗೆಗಿನ ಜಿಜ್ಞಾಸೆ ಕಾದಂಬರಿಯ ಮುಖ್ಯವಸ್ತುಗಳಾಗಿವೆ. ಈ ಮೂಲಕ ಹೆಣ್ಣಿನ ಮೇಲೆ ನಡೆಯುವ ಧಾರ್ಮಿಕ ಶೋಷಣೆ ಬಿತ್ತರಗೊಂಡಿದೆ.

ಚಂದ್ರಗಿರಿ ಎಂಬುದು ಒಂದು ನದಿಯ ಹೆಸರು. ಈ ನದಿ ತೀರದಲ್ಲಿ ಅನೇಕ ಗ್ರಾಮಗಳು ಆಶ್ರಯ ಪಡೆದಿವೆ. ಅವುಗಳಲ್ಲಿ ಕಿಳಿಯೂರು ಒಂದು ಗ್ರಾಮ. ಈ ಗ್ರಾಮದಲ್ಲಿ ಬಡ ಮುಸ್ಲಿಮನಾದ ಮಹಮ್ಮದ್‌ಖಾನ್‌ನ ಕುಟುಂಬವಿದೆ. ಈತನ ಹೆಂಡತಿ ಫಾತಿಮಾ. ಇವರ ಮಕ್ಕಳು ನಾದಿರಾ, ಜಮೀಲಾ. ನಾದಿರಾಳನ್ನು ಚಂದ್ರಗಿರಿ ನದಿಯ ಮತ್ತೊಂದು ತೀರದಲ್ಲಿರುವ ರಶೀದ್‌ನಿಗೆ ಕೊಟ್ಟು ಮದುವೆ ಮಾಡಲಾಗುತ್ತದೆ. ರಶೀದ್‌ನ ತಾಯಿ ಆಮೀನಾ ಈ ಎರಡು ಕುಟುಂಬಗಳ ನಡುವೆ ಕಥೆ ಸುತ್ತುವರೆದಿದೆ.

ಇಲ್ಲಿನ ಸ್ತ್ರೀಯರು ಪುರುಷರ ದಬ್ಬಾಳಿಕೆ, ದೌರ್ಜನ್ಯಕ್ಕೆ ಸಿಲುಕಿ, ಧರ್ಮದ ಚೌಕಟ್ಟನ್ನು ಮೀರದೆ, ಪುರುಷರ ಕಪಿಮುಷ್ಠಿಗೆ ಸಿಲುಕಿರುವವರಾಗಿ ಕಂಡುಬಂದರೆ, ಪುರುಷರು ತಮ್ಮ–ತಮ್ಮ

ಒಣ ಪ್ರತಿಷ್ಠೆಗಳನ್ನು ಪ್ರದರ್ಶಿಸುವಂತೆ ಕಂಡುಬರುತ್ತಾರೆ. ಮಹಮ್ಮದ್‌ಖಾನ್ ಮತ್ತು ರಶೀದ್‌ರ ಒಣಪ್ರತಿಷ್ಠೆಗಳಿಗೆ ಬಲಿಪಶು ಆದವಳು ನಾದಿರಾ. ಒರಟು ಸ್ವಭಾವದ ಮಹಮ್ಮದ್‌ಖಾನ್‌ನಿಗೆ ಅಳಿಯನಿಂದ ಆರ್ಥಿಕ ಸಹಾಯ ದೊರೆಯದಾದಾಗ ಸ್ವತಃ ತಂದೆಯೇ ನಾದಿರಾಳನ್ನು ಪತಿಯಿಂದ ದೂರಮಾಡಿ ತನ್ನ ಮನೆಯಲ್ಲಿ ಬಂಡವಾಳದಂತೆ ಉಪಯೋಗಿಸಿಕೊಳ್ಳುತ್ತಾನೆ. ಒಬ್ಬ ಮಗಳ ಬದುಕನ್ನು ಕಟ್ಟಿಕೊಡುವ ಆತುರದಲ್ಲಿ ಮತ್ತೊಬ್ಬ ಮಗಳನ್ನು ಬಲಿಪಶು ಮಾಡುವುದು ಮಹಮ್ಮದ್‌ಖಾನ್‌ನ ಸ್ವಾರ್ಥವನ್ನು ತೋರಿಸುತ್ತದೆ. ಇವನಿಗೆ ತನ್ನ ತಪ್ಪಿನ ಅರಿವು ಇಲ್ಲದೇ "ರಶೀದ್ ಬಂದು ತನ್ನ ಕಾಲಿಗೆ ಬಿದ್ದು ತನ್ನೊಡನೆ ಕ್ಷಮೆ ಕೇಳಲಿ"[೫೨] ಆಗ ಬೇಕಾದರೆ ಅವನ ಹೆಂಡತಿ ಮಗುವನ್ನೂ ಕಳುಹಿಸಿಕೊಡುವೆ ಎಂಬ ದರ್ಪದಿಂದಲೇ ಸುಮ್ಮನಿರುತ್ತಾನೆ. ಇದೇ ರೀತಿಯ ಅಭಿಪ್ರಾಯ ನಾದಿರಾಳ ಅತ್ತೆ ಮನೆಯಲ್ಲೂ ಇರುತ್ತದೆ. ಇವರಿಬ್ಬರ ಪ್ರತಿಷ್ಠೆಗಳಿಗೆ ಬಲಿಯಾದವಳು ನಾದಿರಾ. ಇವರ ಅತಿರೇಕತನ ನಾದಿರಾಳ ಜೀವನವನ್ನೇ ತೆಗೆದುಕೊಳ್ಳುತ್ತದೆ. ನಾದಿರಾ ತವರು ಮನೆಯಲ್ಲಿರುವಾಗ ಅವಳ ಅತ್ತೆ ಮಗುವನ್ನು ಕಸಿದುಕೊಂಡು ಹೋಗುವಲ್ಲಿ ಮಗು ತಂದೆಗೆ ಸೇರಬೇಕಾದದ್ದು ಎಂಬ ದರ್ಪ ತೋರುತ್ತದೆ. ಆ ಸಂದರ್ಭದಲ್ಲಿ ಖಾನ್ "ಹೋದರೆ ಹೋಗಲಿ ಅವನ ಮಗು ನಮಗ್ಯಾಕೆ?"[೫೩] ಅವನ ಖರ್ಚಿಲ್ಲದೆ ಇಷ್ಟು ದಿನ ಸಾಕಿದ್ದೇ ದೊಡ್ಡದು ಎನ್ನುವಲ್ಲಿ ತಾಯಿಯಾದವಳಿಗೆ ಮಗುವಿನ ಮೇಲೆ ಯಾವ ಅಧಿಕಾರವು ಇಲ್ಲದಂತೆ ಕಾಣುತ್ತದೆ. ಇವರ ನಿಯಮದಂತೆ ಮಗು ತಂದೆಯ ಸ್ವತ್ತು. ತಾಯಿಯಾದವಳಿಗೆ ಕೇವಲ ಹೊರುವ ಹೆರುವ ಕೆಲಸ ಮಾತ್ರ. ಅವಳಿಗೂ ಮನಸ್ಸಿದೆ ತಾಯ್ತನದ ನೋವಿದೆ ಎಂಬ ಅರಿವು ಇಲ್ಲದೆ ಹೆಣ್ಣನ್ನು ನಡೆಸಿಕೊಳ್ಳುತ್ತಾರೆ.

ನಾದಿರಾ ಮುಂದೆ ತಲಾಖ್‌ನಂತಹ ಘೋರ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಮಹಮ್ಮದ್‌ಖಾನನು ನಾದಿರಾಳಿಂದ ಮಗುವನ್ನು ದೂರ ಮಾಡಿದ್ದಲ್ಲದೆ, ಶಾಶ್ವತವಾಗಿ ಗಂಡನ ಮನೆಯ ಬಾಗಿಲು ಮುಚ್ಚುವ ಕೆಲಸ ಮಾಡುತ್ತಾನೆ. ಖಾನ್ ಸ್ವಾರ್ಥದಿಂದ ನಾದಿರಾಳನ್ನು ತನ್ನ ವಯಸ್ಸಿನ ಸಲೀಂ ಎಂಬುವವನಿಗೆ ಮದುವೆ ಮಾಡುವ ಯೋಚನೆ ಮಾಡುತ್ತಾನೆ. ಇದರ ಉದ್ದೇಶ ಮಗಳು ಸುಖವಾಗಿರುತ್ತಾಳೆ ಎನ್ನುವುದಕ್ಕಿಂತಲೂ ಸಲೀಂ ಶ್ರೀಮಂತರನಾಗಿದ್ದರಿಂದ ಆರ್ಥಿಕ ನೆರವು ದೊರೆಯುತ್ತದೆ ಎಂಬ ಕಾರಣವಾಗಿರುತ್ತದೆ. ಅದಕ್ಕಾಗಿ ನಾದಿರಾಳೇ ತಲಾಖ್ ಹೇಳಿರುವುದಾಗಿ ರಶೀದ್ ಬಳಿ ಹೇಳುತ್ತಾನೆ. ರಶೀದ್ ಸತ್ಯಾಸತ್ಯತೆ ತಿಳಿಯದೆ ತಲಾಖ್ ನೀಡುತ್ತಾನೆ. ಇತ್ತ ಖಾನನು ನಾದಿರಾಳಿಗೆ ಸ್ವತಃ ರಶೀದನೆ ತಲಾಖ್ ನೀಡಿರುವುದಾಗಿ ಸುಳ್ಳು ಹೇಳುತ್ತಾನೆ. ಇಲ್ಲಿ ನಾದಿರಾಳು ರಶೀದ್, ಖಾನ್‌ನ ಅಹಂಮಿಕೆಗೆ ಗುರಿಯಾಗುತ್ತಾಳೆ.

ಇದೆಲ್ಲಕ್ಕೂ ಮಿಗಿಲಾಗಿ ನಾದಿರಾ ಧರ್ಮಬಂಧನಕ್ಕೆ ಸಿಲುಕುವುದು ಈ ಕಾದಂಬರಿಯಲ್ಲಿ ಬಿಂಬಿತವಾಗಿದೆ. ನಾದಿರಾ ಸಲೀಂನನ್ನು ಮದುವೆಯಾಗಲು ನಿರಾಕರಿಸಿದ್ದರಿಂದ ಖಾನ್‌ನಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಮತ್ತೊಮ್ಮೆ ಮಗಳನ್ನು ರಶೀದ್‌ನಿಗೆ ಕೊಟ್ಟು ಮದುವೆ ಮಾಡುವ ಯೋಚನೆ ಮಾಡುತ್ತಾನೆ. ಅಷ್ಟರಲ್ಲಿ ಕಾಲ ಮಿಂಚಿ ಹೋಗಿರುತ್ತದೆ. ಎಲ್ಲರೂ ಧರ್ಮದ ನಿಯಮಕ್ಕೆ ಒಳಗಾಗಬೇಕಾಗುತ್ತದೆ. ಆದರೆ ಶಿಕ್ಷೆ ಮಾತ್ರ ನಾದಿರಾಳಿಗೆ ಮೀಸಲಾಗಿರುತ್ತದೆ. ನಾದಿರಾ–ರಶೀದ್ ಮತ್ತೊಮ್ಮೆ ಮದುವೆಯಾಗಬೇಕಾದರೆ ಧರ್ಮದ ನಿಯಮದ ಪ್ರಕಾರ ನಾದಿರಾ ಇನ್ನೊಂದು ಮದುವೆಯಾಗಿ ತಲಾಖ್ ಪಡೆಯಬೇಕಾಗಿರುತ್ತದೆ. ಅದಕ್ಕಾಗಿ ಒಂದು ದಿನದ ಮಟ್ಟಿಗೆ ಮದುವೆ ಮಾಡಲು ಶೇಕಾಲಿ ಎಂಬ ಕುರೂಪಿಯನ್ನು ಆಯ್ಕೆ ಮಾಡುತ್ತಾರೆ. ನಾದಿರಾ ಈ ಮದುವೆಗೆ ಒಪ್ಪುವುದಿಲ್ಲ. ಮುಂದಿನ ಭವಿಷ್ಯದ ಸುಖಕ್ಕಾಗಿ, ಗಂಡ, ಮಗು ಸುಖ ಸಂಸಾರಕ್ಕಾಗಿ ಒಪ್ಪಬೇಕಾಗುತ್ತದೆ. ಆದರೂ ಪುರುಷ ಕೈವಾಡಕ್ಕೆ ಧರ್ಮದ ಅಮಾನವೀಯತೆಗೆ ಬಲಿಯಾಗದೆ ಸಾವಿಗೆ ಶರಣಾಗುತ್ತಾಳೆ. ಇವಳ ಸಾವಿನಲ್ಲಿ ಕಾದಂಬರಿ ಅಂತ್ಯಗೊಳ್ಳುತ್ತದೆ.

ಕಾದಂಬರಿಯ ಒಂದು ಹಂತದವರೆಗೆ ನಾದಿರಾ ತಂದೆಯಿಂದ ಶೋಷಣೆಗೊಳಗಾದರೆ ನಂತರದಲ್ಲಿ ಧರ್ಮದಿಂದ ಶೋಷಣೆಗೆ ಒಳಗಾಗುತ್ತಾಳೆ. ನಾದಿರಾ ಯಾವ ತಪ್ಪು ಮಾಡದಿದ್ದರೂ ಶಿಕ್ಷೆಗೆ ಗುರಿಯಾಗುತ್ತಾಳೆ. ಖಾನ್ ಸ್ವಭಾವತಃ ಅಧಿಕಾರಶಾಹಿಯಾಗಿದ್ದು, ಹೆಣ್ಣು ಎಂದರೆ ಅಧೀನ ಸ್ಥಾನದಲ್ಲಿ ನೋಡುವ ವ್ಯಕ್ತಿ. ಆದರೆ ರಶೀದ್ ಸ್ತ್ರೀ ಸಮಾನತೆ ಹೊಂದಿದವನು. ಇವನು ಹೆಂಡತಿ ವಿಷಯದಲ್ಲಿ ಸ್ತ್ರೀ ಮನಸ್ಕನಾಗುವುದಿಲ್ಲ. ಮಾವನ ಮೊಂಡುತನಕ್ಕೆ ತನ್ನ ಹಠವನ್ನು ಸೇರಿಸುತ್ತಾನೆ. ರಶೀದ್‌ನಲ್ಲೂ ಪುರುಷನೆಂಬ ಅಹಂಮಿಕೆ ಕಂಡುಬರುತ್ತದೆ. ಇವನು ಉದಾರಿಯಾಗಿದ್ದರೆ ಹೆಂಡತಿಯನ್ನು ಕರೆತರಬಹುದಿತ್ತು? ಅಥವಾ ತಲಾಖ್ ನೀಡಬಾರದಿತ್ತು? ಎಂಬ ಪ್ರಶ್ನೆಗಳಿಗೆ ರಶೀದನ ಕೋಪವೋ, ಸಂಕೋಚವೋ, ಅಹಂಕಾರವೋ ಒಟ್ಟಿನಲ್ಲಿ ಪುರುಷ ಹೆಣ್ಣಿನ ವಿಚಾರವಾಗಿ ಕೆಳಗೆ ಇಳಿಯದೇ ಮೇಲಿನ ಸ್ಥಾನದಲ್ಲೇ ನಿಲ್ಲುವಂತೆ ಯೋಚಿಸುವುದನ್ನು ಸೂಚಿಸುತ್ತದೆ. ಮತ್ತೊಂದೆಡೆ ನಾದಿರಾ ನದಿ ದಾಟಿ ಬರುವ ಸೂಚನೆ ನೀಡುವಲ್ಲಿ, ಮಗು ಕಸಿದುಕೊಂಡು ಹೋಗುವಲ್ಲಿ ಮಗುವಿಗಾಗಿಯಾದರೂ ಧರ್ಮವನ್ನು ಮೀರಿ ನಡೆಯಬೇಕೆಂಬುದನ್ನು ಸೂಚಿಸಿದರೂ ನಾದಿರಾ ಧರ್ಮ ಮೀರದಿರುವಲ್ಲಿ ಹೆಣ್ಣು ಅಸಹಾಯಕಳು ಎಂಬುದನ್ನು ತೋರಿಸುತ್ತದೆ.

ಈ ಕಾದಂಬರಿ ಕೇವಲ ಹೆಣ್ಣಿನ ಜೀವನ ಚಿತ್ರಣವಾಗಿರುವುದಿಲ್ಲ. ಮುಸ್ಲಿಂ ಧರ್ಮದಲ್ಲಿ ತಲಾಖ್ ಮತ್ತು ಗಂಡು–ಹೆಣ್ಣಿನ ಪುನರ್‌ಮಿಲನದ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ.

ಧರ್ಮದ ಹಿನ್ನಲೆಯಲ್ಲಿ ವಿಚ್ಛೇದಿತ ಹೆಣ್ಣು ಮತ್ತೆ ಮೊದಲ ಗಂಡನನ್ನು ಮದುವೆಯಾಗಬೇಕಾದರೆ ಮತ್ತೊಂದು ಮದುವೆಯಾಗಲೇಬೇಕೆ? ಒಂದು ರಾತ್ರಿಯ ಮಟ್ಟಿಗೆ ಹೆಣ್ಣಿನ ದೇಹವನ್ನು ಆತನಿಗೆ ಒಪ್ಪಿಸಲೇಬೇಕೆ? ಮರುದಿನ ಆ ವ್ಯಕ್ತಿ ತಲಾಖ್ ನೀಡದಿದ್ದರೆ? ಒಂದು ರಾತ್ರಿ ಎರಡನೇ ಗಂಡನಿಗೆ ದೇಹ ಅರ್ಪಿಸಿದಾಗ ಆತನಿಂದಲೇ ಗರ್ಭಿಣಿಯಾದರೆ? ಹೀಗೆ ನಾನಾ ಪ್ರಶ್ನೆಗಳು ಇಲ್ಲಿನ ಪಾತ್ರಗಳಿಂದಲೇ ಉಲ್ಬಣಗೊಳ್ಳುತ್ತವೆ. ಇದಕ್ಕೆ ಉತ್ತರವಾಗಿ ಲೇಖಕಿ ಧರ್ಮದ ಮೂಲವನ್ನೇ ಪರಿಚಯಿಸಿದ್ದಾರೆ.

"ಈ ಜನರಿಗೆ ಬುದ್ಧಿಯಿಲ್ಲ. ಖುರ್‌ಆನನ್ನು ಯಾರೂ ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲ. ಮೂರು ಬಾರಿ 'ತಲಾಖ್' ಎಂದು ಹೇಳುವುದರ ಅರ್ಥ ಒಂದೇ ಬಾರಿ ಹೇಳುವುದೆಂದಲ್ಲ. ಮೂರು ತಿಂಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಹೇಳಬೇಕು. ಮೂರು ಬಾರಿ 'ತಲಾಖ್' ಹೇಳುವುದೆಂದರೆ ಅದು ಖುರ್‌ಆನ್ ನಮಗೊದಗಿಸಿದ ಮೂರು ಅವಕಾಶಗಳು. ಈ ಮೂರನೇಯ ಅವಕಾಶವನ್ನು ನಾವು ಉಪಯೋಗಿಸುವಾಗ ನಾವು ಚೆನ್ನಾಗಿ ಯೋಚನೆ ಮಾಡಬೇಕು. ಇನ್ನೆಂದೂ ನನಗೆ ಈ ಹೆಂಡತಿ ಬೇಡ ಎಂಬ ದೃಢವಾದ ನಿಶ್ಚಯದೊಡನೆ ನಾವು ಈ ಮೂರನೇಯ ಅವಕಾಶವನ್ನೂ ಉಪಯೋಗಿಸಿಕೊಳ್ಳಬೇಕು. ಈ ಮೂರು ಅವಕಾಶಗಳು ಮುಗಿಯುವವರೆಗೆ, ಅಂದರೆ ಈ ಮೂರು ತಿಂಗಳುಗಳವರೆಗೆ ಗಂಡ ಹೆಂಡತಿ ಒಂದೇ ಮನೆಯಲ್ಲಿ ಬಾಳಬೇಕು. ಎರಡು ತಲಾಖ್ ಆದ ಮೇಲೆಯೂ ಗಂಡಹೆಂಡತಿ ಒಂದಾದರೆ ಆ ವಿಚ್ಛೇದನಾ ರದ್ದಾಗುತ್ತದೆ. ಪುನಃ ಎಲ್ಲವನ್ನು ಮೊದಲಿನಿಂದಾರಂಭಿಸಬೇಕು. ಎರಡು ಅವಕಾಶಗಳನ್ನು ಮಾತ್ರ ಉಪಯೋಗಿಸಿದರೆ ಯಾವ ತೊಂದರೆಯೂ ಇಲ್ಲದೆ ಗಂಡ ಹೆಂಡತಿ ಒಂದಾಗಬಹುದು. ಆದರೆ ಮೂರನೇಯ ಅವಕಾಶವೂ ಮುಗಿದು ಒಬ್ಬನಿಗೆ ಪುನಃ ಅದೇ ಹೆಂಡತಿ ಬೇಕೆಂದಾದ ಪಕ್ಷದಲ್ಲಿ, ಆಕೆ ಇನ್ನೊಬ್ಬನನ್ನು ವಿವಾಹವಾಗಿ ಆತನೊಡನೆ ಬಾಳಲಾರದೆ ಆತನಿಂದ 'ತಲಾಖ್' ಪಡೆದು ಬಂದವಳಾಗಿರಬೇಕು. ಮೊದಲಿನ ಗಂಡನನ್ನು ಪುನರ್ವಿವಾಹವಾಗಲು ಒಂದು ರಾತ್ರಿಗೆ ಓರ್ವನನ್ನು ವಿವಾಹವಾಗಬೇಕೆಂಬ ನಿಯಮವನ್ನು 'ಖುರಾನ್' ವಿಧಿಸಿಲ್ಲ"[೫೪] ಎಂಬ ಮಾತನ್ನು ಲೇಖಕಿ ಖಾಜಿಗಳಿಂದ ಹೇಳಿಸಿದ್ದು, ಈ ಧರ್ಮವನ್ನು ಮನುಷ್ಯತ್ವ ಇಲ್ಲದ ಗಂಡಸರು ತಮ್ಮ ಸೌಕರ್ಯಕ್ಕೆ ತಕ್ಕಂತೆ ಹೀಗೂ ಬಳಸಿಕೊಳ್ಳುವುದಿದೆ ಇದಕ್ಕೂ ಬದ್ಧರಾಗಿರಲೇಬೆಕು "ಒಮ್ಮೆಯೇ ತಲಾಖ್ ಎಂದು ಮೂರು ಸಲ ಹೇಳಿದರೂ ಆ ಬಂಧನ ಕಳಚಿಯೇ ಹೋಗುತ್ತದೆ ಎಂಬುದು ಎಲ್ಲ ಪಂಡಿತರ ಅಭಿಪ್ರಾಯ. ಅವರು ಪುನಃ ಒಂದಾಗಬೇಕಾದರೆ ಆಕೆ ಇನ್ನೊಬ್ಬನನ್ನು ವಿವಾಹವಾಗಲೇಬೇಕು. ಆ ಮದುವೆಯಲ್ಲಿ ಮಗು ಜನಿಸಿದರೆ ಆ ಮಗುವಿಗೆ ಆ ಗಂಡನೇ

ವಾರಸುದಾರನಾಗುತ್ತಾನೆ. ಮಗು ಹುಟ್ಟುವವರೆಗೆ ಅವಳು ತನ್ನ ಮೊದಲಿನ ಗಂಡನನ್ನು ವರಿಸುವುದೂ ಸಾಧ್ಯವಿಲ್ಲ”[೫೫] ಎಂಬ ಮಾತು ವ್ಯವಸ್ಥೆಯನ್ನು ಮೀರಿ ನಡೆಯಲಾಗದೆ ಕಾಲ ಕಾಲಕ್ಕೆ ಮನುಷ್ಯ ಮಾಡಿಕೊಳ್ಳುವ ಧರ್ಮದ ನಿಯಮಗಳಿಗೆ ಒಗ್ಗಿಕೊಳ್ಳಬೇಕೆಂಬುದನ್ನು ಹೇಳುತ್ತದೆ. ಈ ನಿಟ್ಟಿನಲ್ಲಿ ಪುರುಷಪ್ರಧಾನ ಸಮಾಜ ತಮಗೆ ಹೇಗೆ ಬೇಕೋ ಹಾಗೆ ಸ್ತ್ರೀ ಬಂಧನಕ್ಕೆ ಪೂರಕವಾಗಿ ಧರ್ಮವನ್ನು ಬದಲಿಸಿಕೊಳ್ಳುತ್ತಿದೆ ಎಂಬ ಸ್ಪಷ್ಟ ಅರಿವು ಈ ಕಾದಂಬರಿಯಿಂದ ಉಂಟಾಗುತ್ತದೆ.

## ಸೀತೆ–ರಾಮ–ರಾವಣ

ಭಾರತದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ಸಂಸ್ಕೃತಿಯ ಮಹಾಪ್ರವಾಹವೆನಿಸಿವೆ. ಸುಮಾರು ಇನ್ನೂರು ವರ್ಷಗಳಿಂದ ಭಾರತೀಯ ಮನೋಧರ್ಮದಲ್ಲಿ ನೆಲೆನಿಂತಿರುವ ರಾಮಾಯಣವು ವಾಲ್ಮೀಕಿ ರಾಮಾಯಣದಿಂದ ವೀರಪ್ಪಮೋಯ್ಲಿ ಅವರ 'ರಾಮಾಯಣ ಮಹಾನ್ವೇಷಣಂ' ವರೆಗೂ ಹಲವು ಮಗ್ಗುಲುಗಳ ತಾರ್ಕಿಕ ವಿಚಾರದಿಂದ ಹೆಕ್ಕಿ ತೆಗೆದಷ್ಟು ಹೊಸ ಹೊಸ ವಿಷಯಗಳು ಅನವಾರಣಗೊಂಡಿರುವುದನ್ನು ಕಾಣುತ್ತೇವೆ. ಇದುವರೆವಿಗೂ ಪುರುಷ ಕೇಂದ್ರಿತ ದೃಷ್ಟಿಯಿಂದ ರಚಿತವಾದ ರಾಮಾಯಣವನ್ನು ಎಚ್.ವಿ.ಸಾವಿತ್ರಮ್ಮನವರು ಮೊದಲಬಾರಿಗೆ ಸ್ತ್ರೀಕೇಂದ್ರಿತ ನೆಲೆಯಿಂದ ರಚಿಸಿದ್ದಾರೆ. ಈ ಹಿಂದೆ ಭ್ರಾತೃ ವಾತ್ಸಲ್ಯವನ್ನು ಮೆರೆಯುವಂತೆಯೋ, ರಾಜನ ಪ್ರತಿಷ್ಠೆ, ಶೌರ್ಯಗಳನ್ನು ಪ್ರಶಂಸಿಸುವಂತೆಯೋ ರಾಮಾಯಣ ರಚಿತವಾಗಿವೆ. ಭ್ರಾತೃವಾತ್ಸಲ್ಯದ, ರಾಜನ ಪ್ರತಿಷ್ಠೆ–ಶೌರ್ಯಗಳ ಹಿಂದೆಯೂ ಹೆಣ್ಣು ಎಂಬ ಜೀವಿ ಇದ್ದಾಳೆ. ಅವಳಿಗೂ ಅವಳದೇ ಆದ ಅಸ್ತಿತ್ವವಿದೆ ಎಂಬುದನ್ನು ಎಚ್.ವಿ.ಸಾವಿತ್ರಮ್ಮನವರು ಮೂಲ ರಾಮಾಯಣ ಅನುಸರಿಸುತ್ತಲೆ 'ಸೀತೆ–ರಾಮ–ರಾವಣ', 'ವಿಮುಕ್ತಿ' ಕಾದಂಬರಿಗಳನ್ನು ರಚಿಸಿದ್ದಾರೆ.

'ಸೀತೆ–ರಾಮ–ರಾವಣ' ಕಾದಂಬರಿಯು ರಾಮಾಯಣದಲ್ಲಿ ಬರುವ ಪುರುಷ ಪಾತ್ರಗಳಲ್ಲಿ ಹಿರಿಯನಾದ ದಶರಥ, ಕೌಸಲ್ಯೆಯನ್ನು ವಿವಾಹವಾಗಿದ್ದು, ಸುಮಿತ್ರೆ–ಕೈಕೆಯನ್ನು ವರಿಸುವುದರಿಂದ ಪ್ರಾರಂಭವಾಗಿ ರಾಮನ ಪಟ್ಟಾಭಿಷೇಕದಲ್ಲಿ ಮುಕ್ತಾಯಗೊಳ್ಳುತ್ತದೆ. ಇದರ ಒಳಗೆ ಬಹುಪತ್ನಿತ್ವ, ಮಕ್ಕಳಿಗಾಗಿ ಪುತ್ರಕಾಮೇಷ್ಠಿಯಾಗ, ಮಕ್ಕಳ ಲಾಲನೆ–ಪಾಲನೆ–ಪೋಷಣೆ, ಮಕ್ಕಳ ವಿವಾಹ, ಸೀತಾಪಹರಣ, ಸೀತೆಯನ್ನು ಬಿಡಿಸಿತರಲು ರಾಮ ಲಕ್ಷ್ಮಣರ ಪ್ರಯತ್ನ, ಸೀತೆಯ ಮೇಲಿನ ರಾಮನ ಸಂಶಯ, ಸೀತಾ ಅಗ್ನಿಪರೀಕ್ಷೆ ವಿಚಾರಗಳು ಕ್ರಮವಾಗಿ ನಿರೂಪಿತಗೊಂಡಿದೆ. ಈ ಕಥೆಯ ಒಳಗೆ ಹೆಣ್ಣು ಅಂದಿನ ವ್ಯವಸ್ಥೆಯಲ್ಲಿ ಎದುರಿಸಿದ ಘಟನೆಗಳಡಿಯಲ್ಲಿ ಸ್ತ್ರೀಪರ ದನಿ

ರಚಿತವಾಗಿದೆ. ಹೆಣ್ಣಿನ ಒಳ ಬೇಗುದಿಯ ಎಳೆಗಳನ್ನು, ಪುರುಷಷಾಹಿ ಸಮಾಜದ ಒಳಮುಖವನ್ನು ಪ್ರಸ್ತುತ ಕಾದಂಬರಿ ಒಳಗೊಂಡಿದೆ.

ಇಲ್ಲಿನ ಸ್ತ್ರೀಯರಿಗೆ ಹೇಳಿಕೊಳ್ಳಲು ಮಹಾರಾಣಿ ಅಷ್ಟೇ. ಅರಮನೆ ಇವರ ಪಾಲಿಗೆ ಬಂಧನವೇ ಆಗಿತ್ತು. ನಾಲ್ಕು ಗೋಡೆ, ಸೇವೆ ಮಾಡಿಸಿಕೊಳ್ಳಲು ಸಖಿಯರು, ಬಯಸಿ ಬಂದ ಪತಿಗೆ ದೇಹಸುಖ ಇವುಗಳೆಲ್ಲ ಶ್ರೀಮಂತಿಕೆಯ ವೈಭವಗಳು. ಇದೆಲ್ಲದರ ಹೊರಗು ಹೆಣ್ಣಿಗೂ ಮನಸ್ಸಿದೆ, ಭಾವನೆಗಳಿವೆ. ಸ್ತ್ರೀ ಅಸ್ತಿತ್ವದ ದನಿ ಇದೆ, ಆ ದನಿ ಪುರುಷನ ಸ್ವೇಚ್ಛಾಚಾರಕ್ಕೆ ಬಲಿಯಾಗಿ ನಲುಗುತ್ತಿದೆ ಎಂಬ ಸತ್ಯ ಕಾದಂಬರಿಯಲ್ಲಿ ಅಭಿವ್ಯಕ್ತಗೊಂಡಿದೆ. ಬಹುಪತ್ನಿತ್ವ ರೂಢಿಯಲ್ಲಿದ್ದರು, ಎಲ್ಲಾ ಹೆಂಗಳೆಯರ ಒಪ್ಪಿಗೆಯಿಂದ ನಡೆಯುತ್ತಿರಲಿಲ್ಲ. ಉದಾಹರಣೆಗೆ ದಶರಥ ಕೌಸಲ್ಯೆಗೆ ಹೇಳದೆಯೇ ಸುಮಿತ್ರೆಯನ್ನು, ಆನಂತರ ಇವರಿಬ್ಬರಿಗೂ ಹೇಳದೆಯೇ ಕೈಕೆಯನ್ನು ವರಿಸುತ್ತಾನೆ. ಇದರಿಂದ ದಶರಥನ ಹೆಣ್ಣಿನ ಮೇಲಿನ ತಿರಸ್ಕಾರ ಭಾವನೆ ಅರಿವಾಗುತ್ತದೆ. ಕೌಸಲ್ಯೆ ಪತಿಯ ತಿರಸ್ಕಾರಕ್ಕೆ ಪ್ರತೀಕಾರವಾಗಿ ತಿರಸ್ಕರಿಸಲು "ಹಂಚಿಕೊಂಡು ತಿನ್ನಲು ಪ್ರೇಮ ಅವಲಕ್ಕಿಯಲ್ಲ"[೫೬] ಎಂಬ ಕಾರಣವಾಗಿದೆ. ಪತಿಯಿಂದ ತಿರಸ್ಕೃತವಾದ ಕೌಸಲ್ಯೆಯ ಈ ಮಾತು ಎಲ್ಲಾ ತಿರಸ್ಕರಿಸುವ ಗಂಡಸರಿಗೂ ಅನ್ವಯಿಸುತ್ತದೆ. ಹೆಣ್ಣು ಹೊಂದಿಕೊಂಡು ಹೋಗುವುದರಿಂದಲೇ ಅವಳ ಸ್ಥಾನ ಕೆಳಸ್ಥಾನದಲ್ಲಿದೆ. ಬಹುಪತ್ನಿತ್ವಕ್ಕೆ ಪ್ರೋತ್ಸಾಹ ನೀಡುವಂತಿದೆ. ಪ್ರತಿಯೊಬ್ಬ ಹೆಣ್ಣು ಕೌಸಲ್ಯೆಯ ಮನೋಭಾವ ತಾಳಬೇಕಿದೆ. ಎಲ್ಲಿ ಹೆಣ್ಣಿಗೆ ಸ್ಥಾನ ಬರುವುದಿಲ್ಲವೋ ಆ ಸ್ಥಾನದಿಂದ ಆಕೆಯೇ ಹೊರ ನಡೆದಾಗ ಸ್ತ್ರೀತ್ವಕ್ಕೆ ಬೆಲೆ ಸಿಗುತ್ತದೆ.

ಕೈಕೆಯು ಸೌಂದರ್ಯದ ಗಣಿಯಾದರೆ, ಸುಮಿತ್ರೆ ಮಾತಿನ ಮಲ್ಲಿ, ಕೌಸಲ್ಯೆ ಗಾಂಭೀರ್ಯದ ಹೆಣ್ಣು. ಕೌಸಲ್ಯೆಗೆ ಉಳಿದಿರುವುದು ಹಿರಿಯ ಹೆಂಡತಿ ಎಂಬ ಅಧಿಕಾರ. ಇವಳು ಪತಿಯ ಪ್ರೀತಿ, ಪ್ರೇಮದಲ್ಲಿ ವಂಚಿತಳಾದರು ಆ ಸ್ಥಾನದಲ್ಲಿ ತೃಪ್ತಿ ಪಡಬೇಕಿತ್ತು. ಮಕ್ಕಳಿಗಾಗಿ ಯಾಗ ಮಾಡಿದ ನಂತರ ಪಾಯಸ ಮೊದಲಿಗೆ ಕೌಸಲ್ಯೆಗೆ, ಆನಂತರ ಕೈಕೆ, ಸುಮಿತ್ರೆ ಕುಡಿಯುತ್ತಾರೆ. ಕೌಸಲ್ಯೆ ಹಿರಿತನಕ್ಕೇ ಮಾತ್ರವೇ ತೃಪ್ತಿಪಡಬೇಕಿತ್ತು. ಮುಂದೆ ಕೌಸಲ್ಯೆಗೆ ರಾಮ, ಸುಮಿತ್ರೆಗೆ ಲಕ್ಷ್ಮಣ, ಶತ್ರುಘ್ನ, ಕೈಕೆಗೆ ಭರತ ಜನಿಸುತ್ತಾರೆ. ಅರಮನೆಯ ರಾಣಿಯರಿಗೆ ಬಂಧನದ ನಡುವೆಯೂ ಸಿಗುವ ಸಂತಸ ಮಕ್ಕಳ ಲಾಲನೆ–ಪಾಲನೆ. ಇದು ಕ್ಷಣಿಕ ಸುಖವಷ್ಟೇ. ಮಕ್ಕಳು ದೊಡ್ಡವರಾಗುತ್ತಿದ್ದಂತೆ ವಂಶದ ಪ್ರತಿಷ್ಠೆಗೆ ಒತ್ತು ಕೊಡುವುದರ ನಡುವೆ ತಾಯಿಯಾಗಲಿ, ಹೆಂಡತಿಯಾಗಲಿ ಬಲಿಪಶುವಾಗುತ್ತಾಳೆ.

ಕಾಲಕಳೆದಂತೆ ಒಂದು ದಿನ ವಿಶ್ವಾಮಿತ್ರನಿಗೆ ರಾಕ್ಷಸರು ತೊಂದರೆ ಕೊಡುತ್ತಿದ್ದಾರೆಂದು ರಾಕ್ಷಸರ ವಿರುದ್ಧ ಯುದ್ಧ ಮಾಡಲು ರಾಮನನ್ನು ಕರೆದುಕೊಂಡು ಹೋಗಲು ಬರುತ್ತಾರೆ. ಮಕ್ಕಳು ಎಷ್ಟೇ ಬೆಳೆದರು ತಾಯಿಯ ಮುಂದೆ ಚಿಕ್ಕವರೆ. ದಶರಥ, ರಾಮನು ವಿಶ್ವಾಮಿತ್ರನ ಜೊತೆ ಹೋಗಲು ಅಪ್ಪಣೆ ನೀಡಿದ್ದಾಗಿದೆ. ರಾಮ ಹೋಗಲು ನಿರ್ಧರಿಸಿದ್ದಾಗಿದೆ. ತಾಯಿಯನ್ನು ಕೇಳುವುದು ಕೇವಲ ನೆಪ ಮಾತ್ರವಾಗಿರುತ್ತದೆ. ಆ ಸಂದರ್ಭದಲ್ಲಿ ಕೌಸಲ್ಯೆ "ನಿಜ ಅವನೀಗ ತನ್ನ ಸೆರಗಿನ ಹಿಂದೆ ಆಡಿಕೊಳ್ಳುವ ಎಳೆಯ ಮಗುವಲ್ಲ. ಬಲಿಷ್ಠವಾದ ಅವನ ಬಾಹುಗಳನ್ನೂ ವಿಶಾಲವಾದ ಎದೆಯನ್ನೂ ನೋಡಿದಳು. ತನ್ನ ಮನಸ್ಸಿಗೆ ಅವನಿನ್ನೂ ಮಗು! ತನ್ನ ಹುಚ್ಚಿಗೆ ತಾನೇ ನಕ್ಕಳು, ಅವನೂ ಇಕ್ಷ್ವಾಕು ವಂಶದ ರಾಜಕುಮಾರ. ಜನನವಿತ್ತು ಅಕ್ಕರೆಯಿಂದ ಪೋಷಿಸಿದ ಮಾತ್ರಕ್ಕೆ ತನಗೆ ಅವನ ಜೀವನ ರೂಪಿಸುವ ಅಧಿಕಾರವಿಲ್ಲ. ತಾನೊಬ್ಬ ಯಃಕಃಶ್ಚಿತ್ ಹೆಂಗಸು. ಇದುವರೆಗೆ ಅವನಿಗೆ, ಅವನ ತಂದೆಗೆ ತನ್ನ ಅವಶ್ಯಕತೆಯಿತ್ತು, ಇನ್ನು ಅವನ ಜೀವನ ಅವನದು. ಅದನ್ನು ರೂಪಿಸಬಲ್ಲವನು ಅವನ ತಂದೆ. ತಾನು ಬೇಡವೆಂದರೆ ಕೇಳುವರ್‍ಯಾರು? ಅವನ ಶ್ರೇಯಸ್ಸಿಗಾಗಿ ದೇವಿಯಲ್ಲಿ ಮೊರೆಯಿಡಬಹುದು. ಅದಕ್ಕೆ ಹೆಚ್ಚಿನ ಪ್ರಾಧಾನ್ಯತೆ ತನಗಿದೆಯೆಂದುಕೊಂಡರೆ ಅದು ತನ್ನ ಹುಚ್ಚು"[೫೭] ಎನ್ನುವಲ್ಲಿ ಇದು ಕೇವಲ ಕೌಸಲ್ಯೆಯ ಮಾತಾಗಿರದೆ, ಅಂದು ಮಹಾರಾಣಿಯರಾಗಿ ಬದುಕುತ್ತಿದ್ದ ಎಲ್ಲಾ ಹೆಂಗಳೆಯರ ಹೆಣ್ಣಿನ ಸ್ಥಾನ ಕೌಸಲ್ಯೆಯ ಮಾತುಗಳಲ್ಲಿ ಧ್ವನಿತವಾಗಿದೆ. ತಾಯಿಯಾದವಳು ಗಂಡು ಮಕ್ಕಳನ್ನು ಹೆತ್ತು, ಬೆಳಸಿ ಸಲುಹಿದರೆ ಮುಗಿಯಿತು. ಮುಂದಿನ ಜೀವನದ ಆಯ್ಕೆ ಅವರದೇ ಆಗಿರುತ್ತದೆ. ಮನೆಯ ಯಜಮಾನದಾಗಿರುತ್ತದೆ. ಹೆತ್ತವಳಿಗೆ ಮಗನ ಜೀವನದ ಆಗುಹೋಗುಗಳನ್ನು ನಿರ್ಧರಿಸುವ ಸ್ಥಾನವು ಇರುವುದಿಲ್ಲ. ಅರಮನೆಯ ಸ್ತ್ರೀಯರು ಇದನ್ನು ಅರ್ಥೈಸಿಕೊಂಡಂತೆ ಬದುಕುವುದರಲ್ಲಿ ಅವರ ಪಾಲಿಗೆ ಮೀಸಲಾಗಿರುವುದು ದುಃಖ, ನೋವು, ಸಂಕಟ ಅದನ್ನು ಕೌಸಲ್ಯೆಯ ಮಾತುಗಳಿಂದಲೇ ತಿಳಿಯಬಹುದು. "ಈ ಮನೆಯ ಗಂಡಸರ ದೃಷ್ಟಿಯಲ್ಲಿ ಹೆಣ್ಣಿಗೆ ಯಾವ ಸ್ಥಾನವಿದೆಯೆಂದು ಆ ಬಡಕನ್ಯೆಗೇನು ತಿಳಿದಿದೆ"[೫೮] ಎಂದು ಮದುಮಗಳಾದ ಸೀತೆ ಕುರಿತು ಅಂದುಕೊಳ್ಳುವಲ್ಲಿ ದಶರಥನಾದಿಯಾಗಿ, ಮಕ್ಕಳವರೆಗೂ ಸ್ತ್ರೀ ಕುರಿತು ಅವರಿಗೆ ಇರುವ ಮನೋಧೋರಣೆ ಕೆಳಮಟ್ಟದಲ್ಲಿರುವುದನ್ನೇ ಹೇಳುತ್ತದೆ.

ರಾಮಾಯಣ ಕಥೆಯು ಸಾಗುತ್ತಾ ಒಂದೊಂದು ತಿರುವುಗಳನ್ನು ಪಡೆಯುತ್ತಿರುತ್ತದೆ. ರಾಜಕಾರಣದಲ್ಲಿ ಅಧಿಕಾರ ವ್ಯಾಮೋಹ ಯಾರನ್ನೂ ಬಿಟ್ಟಿದ್ದಿಲ್ಲ. ಮಹಾರಾಣಿಯಾದವರಿಗೆ ಪಟ್ಟದ ರಾಣಿಯಾಗಿ, ರಾಜಮಾತೆಯಾಗಿ ಮೆರೆಯಬೇಕೆಂಬುದು ಇಬ್ಬರು, ಮೂವರನ್ನು ವರಿಸಿದ

ಪತಿಯಿಂದ ಆ ಕನಸು ಭಗ್ನವಾಗುತ್ತದೆ. ಇದರಿಂದ ಕೈಕೆಯು ಅಧಿಕಾರದ ಲಾಲಸೆಯಿಂದ ಕೇಳಿದ ವರಗಳು ತಪ್ಪೆನಿಸುವುದಿಲ್ಲ. 'ಭರತನಿಗೆ ರಾಜ್ಯಾಭಿಷೇಕ ಮಾಡಬೇಕು, ರಾಮ ಹದಿನಾಲ್ಕು ವರ್ಷ ಕಾಡಿಗೆ ಹೋಗಬೇಕು' ಎನ್ನುವಲ್ಲಿ ಕೈಕೆಯ ಕ್ರೂರ ಮನಸ್ಥಿತಿ ಕಂಡುಬಂದರೂ ಅವಳ ತಾಯ್ತನ, ಅಧಿಕಾರದ ಮೇಲಿನ ವ್ಯಾಮೋಹ ಇಂತಹ ಮಾತುಗಳನ್ನಾಡಿಸುತ್ತದೆ. ಪ್ರತಿಯೊಬ್ಬ ತಾಯಿಯೂ ತಾನು ಹೆತ್ತ ಮಕ್ಕಳು ಉನ್ನತ ಹಂತಕ್ಕೆ ಏರಬೇಕು ಎಂದೇ ಬಯಸುತ್ತಾಳೆ. ಆನಂತರ ಇತರ ಮಕ್ಕಳ ಕಡೆಗೆ ಗಮನ ಹೋಗುವುದು ಸಹಜ. ಆ ನಿಟ್ಟಿನಲ್ಲಿ ಕೈಕೆ, ಮಗ ಭರತನ ಮೇಲಿನ ಪ್ರೀತಿಯಿಂದ ಸಮಾಜದಲ್ಲಿ ವಿರುದ್ಧವಾಗಿ ನಿಲ್ಲುತ್ತಾಳೆ.

ಇಕ್ಷ್ವಾಕು ವಂಶಸ್ಥರ ಪುರುಷರು ರಾಜ್ಯನಿಷ್ಠೆ-ಪ್ರಜಾನಿಷ್ಠೆಗಳಿಗೆ ಹೆಚ್ಚು ಒತ್ತು ಕೊಡುವವರು. ಇದರ ಅಡಿಯಲ್ಲಿ ಹೆಂಗಳೆಯರ ಬದುಕು ಅನಾವರಣಗೊಳ್ಳುವುದನ್ನು ಕಾಣಬಹುದು. ಕೈಕೆಯ ವರಗಳಿಂದ ರಾಮ-ಸೀತೆ ವನವಾಸ, ಲಕ್ಷ್ಮಣ-ಊರ್ಮಿಳೆ ಅಗಲಿ ಒಬ್ಬರಿಗೊಬ್ಬರು ಸವಿನೆನಪಲ್ಲೇ ಬದುಕುತ್ತಾರೆ. ಭರತ-ಶತ್ರುಘ್ನ ನಂದಿಗ್ರಾಮದಲ್ಲಿ ವಾಸ್ತವ್ಯ ಹೂಡಿದರೆ, ಮಾಂಡವಿ, ಶ್ರುತಕೀರ್ತಿ ಪತಿಸೇವೆ ಮಾಡುತ್ತ ಬದುಕುತ್ತಾರೆ. ಯಾವೊಬ್ಬ ಹೆಣ್ಣಿಗೂ ಸುಖ-ಸಂತೋಷವಿಲ್ಲ. ರಾಮ-ಸೀತೆ ಸುಖವಿಲ್ಲದಿದ್ದರು ನೆಮ್ಮದಿಯಿಂದಿದ್ದಾರೆ ಎಂದುಕೊಂಡರೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕುತ್ತಾರೆ. ಉಸಿರುಗಟ್ಟಿದ ವಾತಾವರಣ ಇಬ್ಬರಲ್ಲೂ ಕಾಡುತ್ತದೆ. ರಾವಣ ಸೀತೆಯನ್ನು ಅಪಹರಿಸುತ್ತಾನೆ. ಮಂಡೋದರಿ ಬದುಕಿರುವಾಗಲೇ ರಾವಣ ಮತ್ತೊಂದು ಹೆಣ್ಣಿಗಾಗಿ ಪರಿತಪಿಸುವುದು, ರಾಮನು ಸೀತೆಯ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುವುದು ಇದು ಮನುಷ್ಯತ್ವವಿಲ್ಲದ ರಾಮ-ರಾವಣ ಇಬ್ಬರಲ್ಲೂ ರಾಕ್ಷಸತನದ ಅತಿರೇಕತನವನ್ನು ಹೇಳುತ್ತದೆ. ರಾವಣ ಪರಸ್ತ್ರೀ ನಾರಿಯನ್ನು ಅಪಹರಿಸುವ ಮೂಲಕ ಹೆಂಡತಿಯನ್ನು ಕಳೆದುಕೊಂಡರೆ, ಮತ್ತೊಬ್ಬನ ಕಪಟತನಕ್ಕೆ ಹೆಚ್ಚು ಮಾನ್ಯತೆಕೊಟ್ಟು ಹೆಂಡತಿಯ ಮೇಲೆ ಅಪನಂಬಿಕೆಯನ್ನು ಇಟ್ಟುಕೊಳ್ಳುವಲ್ಲಿ ರಾಕ್ಷಸ-ದೇವಸಂಭೂತ (ರಾವಣ-ರಾಮ) ನಡುವೆ ಹೆಂಡತಿಗೆ ನೀಡಿರುವ ಸ್ಥಾನದ ಮಹತ್ವ ತಿಳಿಯುತ್ತದೆ.

ಕಾದಂಬರಿಯುದ್ದಕ್ಕೂ ಪುರುಷರ ದರ್ಪ, ಅಹಂಕಾರದ ಪರಮಾವಧಿಯನ್ನು ಒಳಗೊಂಡಿದೆ. ಸೀತೆಯಿಂದ ತಿರಸ್ಕೃತನಾದ ರಾವಣ ಹೆಣ್ಣಿನ ಮನಸ್ಸು ನೊಂದುಕೊಳ್ಳಬಹುದು ಎಂಬ ಅರಿವೂ ಇಲ್ಲದೆ ಸ್ವಸುಖದತ್ತ ಯೋಚಿಸುವ ಸ್ವಾರ್ಥ ವ್ಯಕ್ತಿ. ಹೆಂಡತಿಯೊಂದಿಗೆ ಸೀತೆಯ ಮೇಲೆ ಕಾಮೋದ್ರಿಕ್ತನಾಗಿರು-ವುದನ್ನು ಹೇಳಿಕೊಳ್ಳುತ್ತಾನೆ. ಮಂಡೋದರಿ ರಾವಣನನ್ನು ಸಮಾಧಾನಿಸುತ್ತಾಳೆ. ಸೀತೆಯ ಬಳಿ ಬಂದು ರಾವಣನ ಬಯಕೆ ಈಡೇರಿಸುವಂತೆ ಬಹಳ ನಮ್ರವಾಗಿಯೇ ಕೋರಿಕೊಳ್ಳುತ್ತಾಳೆ. ಇಲ್ಲಿ ಹೆಣ್ಣಿನ ಅಸಹಾಯಕತೆಯನ್ನು ತೋರ್ಪಡಿಸುತ್ತದೆ.

ಯಾವುದೇ ಹೆಣ್ಣು ತನ್ನ ಸ್ಥಾನಕ್ಕೆ ಮತ್ತೊಬ್ಬಳನ್ನು ನಿಲ್ಲಿಸುವುದನ್ನು ದ್ವೇಷಿಸುತ್ತಾಳೆ, ತಿರಸ್ಕರಿಸುತ್ತಾಳೆ. ಆದರೆ ಮಂಡೋದರಿ ರಾವಣನ ದುಃಖ ನೋಡಲಾಗದೆ ಸಮಾಧಾನಿಸುವ ಕೆಲಸ ಮಾಡುವಲ್ಲಿ ಪತಿಗಾಗಿ ಏನು ಬೇಕಾದರೂ ಮಾಡುವ ಹೆಂಡತಿಯರ ನಡುವೆ ಪುರುಷರ ಸ್ವಾರ್ಥತೆ ಎದ್ದುಕಾಣುತ್ತದೆ.

ತಪ್ಪಿತಸ್ಥನಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿ, ಒಂದು ಹೆಣ್ಣನ್ನು ಅಪಹರಿಸಿದವನಿಗೆ, ಅವಮಾನಿಸಿದವನಿಗೆ ಉಳಿಗಾಲವಿಲ್ಲ. ಇದನ್ನು ಕೈಕಸೆ ಹೇಳುವ ಮಾತುಗಳಿಂದಲೇ ಅರ್ಥೈಸಿಕೊಳ್ಳಬಹುದು. "ಈ ಪರಸ್ತ್ರೀ ಹರಣ ಎಂತಹ ಭಯಂಕರ ಪರಿಣಾಮ ತರುತ್ತೆಂಬ ಅರಿವು ನಿನಗಿಲ್ಲ. ಆಕೆಯ ಒಂದೊಂದು ತೊಟ್ಟು ಕಣ್ಣೀರೂ ಕಾಲನ ಉರಿನಾಲಿಗೆಯಾಗಿ ನಿನ್ನನ್ನೂ ನಿನ್ನ ಸಂಪತ್ತು, ವೈಭವಗಳನ್ನೂ ಸುಡುತ್ತೆ"[೫೯] ಎನ್ನುವಲ್ಲಿ ರಾವಣನ ಅಂತ್ಯವನ್ನು ಸೂಚಿಸುತ್ತದೆ. ಈ ಮಾತು ಅಪಹರಿಸಿದ ಎಲ್ಲಾ ವ್ಯಕ್ತಿಗಳಿಗೂ ಅನ್ವಯವಾಗುತ್ತದೆ.

ಕಾದಂಬರಿಯ ಕೇಂದ್ರಭಾಗ ರಾಮ-ಸೀತೆಯರ ಸಮ್ಮಿಲನ. ಸೀತೆ ಅಪಹರಣವಾಗುವುದನ್ನು ಅವಳಾಗಿ ಬಯಸಿದ್ದಲ್ಲ. ಇದು ರಾಮನಿಗೂ ತಿಳಿದಿರುವ ಸತ್ಯಸಂಗತಿ ಆದರೂ ರಾಮ, ಸೀತೆಯ ಅಂತರಾಳ ಹೊಕ್ಕು ನೋಡುವ ಪ್ರಯತ್ನ ಮಾಡದೆ "ಇಷ್ಟು ಕಾಲ ಪರಪುರುಷನ ಆಶ್ರಯದಲ್ಲಿದ್ದ ಆಕೆಯನ್ನು ಪತ್ನಿಯೆಂದು ಪರಿಗ್ರಹಿಸಿದರೆ ಲೋಕವೇನೆನ್ನಬಹುದು? ಇಲ್ಲ ಸಾಧ್ಯವಿಲ್ಲ ತನ್ನ ಹೃದಯ ಸೀತೆಗಾಗಿ ಹಾತೊರೆದರೂ ಅವಳ ವಿರಹದಿಂದ ಛಿದ್ರಛಿದ್ರವಾಗಿ ಹರಿದು ಹೋದರೂ ಆಕೆಯನ್ನು ಸ್ವೀಕರಿಸುವಂತಿಲ್ಲ. ಸ್ವಂತ ಸುಖಕ್ಕೋಸ್ಕರ ಇಕ್ಷ್ವಾಕುವಂಶದ ಕೀರ್ತಿಗೆ ಕಳಂಕ ತರುವಂತಿಲ್ಲ. ಜಗತ್ತಿನ ಅಪವಾದಕ್ಕೆ ಸಿಕ್ಕುವಂತಿಲ್ಲ."[೬೦] ಎಂದುಕೊಳ್ಳುತ್ತಾನೆ. ಇವು ರಾಮ ಒಬ್ಬ ರಾಜನಾಗಿ ಆಡುವ ಮಾತುಗಳಾಗಿವೆ. ಗಂಡನ ಸ್ಥಾನದಲ್ಲಿಯಾಗಲಿ, ನೊಂದ ಹೆಣ್ಣಿನ ಸ್ಥಾನದಲ್ಲಿಯಾಗಲಿ ನಿಂತು ಯೋಚಿಸುವ ತಾಳ್ಮೆಯು ರಾಮನಿಗಿಲ್ಲದಿರುವುದು ಸ್ಪಷ್ಟವಾಗಿದೆ. ಸೀತೆಯ ಮೊದಲ ಭೇಟಿಯಲ್ಲಿ "ಇನ್ನು ಮುಂದಿನ ಬದುಕಿನ ವಿಚಾರವೇನೆಂದು ಆಕೆಯನ್ನು ಕೇಳಿದೆಯಾ ವಿಭೀಷಣಾ"[೬೧] ಎಂಬ ಮಾತುಗಳನ್ನಾಡುತ್ತಾನೆ. ಸೀತೆಯ ಮುಖವನ್ನು ನೋಡದೆ ಹೇಳುವ ಈ ಮಾತುಗಳು ರಾಮನ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಎಂದೋ ಪತ್ನಿಯ ಸ್ಥಾನವನ್ನು ತಾನೇ ಸ್ವತಃ ಕಳೆದುಕೊಂಡಿದ್ದ ಸೀತೆಯು ಅವನ ಮಾತುಗಳಿಗೆ ದಿಟ್ಟವಾಗಿ ನಿಲ್ಲುತ್ತಾಳೆ. ಅಗ್ನಿಪ್ರವೇಶಕ್ಕೆ ಮುಂದಾಗುತ್ತಾಳೆ. ಅದರಲ್ಲಿ ಯಶಸ್ವಿಯು ಆಗುತ್ತಾಳೆ.

ಸೀತೆ ಪವಿತ್ರಳು ಎಂಬುದಕ್ಕ ರಾಮ ಒಂದು ಪವಾಡವನ್ನೇ ನೋಡುತ್ತಾನೆ. ಪ್ರಜೆಗಳ ಸಂಶಯ ಪರಿಗ್ರಹಿಸಲೆಂದು ಹೇಳುವ ರಾಮನ ಮಾತು ಪ್ರಜಾರಾಜನಾಗಿ ತೋರುತ್ತಾನೆಯೇ

ವಿನಹ, ಪತಿಯಾಗಿ ತೋರುವುದಿಲ್ಲ. ಆಂತರಿಕ ಜೀವನವನ್ನು ರಾಜನ ದೃಷ್ಟಿಯಿಂದಲೇ ನೋಡುವುದು ಆಡಳಿತಗಾರನ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತದೆ. ಮನುಷ್ಯತ್ವವನ್ನು ತೋರುವುದಿಲ್ಲ. ಇಂದು ಪ್ರಜಾರಾಜನಾಗಿ ನಿಂತಿರುವ ರಾಮ, ಸೀತೆಯ ದುಃಖಕ್ಕೆ ಸ್ಪಂದಿಸಿದ್ದರೆ, ಅಗ್ನಿಪರೀಕ್ಷೆಯನ್ನು ತಡೆಗಟ್ಟಿದ್ದರೆ ಲೋಕದಲ್ಲಿ ಇನ್ನೂ ಒಳ್ಳೆಯ ಹೆಸರು ಸಿಗುತ್ತಿತ್ತು. ಒಂದು ಹೆಣ್ಣಿಗೆ ಆಗಬಹುದಾದ ನೋವು, ಅಪಮಾನ ಊಹಿಸದಿರುವಲ್ಲಿ ಪುರುಷವಾದಿತನದ ಮೇಲ್ಮುಖಿಯಂತೆ ಕಂಡುಬರುತ್ತಾನೆ. ಸೀತೆ ರಾಮನ ಮೇಲಿದ್ದ ಪ್ರೀತಿ, ವಾತ್ಸಲ್ಯ, ಅನುಕಂಪಗಳೆಲ್ಲವನ್ನು ಅಗ್ನಿಪರೀಕ್ಷೆಯಲ್ಲಿ ಭಸ್ಮ ಮಾಡಿಕೊಂಡು ಸಜೀವ ದೇಹವಾಗಿ ಹೊರಬರುತ್ತಾಳೆ. ಇಕ್ಷ್ವಾಕುವಂಶದ ಜೊತೆ ತನ್ನ ಸಂಬಂಧವನ್ನು ಜೋಡಿಸಿಕೊಂಡ ಸೀತೆ ಇದರಿಂದ ಪಾರಾಗುವಂತಿರಲಿಲ್ಲ. ಎಲ್ಲರೂ ಅಯೋಧ್ಯೆಗೆ ಮರಳಿ ರಾಮನ ಪಟ್ಟಾಭಿಷೇಕದಲ್ಲಿ ಭಾಗವಹಿಸುವಲ್ಲಿ ಕಾದಂಬರಿ ಅಂತ್ಯಗೊಳ್ಳುತ್ತದೆ. ರಾಮ–ರಾವಣ ಎಂಬ ಹೆಸರಿನಡಿಯಲ್ಲಿ ನಡೆಯುವ ಪ್ರತಿನಿತ್ಯದ ರಾಮಾಯಣದಲ್ಲಿ ನೋವುಂಡು ಕೊರಗುತ್ತಿರುವ ಅನಂತ ಹೆಣ್ಣು ಮಕ್ಕಳ ಜೀವನವನ್ನು ಕಾದಂಬರಿ ಕಟ್ಟಿಕೊಡುವ ಪರಿ ಹೃದಯಂಗಮವಾಗಿ ನಿರೂಪಿತಗೊಂಡಿದೆ.

ಈ ಕಾದಂಬರಿಯಲ್ಲಿ ದಶರಥನಿಂದ ಕಣ್ಣೀರಿಡುವ ಹೆಂಗಳೆಯರ ಚಿತ್ರಣ ಒಂದು ಭಾಗವಾದರೆ, ರಾಮನಿಂದ ಸಜೀವ ಬೊಂಬೆಯಾಗಿ ಬದುಕುವ ಹೆಣ್ಣಿನ ಚಿತ್ರಣ ಮತ್ತೊಂದು ಭಾಗವಾಗಿ ಕಂಡುಬರುತ್ತದೆ.

## ವಿಮುಕ್ತಿ

ಉತ್ತರಕಾಂಡದ ಪ್ರೇರಣೆಯಿಂದ ರಚಿತವಾಗಿರುವ ವಿಮುಕ್ತಿ ಕಾದಂಬರಿಯಲ್ಲಿ ರಾಮ ಜನಪವಾದಕ್ಕೆ ಹೆದರಿ ಸೀತೆಯನ್ನು ಕಾಡಿಗೆ ಕಳುಹಿಸುವುದನ್ನು ಕಥಾವಸ್ತುವಾಗಿ ಇಟ್ಟುಕೊಂಡಿರುವ ಎಚ್.ವಿ.ಸಾವಿತ್ರಮ್ಮನವರು ಮೂಲಕಥೆಗೆ ಚ್ಯುತಿಬಾರದಂತೆ ಗಮನಹರಿಸಿದ್ದಾರೆ. ಉತ್ತರಕಾಂಡದಲ್ಲಿ ರಾಮನ ಜೊತೆ ಸೀತೆಗೆ ಬದುಕಲು ಇಚ್ಛೆ ಇರಲಿಲ್ಲ ಎಂಬುದನ್ನು "ತಥಾ ಮೇ ಮಾಧವೀ ದೇವೀ ವಿವರಂ ದಾತು ಮರ್ಹತಿ"[೬] ಎಂಬ ಸೀತೆಯ ಮಾತುಗಳಿಂದ ಜೀರ್ಣಿಸಿಕೊಂಡಂತೆ ವಿಮುಕ್ತಿ ಕಾದಂಬರಿಯನ್ನು ರಚಿಸಿದ್ದಾರೆ. ಈ ಕಾದಂಬರಿಯಲ್ಲು ಸೀತೆ ರಾಮನೊಟ್ಟಿಗೆ ಬದುಕಲು ನಿರಾಕರಿಸುತ್ತಾಳೆ. ಕಥಾವಸ್ತುವಿನಲ್ಲಿ ಯಾವ ಬದಲಾವಣೆ ಇಲ್ಲದಿದ್ದರೂ ಮುನ್ನುಡಿಯಲ್ಲಿ ಎ.ಎನ್.ಮೂರ್ತಿರಾವ್‌ರವರು ಹೇಳಿರುವಂತೆ ನಿರೂಪಣೆಯ ರೀತಿ ಕಥೆಯ ಮುಖ್ಯ ಪಾತ್ರಗಳನ್ನು ಚಿತ್ರಿಸಿರುವ ಬಗೆ ಮಾತ್ರ ಭಿನ್ನವಾಗಿದೆ. ಇದು ಕಾದಂಬರಿಯ ವಿಶಿಷ್ಟತೆಗೆ ಸಾಕ್ಷಿಯಾಗಿದೆ.

‘ಸೀತೆ–ರಾಮ–ರಾವಣ’ ಕಾದಂಬರಿಯಲ್ಲಿ ಕಾಲಾನುಕ್ರಮೇಣ ನೇರ ನಿರೂಪಣೆಯಾದರೆ, ‘ವಿಮುಕ್ತಿ’ ಕಾದಂಬರಿಯಲ್ಲಿ ಹಿನ್ನೋಟಗಳ ವಿನ್ಯಾಸದಿಂದ ಕಥೆಯ ನಿರೂಪಣೆ ಇದೆ. ಸೀತೆಯ ‘ಅಗ್ನಿಪರೀಕ್ಷೆ’ ತದನಂತರದಲ್ಲಿ ನಡೆಯುವಂತಹ ಘಟನೆಗಳ ಕುರಿತು ‘ವಿಮುಕ್ತಿ’ ಕಾದಂಬರಿ ಹೇಳುತ್ತದೆ. ರಾವಣನನ್ನು ಸಂಹಾರ ಮಾಡಿ ಸೀತೆ ಅಗ್ನಿಪರೀಕ್ಷೆಯಿಂದ ಹೊರಬಂದ ನಂತರ ಪುಷ್ಪಕ ವಿಮಾನದಲ್ಲಿ ಅಯೋಧ್ಯೆಗೆ ಮರುಳುತ್ತಿರುವ ರಾಮ, ಸೀತೆ, ಲಕ್ಷ್ಮಣ, ಜೊತೆಗೆ ವಾನರರು, ರಾಕ್ಷಸರು ಬರುತ್ತಿದ್ದು ಪ್ರತಿಯೊಬ್ಬರ ಯೋಚನೆಗಳ ಮಾನಸಿಕ ತುಮುಲಗಳಿಂದ ಕಾದಂಬರಿ ಆರಂಭವಾಗುತ್ತದೆ.

ಸೀತೆಯ ಅಗ್ನಿಪರೀಕ್ಷೆ ಎಲ್ಲರ ಮನಸ್ಸನ್ನು ಘಾಸಿಗೊಳಿಸಿದೆ. ಕಣ್ಣಾರೆ ವೀಕ್ಷಿಸಿದವರಿಗೆಲ್ಲ ಈ ದುರ್ಘಟನೆ ನುಂಗಲಾರದ ಬಿಸಿ ತುಪ್ಪವಾದರೆ, ಅನುಭವಿಯಾದ ಸೀತೆಯಲ್ಲಿ ಆಘಾತ, ನೋವು, ದುಃಖ, ತಲ್ಲಣಗಳಿಂದ ಒದ್ದಾಡುವಲ್ಲಿ ಅಚ್ಚರಿಪಡಬೇಕಾಗಿಲ್ಲ. ಈ ಸಂದರ್ಭದಲ್ಲಿ ಹೆಣ್ಣಿನ ಮಾನಸಿಕ ವೇದನೆ ವ್ಯಕ್ತಗೊಂಡಿದೆ. ಇಷ್ಟಾದರೂ ಕಾರಣೀಭೂತನಾದ ರಾಮನಲ್ಲಿ ಪಶ್ಚಾತ್ತಾಪದ ಛಾಯೆ ಇರುವುದಿಲ್ಲ. ಸೀತೆಗೆ ವೈರಿಯೇ ಆದರು ಅಗ್ನಿಪರೀಕ್ಷೆಯಿಂದ ಅವಳ ಬಗ್ಗೆ ಕನಿಕರ ಉಂಟಾಗುವ ಘಟನೆ ನಡೆದಿರುವಾಗ ರಾಮನಲ್ಲಿ ತಪ್ಪಿನ ಭಾವವಿಲ್ಲದಿದ್ದರು, ಸಂಶಯದ ಕರಿನೆರಳು ನಾಶವಾಗುವುದಿಲ್ಲ. ಸೀತೆಯ ಮೇಲೆ ಅದೇ ತಪ್ಪುಕಲ್ಪನೆ. ಇತ್ತ ಸೀತೆಯು ರಾಮನ ಕಟುವಾದ ಮಾತುಗಳಿಂದ, ಅವಮಾನಿತಳಾಗಿ ನೋವಿನಿಂದ ಹೊರಬರಲಾಗದೆ ಒದ್ದಾಡುತ್ತಿರುತ್ತಾಳೆ. ಇಬ್ಬರಲ್ಲೂ ಮನೆಮಾಡಿಕೊಂಡಿರುವುದು ರಾವಣನೆಂಬ ಕರಿನೆರಳು. ಇದರಿಂದ ಪ್ರೀತಿ, ಆದರ, ಅನುಕಂಪ, ಮಮತೆ, ಹುಡುಗಾಟಗಳಿಗೆ ಜಾಗವಿಲ್ಲವಾಗಿದೆ.

ಅಧಿಕಾರ ಸರ್ವಸಮಾನವಾಗಿದ್ದಾಗಲೆ ಅದಕ್ಕೂ ಅರ್ಥ ಬರುತ್ತದೆ. ಅಧಿಕಾರದ ಹೆಸರಿನಲ್ಲಿ ಸ್ವೇಚ್ಛಾಚಾರ ಕಂಡುಬಂದರೆ ರಾಜ್ಯಕಾಯುವ ರಾಜನಿಗೂ ಸಾಮಾನ್ಯನಿಗೂ ಯಾವುದೇ ಭಿನ್ನತೆ ಎನಿಸುವುದಿಲ್ಲ. ರಾಮನಲ್ಲಿ ಕಂಡುಬರುವುದು ಇದೇ ಸೂಚ್ಯವಾಗಿದೆ. ಋಷ್ಯಾಶ್ರಮಗಳಲ್ಲಿ ತಂಗಬೇಕೆಂದು ಆಸೆಪಟ್ಟ ಸೀತೆಗೆ ರಾಮ ದಟ್ಟಡವಿಯಲ್ಲಿ ಬಿಟ್ಟು ಬರುವ ಆಜ್ಞೆಯನ್ನು ಲಕ್ಷ್ಮಣನಿಗೆ ಮಾಡುತ್ತಾನೆ. ಇಂಥ ಕಟು ನಿರ್ಧಾರದ ಹಿಂದೆ ರಾಮನಲ್ಲಿ ಎರಡು ಕಾರಣಗಳು ಬಿಂಬಿತವಾಗಿವೆ. ಮೊದಲನೆಯದು “ಭಾವನಾ ಜೀವಿಯಾದ ಸೀತೆ ರಾವಣನ ವಿಶಾಲವಾದ ಎದೆಯಲ್ಲಿ ಹುದುಗಿದಾಗ ಆಕೆಯ ಮನಸ್ಸಿನಲ್ಲೇನೂ ಪ್ರತಿಕ್ರಿಯೆಯುಂಟಾಗಲಿಲ್ಲವೇ? ಆಕೆಯ ಮೈ ಪುಳಕಿತವಾಗಲಿಲ್ಲವೇ”[೬೩] ಎಂದು ಕಲ್ಪಿಸಿಕೊಳ್ಳುವಲ್ಲಿ ಸ್ವ–ಕಲ್ಪಿತವಾಗಿದೆ. ಅವಳ ಮನಸ್ಸಿನೊಳಗೆ ನಡೆಯುತ್ತಿರುವ ಕೋಲಾಹಲವಾದರು ಏನೆಂಬುದನ್ನು ತಿಳಿಯುವ ಪ್ರಯತ್ನವೂ ಮಾಡದೆ

‘ರಾವಣನ ಸಾವು’ ಅವಳಿಗೆ ನೋವು ತಂದಿರಬಹುದೆ ಎಂದೇ ಭಾವಿಸುವುದು ಹೆಂಡತಿಯ ಮೇಲಿನ ಅಪನಂಬಿಕೆಯನ್ನು ಹೇಳುತ್ತದೆ. ಬದಲಿಗೆ ಸೀತೆ ಕಟ್ಟುನಿಟ್ಟಿನಿಂದ ಜೀವಿಸಿದ್ದರಿಂದಲೇ ಇಬ್ಬರ ಸಂಬಂಧ ಕೂಡಿತು ಎಂಬ ಭಾವನೆ ಇಲ್ಲದಿರುವುದು ಮನುಷ್ಯ ತನಗೆ ಹೇಗೆ ಬೇಕೋ ಹಾಗೆ ಕಲ್ಪಿಸಿಕೊಳ್ಳುವುದನ್ನು ಹೇಳುತ್ತದೆ. ಮತ್ತೊಂದು ಪ್ರಜಾಪಾಲಕನ ದೃಷ್ಟಿಯಿಂದ ಯೋಚಿಸುವುದಾಗಿದೆ. “ದೊಡ್ಡ ಮನುಷ್ಯರು ಏನು ಮಾಡಿದರೂ ನಡೆದು ಹೋಗುತ್ತೆ. ಅವರು ಹೇಳಿದ್ದೇ ನಿಜ. ಇಂಥಾ ಕಟ್ಟುಕಥೆ ಎಲ್ಲಾದರೂ ಉಂಟೇನಯ್ಯಾ? ಎನ್ನುವ ಅನುಮಾನ ಅವರ ಮನಸ್ಸಿನಲ್ಲಿರದೆ ಹೋಗುವುದೇ? ಎಷ್ಟೇ ಗೌರವ ವಿಶ್ವಾಸಗಳನ್ನು ಎದುರಿಗೆ ತೋರಿದರೂ ಬೆನ್ನ ಹಿಂದೆ ಲಘುವಾಗಿ ಮಾತನಾಡಿಕೊಳ್ಳದಿರುತ್ತಾರೆಯೇ?”[೬೪] ಎಂದು ಯೋಚಿಸುವಲ್ಲಿ ಪ್ರಜಾಪಾಲಕನಾಗಿ ಕರ್ತವ್ಯವನ್ನು ಯೋಚಿಸುವುದು ಒಬ್ಬ ರಾಜನಲ್ಲಿರಬೇಕಾದ ಗುಣವನ್ನು ಹೇಳುತ್ತದೆ.

ರಾಜನಾದ ಮಾತ್ರಕ್ಕೆ ಪತಿಯ ಸ್ಥಾನವನ್ನು ಮರೆಯಬಾರದು. ಪ್ರಜಾಪಾಲನೆಯಲ್ಲಿ ಹೆಣ್ಣು ಸೇರಿರುತ್ತಾಳೆ. ಅವಳಿಗು ಸೂಕ್ತವಾದ ನ್ಯಾಯ ಕಲ್ಪಿಸುವುದು ರಾಜನ ಕರ್ತವ್ಯವಾಗಿರುತ್ತದೆ. ಸೀತೆ, ರಾವಣನ ಬಂಧನದಲ್ಲಿರುವುದರ ಯೋಗಕ್ಷೇಮ ಕುರಿತು ಅನುಭವಿಸಿದ ಯಾತನೆಗಳೇನು? ಆಕೆಯಲ್ಲಿ ಹುದುಗಿರುವ ಭಾವನೆಗಳೇನು? ಎಂದು ತಿಳಿಯುವ ಪ್ರಯತ್ನ ಮಾಡುವುದಿಲ್ಲ. ರಾಮ ರಾಜನಾಗಲಿ, ಪತಿಯಾಗಲಿ ಅಲ್ಲಿ ಸ್ವಹಿತದಂತೆ ವರ್ತಿಸುವುದನ್ನೇ ಕಾಣುತ್ತೇವೆ. ಸೀತೆಯ ಮೇಲೆ ಇಲ್ಲಸಲ್ಲದ ಅನುಮಾನಗಳನ್ನು ಸೃಷ್ಟಿಸಿಕೊಳ್ಳುತ್ತ ರಾಮ ಪುರುಷವಾದಿ ಎಂಬುದನ್ನು ಲಕ್ಷ್ಮಣ ಕೇಳಿದ ಒಂದು ಪ್ರಶ್ನೆಗೆ ನೀಡುವ ಉತ್ತರದಿಂದಲೇ ತಿಳಿಯುತ್ತದೆ. ಜನರು ಸೀತೆಯ ವಿಚಾರವಾಗಿ ಲಘುವಾಗಿ ಮಾತನಾಡುತ್ತಿದ್ದಾರೆಂದು ರಾಮ ಕಾರಣ ಒಡ್ಡಿದಾಗ, ಲಕ್ಷ್ಮಣ ಅತ್ತಿಗೆಯ ಪರಿಶುದ್ಧತೆ ಕುರಿತು ಧನಾತ್ಮಕವಾಗಿ ಮಾತನಾಡುತ್ತಾನೆ. ಆ ಮಾತಿಗೆ ರಾಮ “ಸೀತೆ ಪರಿಶುದ್ಧಳೆಂದು ನಂಬಬೇಕೆಂದು ಮನಸ್ಸು ತುಡಿಯುತ್ತಿದೆ. ಆದರೆ ಸಾಧ್ಯವಾಗಿಲ್ಲ ತಮ್ಮಾ. ನಮ್ಮಿಬ್ಬರ ನಡುವೆ ಘೋರವಾದ ಪ್ರಪಾತ ಸೃಷ್ಟಿಯಾಗಿದೆ. ಅದನ್ನು ದಾಟಿ ಅವಳ ಕೈ ಹಿಡಿಯಲು ಅಶಕ್ತನಾಗಿದ್ದೇನೆ. ಅವಳು ಎದುರಿಗೆ ಬಂದರೆ ಪ್ರೇತವೊಂದು ಬಂದ ಅನುಭವವಾಗುತ್ತದೆ”[೬೫] ಎನ್ನುವಲ್ಲಿ ರಾಮನಲ್ಲೆ ಸ್ವತಃವಾಗಿ ಸೀತೆಯನ್ನು ಒಪ್ಪಿಕೊಳ್ಳಲಾಗದಿರುವುದನ್ನು ಹೇಳುತ್ತದೆ. ಹೆಣ್ಣು ಎಂಬ ಕನಿಕರವು ಇಲ್ಲದೆ ದಟ್ಟವಾದ ಕಾಡಿನಲ್ಲಿ ಬಿಟ್ಟು ಬರುವಂತಹ ಸೂಚನೆ ಸೀತೆಯ ಮೇಲೆ ರಾಮನಲ್ಲಿರುವ ಭಾವನೆಯನ್ನು ವ್ಯಕ್ತಪಡಿಸುತ್ತದೆ.

ಅಗ್ನಿಪರೀಕ್ಷೆಯ ನಂತರ ಸೀತೆ ರಾಮನಲ್ಲಿರುವ ಭಾವನೆಯ ಅರಿವಿದ್ದರೂ ಅವನ ಮೋಹಪಾಶಕ್ಕೆ ಕರಗಿಹೋಗುತ್ತಾಳೆ. ಅದು ಸೀತೆಯ ಪಾಲಿಗೆ ರಾಮನೊಟ್ಟಿಗೆ ಕಳೆದ ಕೊನೆಯ ರಾತ್ರಿಯಾಗುತ್ತದೆ. ಇದು ಹೆಣ್ಣು ಪರಿಸ್ಥಿತಿಯ ಕೈಗೊಂಬೆ ಎಂಬುದನ್ನು ಹೇಳುತ್ತದೆ. ರಾಜಾಜ್ಞೆಯಲ್ಲಿ ಬಂಧಿಯಾದ ಲಕ್ಷ್ಮಣ ಸೀತೆಯನ್ನು ಕಾಡಿನಲ್ಲಿ ಬಿಟ್ಟು ಸತ್ಯಸಂಗತಿ ಅರಹುತ್ತಾನೆ. ವಿಷಯ ತಿಳಿದ ಸೀತೆ "ರಾಮ ಈಗ ನನಗೆ ಸ್ವಾತಂತ್ರ್ಯ ದಯಪಾಲಿಸಿದ್ದಾನೆ. ನನ್ನ ಮನಸ್ಸಿಗೆ ತೋರಿದಂತೆ ನಾನು ಮಾಡಬಹುದು. ರಾಮನ ಮನಸ್ಸಿನಲ್ಲಿ ಏನು ತುಮುಲ ನಡೆಯುತ್ತಿದೆಯೆಂದು ಹೆದರಿ ಕಾತರಗೊಳ್ಳಬೇಕಾಗಿಲ್ಲ. ಮನಸ್ಸುಗಳು ಹೊಂದದ ಮೇಲೆ ದೂರವಿರುವುದೇ ಒಳ್ಳೆಯದು; ಆತನಿಗೂ ಶಾಂತಿ, ನನಗೂ ನೆಮ್ಮದಿ, ನೀನು ಹಿಂದುರುಗಿ ಹೋಗಿ ನಿಮ್ಮಣ್ಣನಿಗೆ ಹೇಳು, ನನಗೇನೂ ಭಯವಿಲ್ಲ! ಬೇಸರವಿಲ್ಲ! ಈ ಒಂದು ಕಾರ್ಯದಿಂದ ನನ್ನನ್ನು ನಿಶ್ಚಿಂತೆಯಿಂದ ಜೀವಿಸಲು ಬಿಡುಗಡೆ ಮಾಡಿದ್ದಕ್ಕಾಗಿ ನಾನು ಸದಾ ಋಣಿಯೆಂದು ಹೇಳು"[೬೬] ಎನ್ನುವಲ್ಲಿ ರಾಮನ ಕ್ರೌರ್ಯ ಸಹಿಸಿಕೊಂಡು ಅವನೊಟ್ಟಿಗೆ ಬದುಕುವುದು ಸೀತೆಗೂ ಅಹಿತಕರವಾಗಿತ್ತು. ರಾಮನ ಪ್ರಕಾರ ಸೀತೆಗೆ ನೀಡಿದ ಶಿಕ್ಷೆಯೂ ತನಗೆ ಸಿಕ್ಕ ನೆಮ್ಮದಿಯೇ ಎಂದುಕೊಂಡರೆ, ಸೀತೆಗೆ ರಾಮನಿಂದ ದೊರೆತ ಬಿಡುಗಡೆ ಎಂಬಂತೆ ಸಂಭ್ರಮಿಸುವುದು ವೇದ್ಯವಾಗಿದೆ.

ಹೆಣ್ಣನ್ನು ಹೆಜ್ಜೆ ಹೆಜ್ಜೆಗೂ ಸಂಶಯಿಸಿ, ಆಕೆಯನ್ನು ಸಂಪೂರ್ಣ ತನ್ನ ಹತೋಟಿಗೆ ತಂದುಕೊಳ್ಳುವುದೋ ಇಲ್ಲವೇ ಅವಮಾನಿಸುವುದೋ ಪುರುಷಪ್ರಧಾನ ವ್ಯವಸ್ಥೆಯ ಮೂಲಮಂತ್ರ–ವಾಗಿದೆ. ಈ ಕಾದಂಬರಿಯಲ್ಲಿ ರಾಮನ ಸಂಶಯವು ಆ ಅಭಿಪ್ರಾಯಕ್ಕೆ ತಂದೊಡ್ಡುತ್ತದೆ. ಸೀತೆ ರಾಮನ ಸಂಶಯಕ್ಕೆ ಒಳಗಾಗಿ ಕಾಡುಪಾಲಾದರು, ಅವಳ ಮೇಲಿನ ಅನುಮಾನಗಳು ಕಡಿಮೆಯಾಗಿಲ್ಲ. ಒಂಟಿತನದ ವನವಾಸಕ್ಕೂ ಮೊದಲೇ ಸೀತೆ ಗರ್ಭಿಣಿಯಾಗಿದ್ದವಳು. ಈ ವಿಷಯವನ್ನು ಊರ್ಮಿಳೆಯ ಬಳಿ ಮಾತ್ರವೇ ಹೇಳಿಕೊಂಡಿರುತ್ತಾಳೆ. ಊರ್ಮಿಳೆಯಿಂದ ವಿಷಯ ತಿಳಿದ ಲಕ್ಷ್ಮಣ ಅಣ್ಣನಿಗೆ ಅರಹುತ್ತಾನೆ. ಸಂಭ್ರಮ ಪಡಬೇಕಾದ ವಿಚಾರಕ್ಕೆ ರಾಮ ಹೇಳುವುದು "ನಾನೇನೂ ಮಾಡಲಾರೆ ಲಕ್ಷ್ಮಣಾ, ಇಷ್ಟಾಗಿ ಅವಳ ಗರ್ಭದಲ್ಲಿ ಬೆಳೆಯುತ್ತಿರುವುದು ಯಾವ ವಂಶದ ಕುಡಿಯೋ! ಇಷ್ಟು ವರ್ಷ ಸಂತಾನವಿಲ್ಲದೆ ಈಗ ಗರ್ಭಿಣಿಯಾದಳೆಂದರೆ"[೬೭] ಎಂಬ ಮಾತಿನಲ್ಲಿ ಹೆಣ್ಣಿನ ಅಸ್ತಿತ್ವಕ್ಕೆ ಧಕ್ಕೆ ತರುವುದನ್ನು ಹೇಳುತ್ತದೆ.

ವಾಲ್ಮೀಕಿ ತನ್ನ ಆಶ್ರಯದಲ್ಲಿ ಬೆಳೆಯುತ್ತಿರುವ ಸೀತೆ, ಲವ–ಕುಶರನ್ನು ರಾಮನೊಟ್ಟಿಗೆ ಸೇರಿಸುವ ಪ್ರಯತ್ನದಿಂದ ಸುಖಸಂಸಾರಕ್ಕೆ ನಾಂದಿ ಹಾಡಲು ಬಯಸುತ್ತಾನೆ. ಸೀತೆಯು ಎಂದೆಂದೂ ಸಾಧ್ಯವಾಗದು ಎಂದುಕೊಂಡಿದ್ದವಳಿಗೆ ಸಂತಸವೂ ತರುತ್ತದೆ. ಆದರೂ ಸೀತೆ

ಪತಿಯ ಮೋಹಕ್ಕೆ ಒಳಗಾಗುವುದಿಲ್ಲ. ಅವಳ ಊಹೆಗಳು ಸುಳ್ಳಾಗುವುದಿಲ್ಲ. 'ಅಗ್ನಿ ಪರೀಕ್ಷೆಗೂ ಮುಂಚೆ ರಾಮ ಸಂಶಯ ಪಡಬಹುದೇನೋ' ಎಂಬಂತೆ ನಡೆದುಕೊಳ್ಳುವ ರಾಮನಲ್ಲಿ ಈ ಮಕ್ಕಳ ಬಗ್ಗೆಯು ಸಂಶಯಿಸಬಹುದು ಎಂಬ ಆಲೋಚನೆ ಮಾಡುತ್ತಾಳೆ. ರಾಮನ ವಿಷಯವಾಗಿ ಒಮ್ಮೆ ಎದುರಿಸಿದ್ದ ಪೆಟ್ಟಿನಿಂದ ಜಾಗೃತಳಾಗಿರುತ್ತಾಳೆ. ರಾವಣನ ಬಂಧನದಿಂದ ಮುಕ್ತಿ ಪಡೆದು ರಾಮನನ್ನು ಎದುರುಗೊಳ್ಳುವ ಸನ್ನಿವೇಶದಲ್ಲಿ ಇದ್ದ ಭಾವನೆಗಳು, ವಾಲ್ಮೀಕಿ ಆಶ್ರಮದಲ್ಲಿರುವ ಸೀತೆಗೆ ಇಲ್ಲವಾಗಿವೆ. ಅವಳು 'ಯಾಚಕಳಾಗಿಯಾಗಲಿ, ಪರಾವಲಂಬಿಯಾಗಿಯಾಗಲಿ' ಕಾಣುವುದಿಲ್ಲ. ಸೀತೆ ವಾಲ್ಮೀಕಿಯ ಒತ್ತಾಯಕ್ಕೆ ಮಣಿದು ರಾಮನನ್ನು ಎದುರುಗೊಳ್ಳುವುದು ಪರಿಸ್ಥಿತಿಯನ್ನು ಎದುರಿಸಿ ನಿಲ್ಲುವಂತೆ ಕಂಡುಬರುತ್ತಾಳೆ. ಸೀತೆಯ ಎಣಿಕೆಯಂತೆ ರಾಮ ಮಕ್ಕಳನ್ನು ಸಂಶಿಯಿಸುತ್ತಾನೆ. ಅಲ್ಲಿಯು ಸೀತೆಯನ್ನು ಮತ್ತೊಂದು ಪರೀಕ್ಷೆಗೆ ಗುರಿಪಡಿಸುತ್ತಾನೆ. 'ಸೀತೆ ಮಕ್ಕಳ ತಲೆ ಮೇಲೆ ಕೈಯಿಟ್ಟು, ನನ್ನವೇ ಎಂದು ಆಣೆ ಮಾಡಲಿ' ಎಂದು ಹೇಳುವುದು ಪ್ರಜೆಗಳಲ್ಲಿ ನಂಬಿಕೆ ತರಲು ಎಂದು ಅಲ್ಲಿಯೂ ತನ್ನ ಮೇಲೆ ತಪ್ಪನ್ನು ಹೇರಿಕೊಳ್ಳದಿರುವುದು ಕಂಡುಬರುತ್ತದೆ. ಸೀತೆ ರಾಮನ ಮಾತಿಗೆ ಪ್ರತೀಕಾರವಾಗಿ "ಮಕ್ಕಳು ತನ್ನವೇ ಎಂದು ಹೇಳುವ ಧೈರ್ಯ ನಿಮ್ಮಣ್ಣನಿಗಿದ್ದರೆ ಕರೆದುಕೊಂಡು ಹೋಗಲಿ ಅದಿಲ್ಲದಿದ್ದರೆ ಬಿಡಲಿ, ದೇವರ ಕಿಂಚಿತ್ ದಯೆಯಿಂದ ಇಬ್ಬರೂ ಗಂಡು ಮಕ್ಕಳು. ಹೆಣ್ಣಿನಂತೆ ಪರಾವಲಂಬನೆಯಲ್ಲಿ ನರಳಬೇಕಾಗಿಲ್ಲ"[೬೮] ಎಂಬ ಮಾತು ಸಂಶಯ ಪಡುವ ಗಂಡು ಜಾತಿಗೆ ಒಬ್ಬ ಪ್ರಾಮಾಣಿಕ ತಾಯಿಯ ಕೂಗು.

'ವಿಮುಕ್ತಿ' ಕಾದಂಬರಿಯಲ್ಲಿ ರಾಮನ ಸಂಶಯ ಎಷ್ಟು ಉಗ್ರವಾಗಿದೆಯೋ ಅಷ್ಟೇ ಕಠೋರವಾಗಿ ಸೀತೆಯ ಧೈರ್ಯ, ದಿಟ್ಟತನ ಕಂಡುಬರುತ್ತದೆ. ರಾಮ ಪ್ರಜಾಪಾಲನೆಯ ಹೆಸರಲ್ಲಿ ಸ್ತ್ರೀ ಶೋಷಕ ಪ್ರತಿನಿಧಿಯಂತೆ ಕಾಣುತ್ತಾನೆ. ಒಬ್ಬ ರಾಜನಿಗೆ ಪ್ರಜೆಗಳ ದೃಷ್ಟಿಕೋನ ಮಾತ್ರ ಮುಖ್ಯವಾಗಿರುವುದಿಲ್ಲ. ಮಗನಾಗಿ, ಪತಿಯಾಗಿಯು ಸಾಧಿಸುವುದಿದೆ ಎಂಬುದನ್ನು ಕಾದಂಬರಿ ಒಳಗೊಂಡಿದೆ. ಈ ನಡುವೆ ಕೌಸಲ್ಯೆ ಪತಿಯ, ಮಗನ ಪ್ರೀತಿ, ಆದರಗಳ ಕೊರತೆಯಿಂದ ಸಾವಿನ ಬಾಗಿಲು ತಟ್ಟುವುದು ಕನಿಕರ ಹುಟ್ಟಿಸುತ್ತದೆ. ಕೌಸಲ್ಯೆ ಜೀವನದ ಎಲ್ಲಾ ಹಂತಗಳಲ್ಲು ಕಹಿಯನ್ನುಂಡು ಕಡೆಗಾಲದಲ್ಲಿ ರಾಮನ ಸಹಚರ್ಯ ಬಯಸುವವಳಾಗಿರುತ್ತಾಳೆ. "ಆಗೊಮ್ಮೆ, ಈಗೊಮ್ಮೆ ರಾಮ ಬಂದು ಮೈಗಂಟಿದಂತೆ ಕುಳಿತು ಮಾತನಾಡಿಸುತ್ತಿದ್ದರೆ, ಆ ಅಮೃತ ಸೇವನೆಯಿಂದ ಬೆಂದ ಹೃದಯ ಚಿಗುರೊಡೆಯುತ್ತಿತ್ತೇನೋ! ರಾಮ ಹಾಗೆ ಮಾಡಲಿಲ್ಲ, ರಾಜಕಾರ್ಯ ಸಂಸಾರ ಕೋಟಲೆಗಳಲ್ಲಿ ಮುಳುಗಿದ ಅವನ ದಿಗಂತದಲ್ಲಿ ಆ ನೊಂದ ತಾಯಿಯ

ಮೂರ್ತಿ ಕಾಣಿಸಲಿಲ್ಲ"[೬೯] ಕೌಸಲ್ಯೆ ರಾಮನಂಥವರ ನಡುವೆ ಸಿಲುಕಿ ಪ್ರೀತಿ ವಂಚಿತಳಾಗಿ ಮರಣ ಹೊಂದುತ್ತಾಳೆ.

ಮಕ್ಕಳು ಕಡೆಗಾಲದಲ್ಲಿ ತಂದೆ–ತಾಯಿಗೆ ನೆರವಾಗುತ್ತಾರೆ. ಅದರಲ್ಲೂ ಗಂಡು ಮಕ್ಕಳು ಆಸರೆಯಾಗುತ್ತಾರೆ. ಇಂಥ ಭಾವನೆಗಳು ಮನೆಮಾಡಿಕೊಂಡಿವೆ. ಆ ನಂಬಿಕೆಯನ್ನು ಸೀತೆ–ರಾಮ–ರಾವಣ ಕಾದಂಬರಿಯಲ್ಲಿ ಕೌಸಲ್ಯೆ ಒಡೆದರೆ, 'ವಿಮುಕ್ತಿ' ಕಾದಂಬರಿಯಲ್ಲಿ ಸೀತೆ ಒಡೆದು ಹಾಕುತ್ತಾಳೆ. ಮಕ್ಕಳ ಮೇಲಿನ ವ್ಯಾಮೋಹ ಅತಿಯಾಗುತ್ತಿದ್ದಂತೆ ಮುಂದೆ ಅನಾಹುತ ತಪ್ಪಿದ್ದಲ್ಲ. "ಹೇಗೂ ರಘುವಂಶದ ಕುಡಿಗಳಲ್ಲವೇ? ಬೇರೆಯವರ ದೃಷ್ಟಿಕೋನ ಅವರಿಗೆಂದಿಗೂ ಕಾಣಲಾರದು"[೭೦] ಎಂಬಂತೆ ಮಕ್ಕಳನ್ನು ಕರ್ತವ್ಯದ ಹೆಸರಲ್ಲಿ ಬೆಳೆಸುತ್ತಾಳೆ. ಮಕ್ಕಳು ಎಂಬ ಆತ್ಮೀಯತೆಯಾಗಲಿ, ಗಂಡುಮಕ್ಕಳೆಂಬ ವ್ಯಾಮೋಹವಾಗಲಿ ಇರುವುದು ಒಳ್ಳೆಯದಲ್ಲ. ಜೀವನದಲ್ಲಿ ಆತ್ಮವಿಶ್ವಾಸ, ಭಯದ ಬೆನ್ನಟ್ಟುವ ಛಲ, ಪುರುಷಪ್ರಧಾನ ಸಮಾಜದಲ್ಲಿ ಸ್ವಾವಲಂಬಿತನ ಹೆಣ್ಣಿನಲ್ಲಿ ಒಡಮೂಡಬೇಕೆಂಬುದು ಕಾದಂಬರಿಯ ಒಳಾಂತರ್ಯದಲ್ಲಿ ಕಂಡುಬರುತ್ತದೆ.

## ಮಾಧವಿ

ಖ್ಯಾತ ಸಮಾಜವಿಜ್ಞಾನಿ 'ಶ್ರೀಮತಿ ಇರಾವತಿ ಕರ್ವೇ'ಯವರ ಕೃತಿ 'ಯುಗಾಂತ' ಹಾಗೂ 'ಶ್ರೀಪಾದ ಅಮೃತಡಾಂಗೆಯವರ "India From primitive Communism to slavery' ಎಂಬ ಕೃತಿಗಳು 'ಮಾಧವಿ' ಕಾದಂಬರಿ ರಚನೆಗೆ ಪ್ರೇರಣೆಯಾಗಿವೆ ಎಂದು ಸ್ವತಃ ಲೇಖಕಿಯೇ ಮುನ್ನುಡಿಯಲ್ಲಿ ಹೇಳಿದ್ದಾರೆ. ಮಹಾಭಾರತದ ಉದ್ಯೋಗಪರ್ವದ ಶ್ಲೋಕಗಳಲ್ಲಿ ಉಲ್ಲೇಖಿಸಲ್ಪಟ್ಟ ಮಾಧವಿಯ ಬದುಕಿನ ಚಿತ್ರಣವೇ ಈ ಕಾದಂಬರಿಯ ವಸ್ತು. ಹೆಣ್ಣುಮಕ್ಕಳ ಬದುಕಿನ ಬವಣೆಗಳನ್ನು ಈ ಕಾದಂಬರಿ ಮಾಧವಿ ಪಾತ್ರದ ಮೂಲಕ ಕಟ್ಟಿಕೊಡುತ್ತದೆ.

ಪುರಾಣ ಪ್ರಸಿದ್ಧಿ ಪಡೆದಿರುವ 'ಯಯಾತಿ' ಕುರುವಂಶದ ಮೂಲಪುರುಷ. ಈತನ ಮಗಳೇ 'ಮಾಧವಿ'. ಭೀಷ್ಮನಿಗೂ–ಯಯಾತಿಗೂ ಆರುತಲೆಮಾರುಗಳ ಅಂತರವಿದ್ದುದರಿಂದ 'ಮಾಧವಿ' ಕಥೆ ಮಹಾಭಾರತದ ಘಟನೆಗಿಂತ ಮೂರು ಶತಮಾನಗಳ ಹಿಂದಿನದ್ದಾಗಿದೆ. ಮಹಾಭಾರತದ ಉಪಕಥೆಯಾಗಿ ಬರುವ 'ಮಾಧವಿ' ಕ್ರಿ.ಪೂ ಸುಮಾರು ಒಂದು ಸಾವಿರ ವರ್ಷಗಳ ಹಿಂದಿನ ಸಾಮಾಜಿಕ ಸಂದರ್ಭದಲ್ಲಿದ್ದಂತಹ ಅಸಹಾಯಕ, ಅಸ್ವಾತಂತ್ರ್ಯ ಹೆಣ್ಣಿನ ಸ್ಥಿತಿಯನ್ನು ಕಟ್ಟಿಕೊಡುತ್ತದೆ. ಇದನ್ನು ಲೇಖಕಿ ಪುರುಷಪ್ರಧಾನ ಸಮಾಜದಲ್ಲಿ ಸ್ತ್ರೀ ದೈಹಿಕವಾಗಿ–

ಮಾನಸಿಕವಾಗಿ ಶೋಷಣೆಗೆ ಒಳಗಾಗುವ ಹಾಗೂ ಪ್ರತಿಭಟನಾವಾದಿಯಾಗಿ ನಿಲ್ಲುವುದನ್ನು 'ಮಾಧವಿ' ಕಾದಂಬರಿಯಲ್ಲಿ ವಸ್ತುವಾಗಿ ಚಿತ್ರಿಸಿದ್ದಾರೆ ಆದಿಮಾನವರ ಕಾಲದಲ್ಲಿ ಮಾತೃ ಪ್ರಧಾನ ವ್ಯವಸ್ಥೆಯಿದ್ದದ್ದು ಉತ್ಪಾದನಾ ಕ್ರಮಗಳ ಕಠಿಣತೆಯಿಂದ ಪಿತೃಪ್ರಧಾನ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. "ಮಹಾಭಾರತ ಕಾಲಕ್ಕಾಗಲೇ 'ಸ್ತ್ರೀಯು ಪುರುಷನ ಆಸ್ತಿ' ಎಂಬ ಭಾವನೆ ಬಲವಾಗಿ ಬೇರೂರಿತ್ತು"[೭೧]. ಮಹಾಭಾರತ ಕಾಲದ ಸ್ತ್ರೀಯರೆಲ್ಲರೂ ಪುರುಷರ ಗುಲಾಮಳಾಗಿಯೇ ಬದುಕುವುದು ಅನಿವಾರ್ಯವಾಗಿತ್ತು. ಮಾಧವಿಯೂ ಪುರುಷರ ಕ್ರೂರತನಕ್ಕೆ ಬಲಿಯಾದವಳು. ಯೌವ್ವನಾವಸ್ಥೆಯ ಮಾಧವಿ ಹಗಲುಗನಸು ಕಾಣುವ ವಯಸ್ಸಿನಲ್ಲಿ ತಂದೆಯಾದಿಯಾಗಿ ಮೂವರು ರಾಜಕುಮಾರರು, ಒಬ್ಬ ಋಷಿ ಒಡೆಯನ ನಡುವೆ ಸಿಲುಕಿಕೊಳ್ಳುವುದೇ ಈ ಕಾದಂಬರಿಯ ಕಥೆಯಾಗಿದೆ.

"ರಾಜಶಾಹಿ ಸಮಾಜ ವ್ಯವಸ್ಥೆಯಲ್ಲಿದ್ದ ಹೆಂಗಸನ್ನು ಕೊಳ್ಳುವುದು, ಮಾರುವುದು, ದಾನಮಾಡುವುದು, ನಿಯೋಗ* ಮಾಡುವುದು ಈ ಎಲ್ಲಾ ಪದ್ಧತಿಗಳ ಮೂಲಕ ನಡೆಯುವ ಹೆಣ್ಣಿನ ನಿರಂತರ ಶೋಷಣೆಯನ್ನು ಈ ಕಾದಂಬರಿಯಲ್ಲಿ ಸ್ಪಷ್ಟಪಡಿಸಲಾಗಿದೆ"[೭೨].

'ದಾನ' ಸರ್ವಶ್ರೇಷ್ಠವಾದುದು. ಬೇಡಿ ಬಂದವರಿಗೆ ದಾನ ನೀಡುವ ಮೂಲಕ ಸಂತೈಸಿದರೆ ನೆಮ್ಮದಿ ದೊರೆಯುತ್ತದೆ. ದಾನಕ್ಕೂ ಅಂತಿಮ ಗೆರೆ ಎಂಬುದೊಂದು ಇರುತ್ತದೆ. ಅದನ್ನು 'ಮೀರಿ' ನಡೆದರೆ ಮಾನವತೆ ಎಂಬುದನ್ನೇ ಮೀರಿದಂತೆ ಆಗುತ್ತದೆ. ಗಾಲವ ಎಂಬ ವ್ಯಕ್ತಿ ವಿಶ್ವಾಮಿತ್ರನ ಶಿಷ್ಯ ಗುರುವಿಗೆ ಗುರುದಕ್ಷಿಣೆಯಾಗಿ ನೀಡಲು ೮೦೦ ಕುದುರೆಗಳನ್ನು ಅರಸುತ್ತಾ ಬರುತ್ತಾನೆ. ವಿಶ್ವಾಮಿತ್ರ ತಮಾಷೆಗೆ ಎಂದು ಕೇಳಿದ ಕುದುರೆಗಳು ಸಾಮಾನ್ಯವಾದುವಲ್ಲ. ೮೦೦ 'ಕಪ್ಪು ಕಿವಿಯ ಬಿಳಿಕುದುರೆ'ಗಳನ್ನು ಕೇಳಿರುತ್ತಾನೆ. ಈ ಕುದುರೆಗಳನ್ನು ಅರಸುತ್ತಾ ಗಾಲವ, ಯಯಾತಿ ರಾಜನ ಬಳಿ ಬರುತ್ತಾನೆ. ಯಯಾತಿ ರಾಜ ಕುದುರೆಗಳನ್ನು ಕೇಳಿ ಬಂದ ಗಾಲವನಿಗೆ ಮಗಳನ್ನೇ ದಾನ ಮಾಡುತ್ತಾನೆ. ಇದು ಮನುಷ್ಯತ್ವವಿಲ್ಲದ ಮೃಗವನ್ನೇ ಮೀರಿಸಿದಂತೆ ಕಾಣುತ್ತದೆ. ಈ ನಿರ್ಧಾರಕ್ಕೆ ಹೆಣ್ಣೆಂಬ ಉಪೇಕ್ಷತನ ಆ ಕಾಲದಲ್ಲಿ ಗಟ್ಟಿಗೊಂಡಿರುವುದನ್ನು ಕಾಣಬಹುದು. ಇವಳಿದ್ದಷ್ಟು ದಿನ ಹೊರೆ, ಹುಟ್ಟಿದಾಗಲೇ ತಾಯಿ ಕಳೆದುಕೊಂಡು ಅಪಶಕುನ ಹೊತ್ತವಳು ಎಂಬ ಕೀಳು ಮನೋಭಾವದಿಂದ ಯಯಾತಿ ಮಾಧವಿಯನ್ನೇ ನೀಡುತ್ತಾನೆ. ಮುಂದೆ ಗಾಲವನೆಂಬ ಋಷಿಗೆ

---

* ನಿಯೋಗ: ಕೆಲಸ: ಉದ್ಯೋಗ, ೨, ಊಳಿಗ: ಸೇವೆ ೩. ಅನುಷ್ಠಾನ, ಆಚರಣೆ, ೪. ಅಧಿಕಾರಿಗಳ ಸಮಿತಿ–ಮಂಡಳಿ, ೫. ಸೇರುವುದು, ಕೂಡುವುದು ೬. ನೇಮಕ: ನೇಮಿಸುವುದು ೭. ಗಂಡನಲ್ಲದೆ ಬೇರೆಯವರಿಂದ (ಶಾಸ್ತ್ರಸಮ್ಮತವಾಗಿ) ಸಂತಾನವನ್ನು ಪಡೆಯುವಿಕೆ, ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಪು.ಸಂ. ೬೬೧

ತಮ್ಮಲ್ಲಿರುವಷ್ಟು ಕುದುರೆಗಳನ್ನು ದಾನ ಮಾಡಿ ಕಳುಹಿಸುತ್ತಾನೆ. ಮುಂದೆ ಕುದುರೆಗಳಿಗೆ ಸಮಕಟ್ಟುವಂತೆ ಹೆಣ್ಣನ್ನು ಹೀನಾಯವಾಗಿ ಬಳಸಿಕೊಳ್ಳುವಂಥ ಹರ್ಯಶ್ವ, ಉಶೀನ, ದೀವೋದಾಸ ರಾಜರು ಒಂದೊಂದು ವರ್ಷ ಮಾಧವಿಯನ್ನು ಅನುಭವಿಸಿ ಒಂದೊಂದು ಗಂಡುಮಗು ಪಡೆಯುತ್ತಾರೆ. ಮೂವರಿಂದಲೂ ೬೦೦ ಕುದುರೆಗಳು ದೊರೆಯುತ್ತವೆ. ಇನ್ನುಳಿದ ೨೦೦ ಕುದುರೆಗಳ ಗುರುದಕ್ಷಿಣೆಗೆ ಬದಲಿಗೆ ವಿಶ್ವಾಮಿತ್ರನು ಮಾಧವಿಯಿಂದ ಒಂದು ಗಂಡುಮಗು ಪಡೆಯುತ್ತಾನೆ. ಇವರೆಲ್ಲರೂ ಹೆಣ್ಣನ್ನು ಮನಬಂದಂತೆ ಬಳಸಿಕೊಳ್ಳುವ ಮೃಗಗಳಂತೆ ಕಾಣುತ್ತಾರೆ.

'ಮಾಧವಿ' ಮೇಲೆ ಕಾಮೋದ್ರಿಕ್ತರಾದವರಲ್ಲಿ ಮೊದಲು ಕಂಡುಬರುವ ಪುರುಷ ಗಾಲವ. ಕೊನೆಯಲ್ಲಿ ವಿಶ್ವಾಮಿತ್ರ ಇವರಿಬ್ಬರನ್ನು ಲೇಖಕಿ ಹುಲಿಗೆ ಹೋಲಿಸಿದ್ದಾರೆ. ಹಸಿದ ಹುಲಿ ಮುಂದೆ ಹುಲ್ಲೆಯಂತಿರುವ ಮಾಧವಿ ಗಾಲವನಿಂದ ತಪ್ಪಿಸಿಕೊಂಡರೂ ಮೂವರು ರಾಜಂದಿರು ಮತ್ತು ವಿಶ್ವಾಮಿತ್ರರಂತಹ ಅಮಾನುಷ ವ್ಯಕ್ತಿಗಳ ಬಂಧನಕ್ಕೆ ಸೆರೆಯಾಗುತ್ತಾಳೆ. ಗಾಲವ, ವಿಶ್ವಾಮಿತ್ರ ಕೇಳಿದ್ದ ೮೦೦ ಕುದುರೆಗಳನ್ನು ಸಂಪಾದಿಸಲು ಮಾಧವಿ ಜೊತೆ ಹರ್ಯಶ್ವನ ಬಳಿ ಬಂದಾಗ, ಮಾಧವಿಯನ್ನು ನೋಡಿ ಮೋಹಿತನಾಗಿ "ಕನ್ಯಾಶುಲ್ಕವೆಂದು ಎಷ್ಟು ಧನಕನಕ ಬೇಕು ಹೇಳಿ? ಕಡೆಗೆ ನನ್ನ ರಾಜ್ಯವನ್ನು ಸಹ ನಿಮಗೆ ಕೊಟ್ಟುಬಿಡುತ್ತೇನೆ"[೭೩] ಎಂದು ಹೆಣ್ಣಿಗೆ ಬೆಲೆ ಕಟ್ಟುತ್ತಾನೆ. ಹರ್ಯಶ್ವ, ದಿವೋದಾಸರ ಅರಮನೆಯಲ್ಲಿ ಒಂದೊಂದು ವರ್ಷಕಳೆದು ಮಾಧವಿ ಎರಡು ಮಕ್ಕಳ ತಾಯಿಯಾಗುತ್ತಾಳೆ. ಗಾಲವನಿಗೆ ಇಬ್ಬರು ರಾಜರುಗಳಿಂದ ದೊರೆತದ್ದು ೪೦೦ ಕುದುರೆ ಉಶೀನ ರಾಜನ ಬಳಿ ೨೦೦ ಕುದುರೆಗಳಿಗೆ ಮಾಧವಿಯನ್ನು ಅಡವಿಡುತ್ತಾನೆ. ಈಗಾಗಲೇ ಇಬ್ಬರು ರಾಜರ ಕ್ರೂರತನದ ಹೊಡೆತದಿಂದ ಬೇಸತ್ತಿದ್ದ ಮಾಧವಿ ಈತನು ತನ್ನನ್ನು ಭೋಗದ ವಸ್ತುವನ್ನಾಗಿ ಮಾಡಿಕೊಳ್ಳದಿರಲೆಂದು ಹಿಂದಿನ ಕಹಿಘಟನೆ ಅರುಹುತ್ತಾಳೆ. "ಗಾಲವ ಮುನಿಗಳು ನಿಮಗೆ ಹೇಳಿದಾರೋ ಇಲ್ಲವೊ ನಾನು ಇಬ್ಬರು ರಾಜನ ಬಳಿ ಇದ್ದು ಬಂದವಳು, ನನ್ನಿಂದ ನಿಮಗೆ ಸುಖ ಸಿಗೋದಿಲ್ಲ ನನ್ನನ್ನು ಬಿಟ್ಬಿಡಿ"[೭೪] ಎಂಬ ಮಾತಿಗೆ ಕಾಮುಕಿ ಉಶೀನ "ಹೆಂಗಸರು ಕಾಮಿಸಿದಷ್ಟೂ ಸುಂದರಿಯರಾಗ್ತಾರೆ. ಇಂದ್ರಲೋಕದ ರಂಭೆ–ಊರ್ವಶಿಯರ ವಿಷಯ ಕೇಳಿಲ್ವೆ? ಆ ಸೂಳೆಯರ ರೂಪ ಯಾರಿಗಿದೆ ಹೇಳು?"[೭೫] ಎಂದು ಸೂಳೆಗೆ ಹೋಲಿಸಿ ಮಾತನಾಡುತ್ತಾನೆ. ಹರ್ಯಶ್ವ ಬೆಲೆ ಕಟ್ಟಿದರೆ–ಉಶೀನ ಸೂಳೆಗೆ ಹೋಲಿಸುತ್ತಾನೆ. ಸೂಳೆಯನ್ನಾಗಿ ಮಾಡಿದವರು ಪುರುಷರು. ಅದರಲ್ಲಿ ತಾನೂ ಒಬ್ಬನು ಎಂಬುದನ್ನು ಮಾತ್ರ ಮರೆತಿರುತ್ತಾನೆ. ೬೦೦ 'ಕಪ್ಪುಕಿವಿಯ ಬಿಳಿಯಕುದುರೆ'ಗಳನ್ನು ಪಡೆದ ಗಾಲವ ವಿಶ್ವಾಮಿತ್ರನ ಬಳಿ ಬಂದಾಗ "ಎಂಟುನೂರು ಅಶ್ವಗಳಿಗೆ ಬದಲಾಗಿ ಈ ಮಾಧವಿಯನ್ನೇ ಸ್ವೀಕರಿಸಿ ಅಂತ ಹೇಳಿ ಇವಳನ್ನು ನನ್ನಲ್ಲಿ ತಂದು ಬಿಟ್ಟಿದ್ದರೆ ಎಷ್ಟು

ಚೆನ್ನಾಗಿತ್ತು! ನಾನೇ ಇವಳನ್ನು ಜೀವಮಾನಪರ್ಯಂತ ಭೋಗಿಸಿ ಜಗತ್ತಿಗೆ ಶ್ರೇಷ್ಠರಾದ ನಾಲ್ವರು ಪುತ್ರರನ್ನು ಪಡೀತಿದ್ದೆ, ಹೋಗಲಿ ಒಬ್ಬನೇ ಮಗನನ್ನು ಪಡೆದು ನಿನಗೆ ಒಪ್ಪಿಸ್ತೀನಿ"[೭೬] ಎನ್ನುವ ವಿಶ್ವಾಮಿತ್ರನ ಮಾತು ರಾಜರಲ್ಲೂ-ಋಷಿಗಳಲ್ಲೂ ಹೆಣ್ಣು ಎಂದರೆ ಭೋಗದ ವಸ್ತುವೆಂದೇ ಕಾಣುವುದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಅದನ್ನು ವಿಶ್ವಾಮಿತ್ರನ ಮಾತುಗಳಿಂದಲೇ ತಿಳಿಯಬಹುದು. "ಕಾಮವನ್ನು ಬೇಕಾದ ಹಾಗೆ ಸವಿದೋಳು ನೀನು. ಅದಕ್ಕೇ ನಿನಗೆ ಬಯಕೆಯಿಲ್ಲ ಆದರೆ ನನಗೆ ಇರೋ ಹಸಿವು ಹಲವು ವರ್ಷಗಳದ್ದು, ಅದನ್ನು ತಣಿಸದೇ ಹೋದ್ರೆ ನಾನು ಹುಚ್ಚನಾಗ್ತೀನಿ"[೭೭] ಎಂದು ನುಡಿಯುತ್ತಾನೆ. ಮಾಧವಿಯನ್ನು ಅಡವಿಡುವ ಗಾಲವನಿಂದ–ರಾಜರು–ವಿಶ್ವಾಮಿತ್ರನವರೆಗೂ ದಾನ–ದಕ್ಷಿಣೆ ನೆಪದಲ್ಲಿ ಒಂದು ಹೆಣ್ಣನ್ನು ನೋಡುವ ದೃಷ್ಟಿಕೋನ ಒಂದೇ ಆಗಿದೆ. ಇಲ್ಲಿ ಪುರುಷರ ಕ್ರೌರ್ಯತನ ಕಾಣುತ್ತದೆ.

ದೈಹಿಕವಾಗಿ ಹಿಂಸೆ ಅನುಭವಿಸಿದ ಮಾಧವಿ, ಮಾನಸಿಕವಾಗಿ ಜರ್ಜರಿತಳಾಗುತ್ತಾಳೆ. ತಮ್ಮ ತಮ್ಮ ಸುಖ–ಸಂತೋಷಕ್ಕಾಗಿ, ಗಂಡುಮಗುವಿನ ಅಭಿಲಾಷೆಗಾಗಿ ಮಾಧವಿಯನ್ನು ಬಳಸಿಕೊಳ್ಳುತ್ತಾರೆಯೇ ಹೊರತು ಅವಳ ಅಂತಃಸತ್ವಕ್ಕೆ ಬೆಲೆಯೇ ಇಲ್ಲ. ಆಸೆ ತೀರಿಸಿಕೊಳ್ಳುವುದು ನಮ್ಮ ಅಧಿಕಾರ ಮಗು ಹೆತ್ತುಕೊಡುವುದು ಅವಳ ಕರ್ತವ್ಯ ಎಂಬಂತೆಯೇ ಮಾಧವಿಯನ್ನು ಕಾಣುತ್ತಾರೆ. ಆಕೆಯ ತಾಯ್ತನಕ್ಕೂ ಬೆಲೆ ಇರುವುದಿಲ್ಲ. ಮಾಧವಿಯಿಂದ ಹರ್ಯಶ್ವ–ವಸುಮಂತನನನ್ನು, ದಿವೋದಾಸ–ಪ್ರತರ್ದನನ್ನು, ಉಶೀನ–ಶಿಬಿಯನ್ನು, ವಿಶ್ವಾಮಿತ್ರ–ಅಷ್ಟಕನನ್ನು ಪಡೆಯುತ್ತಾರೆ. ಮಾಧವಿ ನಾಲ್ಕು ಮಕ್ಕಳ ತಾಯಿಯಾಗುತ್ತಾಳೆ. ಒಂದೊಂದು ವರ್ಷವೂ ತನ್ನ ಮಗುವನ್ನು ಅಗಲಿ ಬರುವಾಗ ತಾಯ್ತನದ ಹಂಬಲ ಕಾಡುತ್ತಾದಾದರೂ ಪುರುಷ ವರ್ಗದ ಕ್ರೂರತನಕ್ಕೆ ಬಲಿಯಾಗಿದ್ದರಿಂದ ಮುಂದೆ ಈ ಗಂಡು ಮಕ್ಕಳೂ ಹೆಣ್ಣನ್ನು ಶೋಷಿಸುವವರೇ ಎಂಬ ನಿರ್ಧಾರದಿಂದ ಗಟ್ಟಿಗಳಾಗುತ್ತಾಳೆ. ಇಲ್ಲಿ ಮಕ್ಕಳ ಮೇಲೆ ಪ್ರೀತಿ ಇದ್ದರೂ ಅವರು ಗಂಡು ಎಂಬುದನ್ನು ಅವರಿಗಾಗಿ ಕಣ್ಣೀರು ಹಾಕುವುದು ವ್ಯರ್ಥ ಎಂದುಕೊಳ್ಳುವಲ್ಲಿ ಅಂದಿನ ಸಮಾಜದಲ್ಲಿನ ಪುರುಷರ ಅಟ್ಟಹಾಸ ಎಷ್ಟು ಕ್ರೂರವಾಗಿತ್ತು ಎಂಬುದನ್ನು ಒಳಗೊಂಡಿದೆ. ತಾಯಿಯ ಹೃದಯವೇ ನಿಷ್ಠುರ ಭಾವ ತಾಳಬೇಕಾದರೆ ಅವಳ ನೋವು ಎಷ್ಟು ಪ್ರಖರವಾಗಿತ್ತು ಎಂಬುದು ಕಂಡುಬರುತ್ತದೆ.

ಪುರುಷಪ್ರಧಾನ ವ್ಯವಸ್ಥೆಯಲ್ಲಿರುವ ಹೆಂಗಳೆಯರು ಹೆಣ್ತನವನ್ನೇ ಮರೆತು ಪುರುಷರ ಹಾದಿಯಲ್ಲೇ ಇನ್ನೊಂದು ಹೆಣ್ಣಿಗೆ ಹಿಂಸೆ ನೀಡುವುದು ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಉಶೀನ ರಾಜನ ಹೆಂಡತಿ ಮಹಿಮಾ ಸಾಧಾರಣ ರೂಪವತಿಯಾಗಿದ್ದವಳು. ಮಾಧವಿಯ ಸೌಂದರ್ಯ

ಕಂಡು "ರೂಪ ಇದ್ರೆ ಬಂತಾ ಪುಣ್ಯ? ಒಬ್ರಲ್ಲ ಇಬ್ರು ಮೂವರು ರಾಜರ ಜೊತೆ ಹ್ಯಾಗಾದ್ರೂ ಬಾಳುವೆ ಮಾಡ್ದೋದೋ ಏನೋ? ಥೂ ಹೇಸಿಗೆ!"[೭೮] ಎಂಬ ಮಾತು ಮಾಧವಿ ಸಾಯುವಂತಹ ನಿರ್ಧಾರ ಕೈಗೊಳ್ಳುವಂತೆ ಮಾಡುತ್ತದೆ. ಸಾವಿನಿಂದ ಪಾರಾದ ಮಾಧವಿ ಈ ಸಂದರ್ಭ ಬಿಟ್ಟರೆ ಇನ್ನೆಂದೂ ಸಾಯುವ ನಿರ್ಧಾರ ಮಾಡುವುದಿಲ್ಲ. ಬಹುಪತ್ನಿತ್ವ ಪದ್ಧತಿ ರೂಢಿಯಲ್ಲಿದ್ದರೂ ತನ್ನ ಗಂಡನ ಪ್ರೀತಿ ತನಗೇ ಸಿಗಬೇಕೆಂಬುದು ಇಲ್ಲಿನ ಸ್ತ್ರೀಯರ ಅಭಿಮತ ಅರಿವಾಗುತ್ತದೆ. ಇದರಲ್ಲಿ ಮಹಿಮಾ ಒಬ್ಬಳಾದರೆ ದಿವೋದಾಸನ ಹೆಂಡತಿ ತನ್ನ ಗಂಡನ ಕಾಮದಲ್ಲಿ ಪಾಲು ಕೇಳಲು ಬಂದಿರುವವಳು, ಪ್ರೀತಿ ಅಲ್ಲ ಎಂದು ಮಾಧವಿಯನ್ನು ಕುರಿತು ತನ್ನನ್ನು ತಾನು ಸಮಾಧಾನಿಸಿಕೊಳ್ಳುತ್ತಾಳೆ.

ಗುರು-ಶಿಷ್ಯನ ವಿದ್ಯಾದಾನ-ಗುರುದಕ್ಷಿಣೆಗಳ ನಡುವೆ ಒಂದು ಹೆಣ್ಣಿನ ಶೋಷಣೆ ಇವರಿಗೆ ತಪ್ಪೆನಿಸುವುದಿಲ್ಲ. ೮೦೦ ಕುದುರೆಗಳು ನೆಪಮಾತ್ರ. ಕುದುರೆಗಳ ಅಗತ್ಯವೇ ಇಲ್ಲದ ವಿಶ್ವಾಮಿತ್ರ ೬೦೦ ಕುದುರೆಗಳನ್ನು ಪಡೆದು ಬಿಟ್ಟುಬಿಡುತ್ತಾನಾದರೂ, ೨೦೦ ಕುದುರೆಗಳ ಬದಲಿಗೆ ಮಾಧವಿಯನ್ನು ಅನುಭವಿಸುತ್ತಾನೆ. ಒಮ್ಮೆ ಮಾಧವಿ ಪಡೆದ ಕುದುರೆಗಳನ್ನು ಏನು ಮಾಡಿರುವುದಾಗಿ ಕೇಳಿದಾಗ "ನಾನೇನೂ ಮಾಡಿಲ್ಲ ಅವು ಕಾಡುಮೇಡುಗಳಲ್ಲಿ ಅಲೀತಿರಬಹುದು. ಅದನ್ನು ನೋಡಿದರೆ ನೆರೆ ರಾಜ್ಯದ ರಾಜರು ಹೊಡಕೊಂಡು ಹೋಗ್ತಾರೆ, ಇಲ್ಲೇ ಉಳಿದುವನ್ನ ಇಲ್ಲಿಗೆ ಯಾರಾದರೂ ರಾಜರು ಬಂದಾಗ ಕೊಟ್ಟು ಬಿಡೋದು"[೭೯] ಎಂಬ ಉದಾಸೀನದ ಮಾತುಗಳನ್ನಾಡುತ್ತಾನೆ. ಆ ಕುದುರೆಗಳಿಗಾಗಿ ಮಾಧವಿ ಪಟ್ಟ ಕಷ್ಟ ಇವರಿಗೆ ಲೆಕ್ಕಕಿಲ್ಲ. ಗಾಲವ ಋಣಮುಕ್ತನಾದರೆ, ಮಾಧವಿ ಇಲ್ಲಿನ ಅರಮನೆ-ಗುರುಮನೆಗಳಿಂದ ರೋಸಿ ಹೋಗಿರುತ್ತಾಳೆ.

ಗುರುದಕ್ಷಿಣೆಯಲ್ಲಿ ವ್ಯಂಗ್ಯತೆಯಿಂದ ಪ್ರಾರಂಭವಾಗುವ ಕಾದಂಬರಿ ಹೆಣ್ಣಿನ ಘೋರ ಬದುಕಿನ ಚಿತ್ರಣಗಳನ್ನು ಬಿಚ್ಚಿಡುತ್ತದೆ. ಮಾಧವಿಯನ್ನು ಒಂದು ವಸ್ತುವಿನ ರೂಪದಲ್ಲಿ ಬಳಸಿಕೊಳ್ಳುವ ಪುರುಷಷಾಹಿ ಸಮಾಜದಲ್ಲಿ ಹೆಣ್ಣಿನ ಕಣ್ಣೀರಿಗೆ ಯಾವ ಮಾನ್ಯತೆಯೂ ಇರಲಿಲ್ಲವೆಂಬುದು ಕಂಡುಬರುತ್ತದೆ. "ಹೆಂಗಸಿನ ಕರ್ತವ್ಯವೆಂದರೆ ಮಗುವಿಗೆ ಜನ್ಮಕೊಡುವುದು ಮಾತ್ರ. ಅದು ಯಾರಿಂದ? ಯಾವ ರೀತಿಯಲ್ಲಿ? ಎಂದು ಆಕೆ ಪ್ರಶ್ನಿಸುವ ಹಾಗಿರಲಿಲ್ಲ. ಗಂಡಸಿಗೆ ತಮ್ಮ ತ್ಯಾಗ ವಿಧೇಯತೆಗಳಿಂದ ಶರಣಾಗುವವರು ಮಾತ್ರ 'ಆದರ್ಶ' ಮಹಿಳೆಯರು ಎನ್ನಿಸಿಕೊಳ್ಳುತ್ತಿದ್ದರು". [೮೦] ಈ ಮೂಲಕ ಹೆಣ್ಣಿಗೆ ಇದ್ದ ಬಂಧನವನ್ನು ತಿಳಿಯಬಹುದು. ಆದರೆ ಮಾಧವಿ ಇಲ್ಲಿ ಪುರುಷ ಸೃಷ್ಟಿಯ ಆದರ್ಶದ ಹೆಣ್ಣಾಗಲು ಬಯಸಿದವಳಲ್ಲ. ದಾನದ ವಸ್ತುವಾಗಿ ಧರ್ಮ ಬಂಧನಕ್ಕೆ ಸಿಲುಕಿದ್ದರಿಂದ ಪುರುಷರ ಕ್ರೌರ್ಯಕ್ಕೆ ಮೌನಿಯಾಗುತ್ತಾಳೆ. ಸ್ವಾತಂತ್ರ್ಯ ಸಿಕ್ಕಾಗ

ಅರಮನೆ, ಸಂಬಂಧ ಎಲ್ಲವನ್ನು ತೊರೆದು ಏಕಾಂಗಿಯಾಗಿ ಕಾಡಿಗೆ ಹೊರಟು ಹೋಗುತ್ತಾಳೆ. ಮಾಧವಿ ಕಾಮುಕಿಗಳ ಒಳಗೆ ಸಿಲುಕಿ ಬದುಕುವುದನ್ನು ನಿರಾಕರಿಸಿ ಕಾಡಿಗೆ ಹೊರಡುವಲ್ಲಿಗೆ ಕಾದಂಬರಿ ಅಂತ್ಯಗೊಳ್ಳುತ್ತದೆ.

ಈ ಕಾದಂಬರಿ ವೀಣಾಶಾಂತೇಶ್ವರವರ 'ಗಂಡಸರು' ಕಾದಂಬರಿಯನ್ನು ನೆನಪಿಸುತ್ತದೆ. ಅದರಲ್ಲಿ ಶಾಂತಿ ನಾಲ್ಕು ಜನ ಪುರುಷರ ಪ್ರೀತಿಗೆ ಮೋಸ ಹೋದರೆ, ಮಾಧವಿ ನಾಲ್ವರು ಪುರುಷರ ಭೋಗದ ವಸ್ತುವಾಗುತ್ತಾಳೆ. ಆಧುನಿಕ-ಪುರಾತನ ಎನ್ನುವುದಕ್ಕಿಂತಲೂ ಹೆಣ್ಣು ಎಲ್ಲಾ ಕಾಲದಲ್ಲೂ ಪುರುಷನ ಇಚ್ಛಾಪೂರಕವಾಗಿ ನಡೆದುಕೊಳ್ಳುವುದನ್ನು ಹೇಳುತ್ತದೆ. ಅದನ್ನು ಒಡೆದುಹಾಕುವ ಸೂಚ್ಯವನ್ನು ಈ ಎರಡೂ ಕಾದಂಬರಿಗಳಲ್ಲೂ ಬಿಂಬಿತವಾಗಿವೆ.

## ಕುಂತಿ

'ಕುಂತಿ' ಕಾದಂಬರಿಯು ಮಹಾಭಾರತದಲ್ಲಿ ಬರುವ ಪಾಂಡುವಿನ ಹೆಂಡತಿಯಾದ 'ಕುಂತಿ'ಯ ಕಥೆಯಾಗಿದೆ. ಮಹಾಭಾರತದ ಹೆಂಗಳೆಯರೆಲ್ಲರೂ ಶೋಷಣೆಗೊಳಪಟ್ಟವರೆ. ಅದರಿಂದ ಕುಂತಿಯು ಹೊರತಾಗಿರಲಿಲ್ಲ ಎಂಬುದು ಈ ಕಾದಂಬರಿಯಿಂದ ತಿಳಿದುಬರುತ್ತದೆ. ಮಹಾಭಾರತದಲ್ಲಿ ಹಲವು ಪಾತ್ರಗಳೊಡನೆ ಮಿಂಚಿ ಮಾಯವಾಗುವ ಕುಂತಿ ಈ ಕಾದಂಬರಿಯಲ್ಲಿ ನಾಯಕಿಯಾಗಿ, ಎಲ್ಲರ ಜೀವ ಸೆಲೆಯಾಗಿದ್ದಾಳೆ. ಮಹಾಭಾರತದ ಒಂದೊಂದು ಸ್ತ್ರೀಪಾತ್ರಗಳು ಒಂದೊಂದು ಕಥಾಭಾಗವಾಗುತ್ತಾರೆ ಎಂಬುದಕ್ಕೆ ಈ ಕಾದಂಬರಿ ಸಾಕ್ಷಿಯಾಗಿದೆ.

ಈ ಕಾದಂಬರಿಯು ಮಹಾಭಾರತದ ಮೂಲಕಥೆಯನ್ನು ಒಳಗೊಂಡಿದ್ದು, ಕೆಲವೊಂದು ಸಣ್ಣಪುಟ್ಟ ಬದಲಾವಣೆಗಳು ಕಂಡುಬರುತ್ತವೆ. ಕುಂತಿ ಜನನದಿಂದ ಪ್ರಾರಂಭವಾಗಿ ಕುಂತಿ ವಿವಾಹ, ವಾರಣಾವತ ಅರಮನೆ ಪ್ರಸಂಗ, ದ್ರೌಪದಿ ಸ್ವಯಂವರ, ಇಂದ್ರಪ್ರಸ್ಥದಲ್ಲಿ ವಾಸ್ತವ್ಯ, ಪಗಡೆಯಾಟ, ಮಹಾಭಾರತದ ಯುದ್ಧ, ಕೌರವರ ಸರ್ವನಾಶ, ಪಾಂಡವರ ಭ್ರಾತೃಹತ್ಯೆ ಕೊನೆಯಲ್ಲಿ ಕುಂತಿಯು ಧೃತರಾಷ್ಟ್ರ, ಗಾಂಧಾರಿ ಮತ್ತು ವಿದುರ ಈ ಮೂವರೊಂದಿಗೆ ಸಾಯುವಲ್ಲಿ ಕಾದಂಬರಿ ಅಂತ್ಯಗೊಳ್ಳುತ್ತದೆ. ಈ ಕಥೆಯ ಹಿನ್ನೆಲೆಯಲ್ಲಿ ಕುಂತಿಯ ನೋವು, ಹತಾಶೆ ಬಿತ್ತರಗೊಂಡಿದೆ. ಕಥೆಯಲ್ಲಿ ಬದಲಾವಣೆ ಇಲ್ಲದಿದ್ದರೂ ಮೂಲಮಹಾಭಾರತದಲ್ಲಿಲ್ಲದ ಹೊಸ ವಿಚಾರಗಳನ್ನು ತಂದಿರುವುದನ್ನು ಕಾಣಬಹುದು. ಎಲ್.ಎಸ್.ಶೇಷಗಿರಿರಾವ್ ಮುನ್ನುಡಿಯಲ್ಲಿ ಹೇಳಿರುವಂತೆ ಪಾತ್ರಗಳು, ಕಾದಂಬರಿಕಾರರು ಆಡಿಸಿದಂತೆ ಆಡುತ್ತವೆ, ನಡೆಸಿದಂತೆ ನುಡಿಯುತ್ತವೆ. ಎಂಬ ಮಾತು ಪ್ರಭಾವತಿಯವರ ಕಾದಂಬರಿಗೆ ಹೊಂದುತ್ತದೆ. ಇವರ ವಿಷಯವಸ್ತು

ಗೊಂದಲಕ್ಕೀಡುಮಾಡದೆ ನಂಬಲರ್ಹವಾದಂತೆ ವಾಸ್ತವಕ್ಕೆ ಹತ್ತಿರವಾಗಿ ರೂಪಿತವಾಗಿದೆ. ಕರ್ಣ, ದುರ್ವಾಸರ ಮಂತ್ರಗಳಿಂದ ಹುಟ್ಟಿದವನಲ್ಲ, ಕರ್ಣನನ್ನು ಗಂಗೆಯಲ್ಲಿ ತೇಲಿಬಿಡಲಿಲ್ಲ, ಕರ್ಣನಿಗೆ ಹಸಿರು ಹಚ್ಚೆ ಹಾಕಿಸಿದ್ದರಿಂದ ಕುಂತಿಗೆ ಮಗನೆಂದು ತಿಳಿಯಿತು. ಕುಂತಿ, ಮಾದ್ರಿಯಲ್ಲಿ ಹುಟ್ಟಿದ ಮಕ್ಕಳು ಮಂತ್ರದಿಂದ ಹುಟ್ಟಿದವರಲ್ಲ ನಿಯೋಗದಿಂದ ಹುಟ್ಟಿದವರು. ಹೀಗೆ ಕಾದಂಬರಿಯುದ್ದಕ್ಕೂ ನೈಜತೆ ಕಾಣುತ್ತದೆ,

ಅಂದಿನ ವ್ಯವಸ್ಥೆಯಲ್ಲಿ ಒಗ್ಗಿಹೋಗಿದ್ದ ನಿಯೋಗ ಪದ್ಧತಿಯಿಂದ ಮಕ್ಕಳನ್ನು ಪಡೆಯುವುದು ಒಂದು ಭಾಗವಾದರೆ, ಅದೇ ನಿಯೋಗ ವಿವಾಹಪೂರ್ವದಲ್ಲಿ ಆದರೆ ತಾಯಿಯಾದವಳು ಅನುಭವಿಸುವ ಯಾತನೆ ಮುಖ್ಯ ಕಥಾವಸ್ತುವಾಗಿದೆ. ಭೋಗದ ವಸ್ತುವಾಗಿ ಹೆಣ್ಣನ್ನು ಕಾಣುವ ಪರಿ, ಮಕ್ಕಳನ್ನು ಹೆರುವುದೆ ಅವಳ ಕರ್ತವ್ಯವೆಂಬಂತೆ ಕಾಣುವ ಪುರುಷಪ್ರಧಾನ ಸಮಾಜವನ್ನು, ಕುಂತಿಯ ತಾಯ್ತನವನ್ನು ಕಾದಂಬರಿಯುದ್ದಕ್ಕೂ ಚಿತ್ರಿಸಲಾಗಿದೆ.

ಸಮಾಜದಲ್ಲಿ ವಿವಾಹವೆಂಬುದು ಹೇಗೆ ನೆಲ ನಿಂತಿದೆ ಎಂಬುದಕ್ಕೆ ಈ ಕಾದಂಬರಿ ಸಾಕ್ಷಿಯಾಗಿದೆ. ಗಂಡು-ಹೆಣ್ಣು ಭೂಮಿ ಮೇಲೆ ಬದುಕುವ ಜೀವಿಗಳು ಎಂದಾದ ಮೇಲೆ ಗಂಡಿಗೆ ಅನ್ವಯಿಸುವ ನಿಯಮಗಳು ಹೆಣ್ಣಿಗೂ, ಹೆಣ್ಣಿಗೆ ಅನ್ವಯಿಸುವ ನಿಯಮಗಳು ಗಂಡಿಗೂ ಹೊಂದಿಕೆಯಾಗಬೇಕು. ಸಮಾಜದಲ್ಲಿ ಅಧಿಕಾರ ಅಂತಸ್ತು ಇರುವವರಿಗೆ ಕೊಡುವ ಗೌರವಗಳು, ಬಡಬಗ್ಗರಿಗೆ ಇಲ್ಲವೆಂಬಂತೆ ಹೆಣ್ಣನ್ನು ನಡೆಸಿಕೊಳ್ಳುತ್ತಿದೆ. ಸ್ತ್ರೀ-ಪುರುಷರಿಬ್ಬರೂ ವಿವಾಹದ ನಂತರ ಸಂಸಾರಸ್ಥರಾಗುವುದು ಸಾಂಸ್ಕೃತಿಕವಾಗಿ ನಡೆದುಕೊಂಡು ಬಂದಿದೆ. ಇಂದು ಈ ನಿಯಮಗಳನ್ನು ಉಲ್ಲಂಘಿಸಿ ಒಂದು ಹೆಜ್ಜೆ ಮುಂದೆ ಎಂಬಂತೆ ಸಮಾಜದ ನಿಯಮಗಳಿಗೆ (ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ) ವಿರುದ್ಧವಾಗಿ ಇಬ್ಬರೂ ನಡೆಯುತ್ತಿದ್ದಾರೆ. ಅಂತಹವರಿಗೆ ಅಪವಾದಗಳು ಬೀಳುತ್ತಿವೆಯಾದರೂ ಅದು ಹೆಣ್ಣಿಗೆ ಮಾತ್ರ ಸೀಮಿತವಾಗಿಬಿಟ್ಟಿದೆ. ಪುರುಷ ಈ ವಿಷಯದಲ್ಲಿ ನಿರ್ದೋಷಿಯಾಗಿದ್ದಾನೆ. ಸ್ತ್ರೀ ಸಹಚರ್ಯ ಬಯಸುವುದು ಪುರುಷನೇ ಆಗಿದ್ದರೂ ಕಳಂಕಕ್ಕೆ ಹೆಣ್ಣು ಗುರಿಯಾಗುತ್ತಾಳೆ. ಪುರುಷ ವಿವಾಹಪೂರ್ವದಲ್ಲಿ ಲೆಕ್ಕವಿಲ್ಲದಷ್ಟು ಸ್ತ್ರೀಯರೊಂದಿಗೆ ಲೈಂಗಿಕ ಆಸಕ್ತಿ ಹೊಂದಿದ್ದರೆ ಅಲ್ಲಿಯೂ ಅಪವಾದ ಹೆಣ್ಣಿಗೆ. ಕಾರಣವಿಷ್ಟೆ ಆತನಿಂದ ಗರ್ಭ ಧರಿಸುವ ಬಹುದೊಡ್ಡ ಜವಾಬ್ದಾರಿ ಶಿಕ್ಷೆಯಾಗಿ ರೂಪಾಂತರವಾಗುತ್ತದೆ. ಅದಕ್ಕೆ 'ಕುಂತಿ' ಕಾದಂಬರಿಯ ಪಾಂಡು ಮಹಾರಾಜ ಸಾಕ್ಷಿಯಾಗಿದ್ದಾನೆ. ಮದುವೆಗೂ ಮುಂಚೆ ಸಾಕಷ್ಟು ಹೆಂಗಳೆಯರ ಸಹವಾಸ ಮಾಡಿ ಪುರುಷತ್ವವನ್ನೇ ಕಳೆದುಕೊಂಡಿರುತ್ತಾನೆ. ಆದರೂ ಪಾಂಡು ಈ ದೋಷವನ್ನು ಹೇಳಿಕೊಳ್ಳುವುದಿಲ್ಲ. ಹೆಣ್ಣು ಅತ್ಯಾಚಾರದಿಂದಲೋ,

ಸ್ವಬಯಕೆಯಿಂದಲೋ ಪುರುಷರ ಕೃತ್ಯಕ್ಕೆ ಒಳಗಾದರೆ ಸಮಾಜದ ಅಮಾನವೀಯ ನಿಂದನೆಗೆ ಗುರಿಯಾಗುತ್ತಾಳೆ. ಕುಂತಿಯದು ಅದೇ ಸ್ಥಿತಿಯಾಗಿದೆ.

ಹದಿಮೂರರ ಹರೆಯದ ತುಂಬು ಪ್ರಾಯದ ಕುಂತಿ ಅರಮನೆಗೆ ಬಂದ ದುರ್ವಾಸರ ಸೇವೆಗೆ ನಿಲ್ಲುತ್ತಾಳೆ. ಅರಿಷಡ್ವರ್ಗಗಳನ್ನು (ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ) ನಿಗ್ರಹಿಸಿಕೊಂಡ ದುರ್ವಾಸರು ಕುಂತಿಯ ಮೇಲೆ, ಕುಂತಿಯೂ ದುರ್ವಾಸರ ಮೇಲೆ ಮೋಹಗೊಳ್ಳುತ್ತಾರೆ. ಇವರಿಬ್ಬರ ಸಂಗಮದ ಪ್ರತಿಫಲವಾಗಿ ಕರ್ಣ ಹುಟ್ಟುತ್ತಾನೆ. ಕುಂತಿ ಅವಿವಾಹಿತೆಯಾದ್ದರಿಂದ ಬೆಸ್ತನ ಮನೆಯಲ್ಲಿ ಇರುವಂತಾಯಿತು. ಬೆಸ್ತನ ಹೆಂಡತಿ ರಾಧೇ ಕುಂತಿಯೊಂದಿಗೆ ಮಾತು ಹರಟುವಾಗ ಮಗು ಹುಟ್ಟಿದ ಮೇಲೆ ಅದರ ಎದೆ ಮೇಲೆ ಹಸಿರು ಹಚ್ಚೆ ಹಾಕಿಸಿರುವುದಾಗಿ ಹೇಳುತ್ತಾಳೆ. ಇದು ಕುಂತಿ ಮಗನನ್ನು ಗುರುತಿಸಲು ರಾಧೆ ಮಾಡಿದ ಉಪಾಯ. ಈ ಉಪಾಯದಿಂದಲೇ ಕುಂತಿ ತುಂಬಿದ ಸಭೆಯಲ್ಲಿ ಕರ್ಣ ತನ್ನ ಶೌರ್ಯ ಪ್ರದರ್ಶಿಸುವಾಗ ಹಸಿರು ಮಚ್ಚೆ ಕಂಡು ಮಗನೆಂದು ಗುರುತಿಸುತ್ತಾಳೆ. ಕುಂತಿಯು ಮಗುವಿಗೆ (ಕರ್ಣನಿಗೆ) ಜನ್ಮ ನೀಡಿದ ನಂತರ ರಾಧೆಗೆ 'ಈ ಮಗುವಿನ ತಂದೆ ಸೂರ್ಯದೇವ ಎಂದು ಸೂರ್ಯನಲ್ಲಿ ಕೈತೋರಿಸುತ್ತಾಳೆ' ಕಾಲಕಳೆದಂತೆ 'ಬೆಸ್ತನ ದಂಪತಿಗಳಿಗೆ ಯಾವುದೋ ಮಗು ನದಿಯಲ್ಲಿ ಸಿಕ್ಕಿದೆ ಎಂತಲೂ, ಈ ದಂಪತಿಗಳು ಹಸ್ತಿನಾವತಿ ಕಡೆ ಹೊರಟು ಹೋದರು' ಎಂತಲೂ ಸುದ್ಧಿ ಗಾಳಿಯಲ್ಲಿ ಹರಡುವಂತೆ ಬಾಯಿಂದ ಬಾಯಿಗೆ ತಲುಪಿ ಕುಂತಿಯ ಕಿವಿಗೂ ಬೀಳುತ್ತದೆ. ಸ್ವಯಂವರದಲ್ಲಿ ಪಾಂಡು ಹಸ್ತಿನಾವತಿ ರಾಜನಾದ ಕಾರಣದಿಂದ ಕುಂತಿ ಆತನನ್ನು ಮದುವೆಯಾಗುತ್ತಾಳೆ.

ಮಕ್ಕಳನ್ನು ಪಡೆಯುವುದು ಕಾದಂಬರಿಯ ಮುಖ್ಯ ಭಾಗವಾಗಿ ತೋರುತ್ತದೆ. ಕುಂತಿ ವಿವಾಹದ ನಂತರ ಒಬ್ಬ ಮಗನಿದ್ದರು, ಮಕ್ಕಳಿಲ್ಲದ ನೋವಿಗೆ ತುತ್ತಾಗಿ ಮಕ್ಕಳಿಗಾಗಿ ಪರಿತಪಿಸುತ್ತಾಳೆ. ಈ ನಡುವೆ ಪಾಂಡು ನಿರ್ವೀಯನಾಗಿದ್ದು, ಹೆಂಡತಿಯ ಬೇಡಿಕೆಯನ್ನು ಈಡೇರಿಸದಿದ್ದರೂ ಮಾದ್ರಿಯನ್ನು ಮದುವೆಯಾಗಿ ಕರೆತರುವುದು ಪಾಂಡುವಿನ ಅಹಮ್ಮಿಕೆಯನ್ನು ತೋರಿಸುತ್ತದೆ. ಹೆಂಡತಿಯಾದವಳು ದೈಹಿಕ ಸುಖ ನೀಡುತ್ತಿಲ್ಲವೆಂದು ಎರಡನೇ ಮದುವೆಗೆ ಸಜ್ಜಾಗುವ ಪುರುಷರು, ತಮ್ಮಿಂದಲೇ ಹೆಣ್ಣಿಗೆ ಅನ್ಯಾವಾಗುತ್ತಿದ್ದರು, ಹೆಣ್ಣಿನ ಮೇಲೆ ಹೆಣ್ಣನ್ನು ಮದುವೆಯಾಗಿ ಆ ಹೆಂಗಳೆಯರನ್ನು ಶಿಕ್ಷಿಸುವುದು ಪುರುಷಪ್ರಧಾನ ಸಮಾಜದ ದಬ್ಬಾಳಿಕೆಯನ್ನು ತಿಳಿಸುತ್ತದೆ. "ಒಡತೀ ನೀನು ಈ ಅಸಹನೆಯನ್ನು ಮೆಟ್ಟಿ ನಿಲ್ಲಬೇಕು. ಅಂದೇ ನಿನಗೆ ಈ ಅರಮನೆಯಲ್ಲಿ ಸ್ಥಾನ. ಸತ್ಯವತಿಯನ್ನು ನೋಡು, ನಿನ್ನ ಅತ್ತೆಯರನ್ನು ನೋಡು"[೮೧] ಎಂದು

ಹೇಳುವ ದಾಸಿ ಮಾತಿನಲ್ಲಿ ಹೆಣ್ಣಾದವಳು ಸಹಿಸಿಕೊಳ್ಳಬೇಕು ಎಂಬುದನ್ನು ಹೇಳುತ್ತದೆ. ಸ್ತ್ರೀ ಹೀಗೆ ಸಹಿಸುತ್ತಿರುವುದರಿಂದಲೇ ಪುರುಷನಿಗೆ ತಪ್ಪಿನ ಅರಿವಾಗದೆ ಸ್ವೇಚ್ಛಾಚಾರದಿಂದ ಬದುಕುತ್ತಿದ್ದಾನೆ ಎಂದೆನಿಸುತ್ತದೆ. ಆನಂತರ ಪಾಂಡು ಮಕ್ಕಳಿಗಾಗಿ ಋಷಿಗಳು, ಹೆಂಡತಿಯರಿಂದ ಒಪ್ಪಂದ ಪಡೆದು ನಿಯೋಗ ಏರ್ಪಡಿಸುತ್ತಾನೆ. ಕುಂತಿ, ಮಾದ್ರಿ ಋಷಿಗಳಿಂದ ಮಕ್ಕಳಿಗೆ ಜನ್ಮ ನೀಡುತ್ತಾರೆ.

ಪಾಂಡು ಮಕ್ಕಳಿಗಾಗಿ ಪರಿತಪಿಸುವಾಗ ಕುಂತಿ ಮಗನಿದ್ದು ಹೇಳಿಕೊಳ್ಳಲಾಗದಂತಹ ಪರಿಸ್ಥಿತಿಯ ಕೈಗೊಂಬೆಯಾಗುತ್ತಾಳೆ. ಆನಂತರ ಪಾಂಡು–ಮಾದ್ರಿ ಮರಣ, ಇತ್ತ ಕುಂತಿ ಮಕ್ಕಳ ಲಾಲನೆ–ಪಾಲನೆ–ಪೋಷಣೆಯಲ್ಲಿ ತೊಡಗುತ್ತಾಳೆ. ಕೌರವರ ಕುತಂತ್ರದಿಂದ ವಾರಣಾವತ ಅರಮನೆಯ ಸಾವಿನಿಂದ ಪಾಂಡವರು ಪಾರಾಗುವುದು, ದ್ರೌಪದಿ ಸ್ವಯಂವರದಲ್ಲಿ ಅರ್ಜುನ ಗೆಲ್ಲುವುದು ದ್ರೌಪದಿಯನ್ನು ಐವರು ವರಿಸುವುದು, ಪಗಡೆಯಾಟ, ಪಾಂಡವರಿಗೆ ವನವಾಸ, ಅಜ್ಞಾತವಾಸ ಇವೆಲ್ಲವೂ ಮೂಲ ಮಹಾಭಾರತದಂತೆ ಮೂಡಿಬಂದಿವೆ. ಈ ಎಲ್ಲಾ ಸಂದರ್ಭಗಳಲ್ಲೂ ಕುಂತಿ ಮಕ್ಕಳ ಸುಖ–ಸಂತೋಷಕ್ಕಾಗಿ ಜೀವನವನ್ನೇ ಮುಡಿಪಾಗಿಸಿದ್ದಾಳೆ. ಉತ್ತಮ ಉದಾಹರಣೆ ಎಂದರೆ 'ದ್ರೌಪದಿ ಸ್ವಯಂವರ'ದಲ್ಲಿ ಪಾಂಡವರು ಭಾಗವಹಿಸಿ ದ್ರೌಪದಿಯನ್ನು ಗೆದ್ದು ಬಂದು 'ಹಣ್ಣು ತಂದಿದ್ದೇವೆ' ಎಂಬ ಮಾತಿಗೆ ಕುಂತಿ ಎಲ್ಲರೂ ಹಂಚಿಕೊಳ್ಳಿ ಎಂದು ಹೇಳಿ ಐವರ ಒಗ್ಗಟ್ಟಿಗಾಗಿ ದ್ರುಪದನನ್ನು ಮದುವೆಗೆ ಒಪ್ಪಿಸುವ ಜವಾಬ್ದಾರಿ ವಹಿಸಿಕೊಳ್ಳುತ್ತಾಳೆ. ಅದರಲ್ಲಿ ಯಶಸ್ಸು ಕಾಣುತ್ತಾಳೆ. ಕುಂತಿ ಒಂದು ಹೆಣ್ಣಾಗಿ, ಹೆಣ್ಣಿನ ಜೀವನದಲ್ಲಿ ಒಬ್ಬನನ್ನು ಮದುವೆಯಾಗಿ ಅನುಭವಿಸುತ್ತಿರುವ ನೋವು, ಸಂಕಟದ ಅರಿವಿದ್ದೂ ಮಕ್ಕಳ ಸುಖಕ್ಕಾಗಿ ದ್ರೌಪದಿಯನ್ನು ಮದುವೆ ಮಾಡಿಸುವಲ್ಲಿ ದುಃಖ, ನೋವು, ಸಂಕಟ ಬಂದರೂ ಮಕ್ಕಳ ಹಿತ ಕಾಯುತ್ತಾಳೆ.

ಪಾಂಡವರು ವನವಾಸ ಹೊರಟಾಗ ಕುಂತಿ ವಿದುರನ ಮನೆಯಲ್ಲಿದ್ದುಕೊಂಡು ವಿದುರನಿಂದ ಮಕ್ಕಳ ಕುರಿತು ಮಾಹಿತಿ ತಿಳಿದುಕೊಳ್ಳುವ ಕಾತರ, ಅದರ ನೋವನ್ನು ಸಹಿಸಿಕೊಳ್ಳಲು ಗಂಗಾನದಿ ತೀರದ ಕಡೆ ಬಂದು ಹದಿಮೂರು ವರ್ಷ ಕಾಲ ಕಳೆಯುತ್ತಾ ಬದುಕುತ್ತಾಳೆ. ಕಾದಂಬರಿಯ ಕೊನೆಯಲ್ಲಿ ಅಶ್ವತ್ಥಾಮನಿಂದ ಆಪತ್ತು ಎದುರಾಗುವ ಸಂದರ್ಭ ಅರಿತು ಕೃಷ್ಣ ಸಹಿತ ಪಾಂಡವರೈವರು ಬಿಡಾರದಿಂದ ಹೊರ ನಡೆಯುತ್ತಾರೆ. ಆ ಸಂದರ್ಭದಲ್ಲಿ ಕುಂತಿ "ಮಮ ಪ್ರಾಣಾಹಿ ಪಾಂಡವಾಃ ಅಂತೆ. ಆ ಪಾಂಡವರಿಗೆ ಪ್ರಾಣಕೊಟ್ಟವಳು, ಜನ್ಮಕೊಟ್ಟವಳು ನಾನಲ್ಲವೇನೋ! ದ್ರೌಪದೀ, ನಾನಿರುವೆ ಭಯ ಪಡಬೇಡ, ನಿನ್ನ ಮಕ್ಕಳೈವರೂ ಇಂದು ಈ ಶಿಬಿರದಲ್ಲಿ ಮಲಗಲಿ ನಾನೇ ಬಾಗಿಲಲ್ಲಿ ಮಲಗುವೆ ಅದಾವ ಅಶ್ವತ್ಥಾಮ

ಬರುತ್ತಾನೋ ನಾನು ನೋಡುವೆ" [೮೨] ಎಂದು ಹೇಳುವಲ್ಲಿ ಜೀವನಪರ್ಯಂತ ತನ್ನವರಿಗಾಗಿ ದುಡಿದವಳ ತಾಯ್ತನದ ಮಹತ್ವ ಕಂಡುಬರುತ್ತದೆ.

ಕುಂತಿ ಸಮಾಜದಲ್ಲಿ ಅಧಿಕೃತವಾಗಿ ಪಾಂಡುವಿನ ರಾಣಿಯಾದ ಮೇಲೆ ಹುಟ್ಟಿದ ಮಕ್ಕಳಿಗಾಗಿ ತೋರುವ ತಾಯ್ತನ ಒಂದು ತೆರನಾದರೆ ಕರ್ಣನಿಗಾಗಿ ತೋರುವ ತಾಯ್ತನ ಆತಂಕದ, ಭಯದ, ಸಂಶಯವಾಗಿ ಬಿಂಬಿತವಾಗಿದೆ. ಕರ್ಣ ಸ್ವಂತ ಮಗನೆಂದು ತಿಳಿದಕೂಡಲೇ ಕುಂತಿ "ಹೇಳಿಬಿಡಲೇ ಹೇಳಿಬಿಡಲೇ ಅವನು ನಿಮ್ಮ ಹಿರಿಯ ಅಣ್ಣನಪ್ಪಾ, ಅವನನ್ನು ಹಾಗೆ ಅಣಕಿಸಬೇಡಿ ಎಂದು ಹೇಳಿಬಿಡಲೇ ಎಂದು ಹೃದಯ ಹಾತೊರೆಯಿತು. ಈಗ ಪಾಂಡುವೂ ಇಲ್ಲ, ಮದುವೆಗೆ ಮೊದಲೇ ಕುಂತಿಗೆ ಮಗುವಾಗಿತ್ತೇ ಎಂದು ಹಾರಾಡಲು, ಆದರೂ... ಆದರೂ.... ಸತ್ಯವತಿ, ಧೃತರಾಷ್ಟ್ರ, ಗಾಂಧಾರಿ, ಭೀಷ್ಮ.... ಅವರೆದುರು ತಾನು ಕಟ್ಟಿಕೊಂಡ ಸಭ್ಯತೆಯ ಈ ವೇಷ.... ಅಯ್ಯೋ ಎಷ್ಟು ಕಾಲ ಹಂಬಲಿಸಿ ಹಂಬಲಿಸಿ ಈಗ ಮಗ ಕಣ್ಣೆದುರು ಬಂದಿದ್ದಾರೆ. ಆದರೆ ಅವನನ್ನು ಮಗ ಎನ್ನುವಂತಿಲ್ಲ, ಕಣ್ಣು ತುಂಬಾ ನೋಡುವಂತಿಲ್ಲ, ಕೈತುಂಬಾ ತಬ್ಬುವಂತಿಲ್ಲ, ಕೈಯಾರೆ ಉಣಿಸುವಂತಿಲ್ಲ ದೇವರೇ ಇದೆಂತಹ ಶಿಕ್ಷೆ..... ಸಾಲದುದಕ್ಕೆ ತಮಗೆ ಶತ್ರುವಿನಂತೆ ಆಡುತ್ತಿರುವ ಆ ದುರ್ಯೋಧನನಿಗೆ ಇವನು ಆಪ್ತನಾಗಿ ಆ ಅರಮನೆಯಲ್ಲಿ ಬೆಳೆದರೆ ಮುಂದೊಂದು ಕಾಲಕ್ಕೆ ರಾಜ್ಯಕ್ಕಾಗಿ ಹೋರಾಡಲು ಈಗಿನಿಂದಲೇ ಸಿದ್ಧವಾಗುತ್ತಿರುವ ನನ್ನ ಈ ಮಕ್ಕಳಿಗೂ ದುರ್ಯೋಧನನ ಸಖ್ಯ ಬೆಳೆಸಿರುವ ನನ್ನ ಆ ಮಗನಿಗೂ.... ಕುಂತಿಗೆ ಮತ್ತೆ ತಲೆ ತಿರುಗಿದಂತಾಯಿತು" [೮೩] ಎಂದು ಕೊರಗುವಲ್ಲಿ ಅವಿವಾಹಿತೆ ಹೆಣ್ಣು ತಾಯಿಯಾದರೆ ಯಾವ ಶಿಕ್ಷೆಗೆ ಒಳಪಡುತ್ತಾಳೆ ಅವಳ ತಾಯ್ತನದ ಸಂಕಟ ಹೇಗಿರುತ್ತದೆಂಬುದು ವೇದ್ಯವಾಗುತ್ತದೆ.

ಕಾದಂಬರಿಯುದ್ದಕ್ಕೂ ಕುಂತಿ ಕರ್ಣನ ಜನ್ಮ ರಹಸ್ಯದ ಕಥೆ ಯಾರಿಗೂ ತಿಳಿಯದಂತೆ ಆದಷ್ಟು ಪ್ರಯತ್ನಿಸುತ್ತಿರುತ್ತಾಳೆ. ಅವಳ ಉದ್ದೇಶ ಮಗನೆಂದು ಹೇಳಿಕೊಳ್ಳಲು ಇಷ್ಟವಿಲ್ಲ ಎಂದಲ್ಲ, ಸಮಾಜ, ಅರಮನೆಯವರು, ಮಕ್ಕಳ ಆತಂಕ ಕಾಡುತ್ತದೆ. ಅದನ್ನು ಕುಂತಿ ಕೃಷ್ಣನ ಸಲಹೆಯಂತೆ ಗುಪ್ತವಾಗಿ ಕರ್ಣನನ್ನು ಸಂಧಿಸಿದಾಗ ಕರ್ಣ ಹಸ್ತಿನಾವತಿಗೆ ಬಂದ ದಿನವೇ ಗುರುತಿಸಿರುತ್ತಾಳೆ. ಈ ಗುಟ್ಟನ್ನು ಹೇಳಿಕೊಳ್ಳದಿರುವುದಕ್ಕೆ ಕಾರಣವನ್ನು ಹೇಳುವುದರಲ್ಲಿ ಸಮಾಜವೇ ಕಾರಣವೆಂಬ ಸತ್ಯ ಕಂಡುಬರುತ್ತದೆ, ಕಣ್ಣೆದುರೇ ಮಗನಿದ್ದರು ಹೇಳಿಕೊಳ್ಳಲಾಗದ ಚಡಪಡಿಕೆ ಹೆಣ್ಣಿನ ಬಂಧನವನ್ನು ತೋರ್ಪಡಿಸುತ್ತದೆ. (ಆದರೂ ತಾಯ್ತನ ಸ್ವಾರ್ಥವನ್ನು ಬಿಟ್ಟು) ಕರ್ಣನ ಮರಣವನ್ನು ತಪ್ಪಿಸಲು ಓಡಿ ಬಂದ ಸಮಯಕ್ಕೆ ಕರ್ಣನ ತಲೆ ಬೀಳುತ್ತದೆ. ಕುಂತಿ ಚೀರುತ್ತಾಳೆ, ನಿಜ ಅರುಹುತ್ತಾಳೆ ಪಾಂಡವರು ಅಣ್ಣನೆಂದು ತಿಳಿಯದೆ ಮಾಡಿದ ದುರಂತಕ್ಕೆ ಮರುಗುತ್ತಾರೆ.

ಜೀವ ಇರುವಾಗ ಕೊಡದ ಮಹತ್ವ ಜೀವ ಹೋದ ನಂತರ ಕೊಡುವುದು ಸಮಾಜದಲ್ಲಿನ ಅಜ್ಞಾನವನ್ನು ತೋರಿಸುತ್ತದೆ. ಕೊನೆಯಲ್ಲಿ ಕುಂತಿ, ಮಗ ಧರ್ಮರಾಯ ರಾಜನಾಗುತ್ತಿದ್ದರೂ ಅದರ ಸಂತೋಷದಲ್ಲಿ ಭಾಗಿಯಾಗುವುದಿಲ್ಲ. ತಾಯ್ತನದ ಜವಾಬ್ದಾರಿ ಪೂರ್ಣಗೊಳಿಸಿದ ನಂತರ ಬದುಕಿನಲ್ಲಿ ನಿರಾಸಕ್ತಿಹೊಂದುತ್ತಾಳೆ. ಸಾವಿನ ಸೂಚ್ಯ ತಿಳಿದಿದ್ದರೂ ವಾನಪ್ರಸ್ಥಾಶ್ರಮಕ್ಕೆ ಸಿದ್ಧಳಾಗುತ್ತಾಳೆ. ಗಾಂಧಾರಿ, ಧೃತರಾಷ್ಟ್ರ, ಕುಂತಿ, ವಿದುರ ಕಾಡಿನ ಮಧ್ಯೆ ನಡೆದುಹೋಗುವಾಗ ಕಾಳ್ಗಿಚ್ಚು ಎದುರಾಗುತ್ತದೆ. ಗಾಂಧಾರಿ, ಧೃತರಾಷ್ಟ್ರ ಬದುಕುವ ಹಂಬಲ ತೋರಿದರು ಕುಂತಿ, ವಿದುರ ಮಂತ್ರ ಜಪಿಸುವ ಮೂಲಕ ಸಾವನ್ನು ಆಹ್ವಾನಿಸುತ್ತಾರೆ. ನಾಲ್ವರು ಸುಟ್ಟು ಹೋಗುವಲ್ಲಿ ಕಾದಂಬರಿ ಅಂತ್ಯವಾಗುತ್ತದೆ. ಇಲ್ಲಿ ಕುಂತಿ ಮನಸ್ಸು ಈಗಾಗಲೇ ಕಾಳ್ಗಿಚ್ಚಿಗಿಂತಲೂ ಪ್ರಖರವಾದ ಶಾಖದಿಂದ ಉರಿದು ಹೋಗಿದ್ದುದರ ಅರಿವಾಗುತ್ತದೆ.

ಈ ಕಾದಂಬರಿಯಲ್ಲಿ ಮಕ್ಕಳ ಬಯಕೆಯನ್ನು ಒತ್ತಿ ಹೇಳುತ್ತದೆ. ಮಕ್ಕಳು ಬೇಕೆಂಬುದು ಯಾವ ಕಾಲಕ್ಕೂ ನಿಂತಿಲ್ಲ. ಅದಕ್ಕಾಗಿಯೇ ಕುಂತಿ, ಮಾದ್ರಿ ನಿಯೋಗದಿಂದ ಮಕ್ಕಳನ್ನು, ಗಾಂಧಾರಿಯ ಪೈಪೋಟಿಯ ಮೇಲೆ ಹೆರುವುದನ್ನು ಸೂಚಿಸುತ್ತದೆ. ಕಾದಂಬರಿಗಾರ್ತಿಯು ಮುಕ್ತವಾಗಿ ಸ್ತ್ರೀ ಮನಸ್ಸನ್ನು ತೆರೆದಿದ್ದಾರೆ. ಕುಂತಿಯು ಧರ್ಮ ಎಂಬ ಋಷಿಯಿಂದ ಮಗುವನ್ನು ಪಡೆದು ಧರ್ಮರಾಯ ಎಂತಲು ಹೆಸರಿಟ್ಟು, ಎರಡನೇ ಋಷಿಯೊಂದಿಗಿನ ಸಹಚರ್ಯ ಮತ್ತಷ್ಟೂ ಆಪ್ತವಾಗಿದಂತೆ ಚಿತ್ರಿಸಿದ್ದಾರೆ. “ಈ ಋಷಿಯ ಸಹವಾಸದಿಂದ ತನ್ನ ಇಡೀ ಜನ್ಮದ ಕಾಮತೃಷೆಯೆಲ್ಲಾ ಇಂಗಿ ಹೋದಂತೆನ್ನಿಸಿತು ಕುಂತಿಗೆ, ಅಂತಹ ಬಲಶಾಲಿಯಾದವನು ಅವನು. ಅವನಿಗೆ ಮಾತೇ ಬೇಕಿರಲಿಲ್ಲವಾದುದರಿಂದ ರಾತ್ರಿಯ ವೇಳೆ ಪಾಂಡುವಿಗೆ ತಿಳಿಯದಂತೆ ಪಿಸುಗುಟ್ಟಬೇಕಾದ ಅಗತ್ಯವಿರಲಿಲ್ಲ. ವಾಂತಿಯೂ ಆಗದುದರಿಂದ ಕುಂತಿಯ ಉಬ್ಬಿದ ಹೊಟ್ಟೆ ಕಣ್ಣಿಗೆ ಬಿದ್ದಾಗಲೇ ಪಾಂಡುವಿಗೆ ಅನುಮಾನವಾದುದು. ಈ ಬಾರಿ ತನಗೂ ಗೊತ್ತಾಗಲಿಲ್ಲವೆಂದು ಕುಂತಿ ಜಾರಿಕೊಂಡಳು”[೮೪] ಎನ್ನುವಲ್ಲಿ ಹೆಣ್ಣು ತನ್ನ ಸುಖದತ್ತ ಯೋಚಿಸುವ ಪರಿ ವ್ಯಕ್ತವಾಗಿದೆ.

ಮುಂದುವರೆದಂತೆ ಸ್ತ್ರೀ ಎಷ್ಟೇ ಸ್ವತಂತ್ರವನ್ನು ಬಯಸಿದರೂ ಪುರುಷ ರಾಜಕಾರಣದಲ್ಲಿ ಬಲಿಯಾಗುವವಳೇ ಎಂಬುದು ಅಭಿವ್ಯಕ್ತಗೊಂಡಿದೆ. ಕೃಷ್ಣ, ಕರ್ಣನ ಜನ್ಮರಹಸ್ಯ ತಿಳಿದು ತಾಯಿ ಮಗನನ್ನು ಒಂದು ಮಾಡುವ ಯೋಚನೆ ಮಾಡಬಹುದಿತ್ತು. ಹಾಗೇ ಮಾಡದೇ ರಾಜಕೀಯ ತಂತ್ರವನ್ನಾಗಿ ಕುಂತಿಯನ್ನು ಬಳಸಿಕೊಳ್ಳುವುದು ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣು ಆಟದ ವಸ್ತುವಾಗಿರುತ್ತಾಳೆ. ಕೃಷ್ಣ ಕುಂತಿಯಲ್ಲಿ ಕರ್ಣ ಯಾರೆಂದು ತಿಳಿದಿರುವುದಾಗಿ ಹೇಳಿ ಯುದ್ಧಸಿದ್ಧವಾಗಿರುವ ಸೂಚನೆ ನೀಡದೆ, ಕರ್ಣನನ್ನು ಸಂಧಿಸುವಂತೆಯೂ, ಕರ್ಣನಿಗೆ ಜನ್ಮರಹಸ್ಯ

ಹೇಳಿ ಕುಂತಿಯೇ ತಾಯಿಯೆಂಬ ಸಂಗತಿಯನ್ನು ಹೇಳಿ  ತಾಯಿ–ಮಗ ಸಂಧಿಸುವಂತಹ ಕೆಲಸ ಮಾಡುತ್ತಾನೆ.  ಈ ಸಂಧಿ ತಾಯಿ ಮಗನನ್ನು ಸೇರಿಸುವುದಾಗಿರುವುದಿಲ್ಲ.  ಪಕ್ಷಪಾತಿಯಾದ ಕೃಷ್ಣನು ಪಾಂಡವರ ಪರ ವಹಿಸಿದ್ದು, ಪಾಂಡವರ ರಕ್ಷಣೆಗೆ ತಾಯಿ ಮಗನನ್ನು ಒಂದು ಮಾಡುವ ತಂತ್ರ ಕಂಡುಬರುತ್ತದೆ.

ಈ ಕಾದಂಬರಿಯಲ್ಲಿ  ಕುಂತಿ ಮುಗ್ಧೆಯಾಗಿ ಕಂಡುಬರುತ್ತಾಳೆ. ಯುದ್ಧ ನಿಗದಿಯಾಗಿರುವ ಯಾವುದೇ ವಿಷಯ ತಿಳಿಯದೇ ಕುಂತಿ ಕರ್ಣನ ಭೇಟಿ ಆಗಿರುತ್ತದೆ.  ಕರ್ಣನಿಂದ ಯುದ್ಧದ ನಿಶ್ಚಯ ತಿಳಿದ ಕುಂತಿ ಯುದ್ಧದಲ್ಲಿ ತಮ್ಮಂದಿರನ್ನು ರಕ್ಷಿಸು ಎಂದು ಹೇಳುವುದೂ ಇಲ್ಲ. ಕೇವಲ ಒಬ್ಬ ತಾಯಿಯಾಗಿ ಮಗನಿಗೆ ನಿಜ ಅರುಹುವ ಪ್ರಯತ್ನ ಮಾಡಲಾಗಿರುತ್ತದೆ.  ಕೃಷ್ಣನ ಕುತಂತ್ರ ತಿಳಿದು "ಹೋಗು ಮಗೂ, ನಿನ್ನ ಕರ್ತವ್ಯವನ್ನು ನೀನು ಮಾಡು, ಎಂದೋ ಮಾಡಿ ತಪ್ಪನ್ನು ಇಂದು ಸರಿಪಡಿಸಿಕೊಳ್ಳಬೇಕೆಂದು ಬಯಸಿದೆ,  ಈಡೇರಲಿಲ್ಲ ಆದರೆ ನಿನ್ನ ತಾಯಿ ನಿನಗಾಗಿ ಎಂದೆಂದೂ ಕಾಯುತ್ತಾಳೆ ಎಂಬುದನ್ನು ಮರೆಯಬೇಡ"[೮೫] ಎಂಬ ಮಾತುಗಳನ್ನಾಡುತ್ತಾಳೆ. ಕರ್ಣನ ಸಾವಿನ ನಂತರ ಕುಂತಿ ಸಾಯುವ ಮೂಲಕ  ತಾಯ್ತನವನ್ನು ಮೆರೆದಿದ್ದಾಳೆ.

**ಜಯ**

ಮಹಾಭಾರತದ ಕಥಾವಸ್ತುವನ್ನು ಹೊಂದಿರುವ ಮತ್ತೊಂದು ಕಾದಂಬರಿ ಜಯ. ಈ ಕಾದಂಬರಿಯು ಹಿನ್ನೋಟದಂತೆ ಕಥೆಯನ್ನು ಕಟ್ಟಿಕೊಡುತ್ತದೆ. ಕುರುಕ್ಷೇತ್ರ ಯುದ್ಧದಿಂದ ಪ್ರಾರಂಭವಾಗುವ ಕಾದಂಬರಿಯು ಹದಿನೆಂಟು ದಿನದ ಯುದ್ಧದ ವರ್ಣನೆಯ ಜೊತೆ ಜೊತೆಗೆ ದ್ರೌಪದಿ ವಿವಾಹ, ದ್ರೌಪದಿ ವಸ್ತ್ರಾಪಹರಣ, ಭೀಷ್ಮ ಚರಿತ್ರೆ, ದ್ರೋಣ–ಕರ್ಣರ ವೀರಮರಣ, ಗಾಂಧಾರಿ ವಿವಾಹ, ಕುಂತಿ ತಾಯ್ತನ, ದುರ್ಯೋಧನ ಸಮುದ್ರದಲ್ಲಿ ಅವಿತುಕೊಂಡದ್ದು, ಅಶ್ವತ್ಥಾಮನಿಂದ ಪಾಂಡವರ ಮಕ್ಕಳ ಸರ್ವನಾಶ, ಧರ್ಮರಾಯನ ಪಟ್ಟಾಭಿಷೇಕ ಸಂಪೂರ್ಣ ಕಥೆಯನ್ನು ಹದಿನೆಂಟು ಅಧ್ಯಾಯಗಳಲ್ಲಿ ಎಂ.ಎಸ್.ವೇದಾರವರು ಚಿತ್ರಿಸಿದ್ದಾರೆ.  ಇಲ್ಲಿ ಮೂಲಕಥೆ ಮುಖ್ಯವೆನಿಸುವುದಿಲ್ಲ. ಅಂದರೆ "ಮುಖ್ಯವಾಗಿ ಸ್ತ್ರೀ ಪರಿಪ್ರೇಕ್ಷ್ಯದಿಂದ ನಿರೂಪಿಸಲ್ಪಟ್ಟಿರುವ ಈ ಕಾದಂಬರಿ ವೈಚಾರಿಕ ನೆಲೆಯಲ್ಲಿ ಎತ್ತುವ ಮಹತ್ವದ ಪ್ರಶ್ನೆಯೆಂದರೆ ಅಪಾರ ಸಾವು ನೋವುಗಳಲ್ಲಿ ಕೊನೆಗಾಣುವ ಕುರುಕ್ಷೇತ್ರ ಯುದ್ಧಕ್ಕೆ ಕಾರಣರಾರು? ದ್ರೌಪದಿ? ಕೃಷ್ಣ? ದುರ್ಯೋಧನ? ಇವರೆಲ್ಲರ ವ್ಯಕ್ತಿತ್ವ ಮತ್ತು ವರ್ತನೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾ ಕೊನೆಗೆ ಕಾದಂಬರಿ ನೀಡುವ ಉತ್ತರವೆಂದರೆ ಈ ಕುರುಕ್ಷೇತ್ರ ಯುದ್ಧಕ್ಕೆ ನಿಜವಾದ ಕಾರಣ ಪುರುಷ ರಾಜಕಾರಣ".[೮೬]  ಇದರ

ಹಿನ್ನೆಲೆಯಲ್ಲಿ ಈ ರಾಜಕಾರಣಕ್ಕೆ ಒಳಪಟ್ಟವರ ಕಣ್ಣೀರಿನ ಗೋಳನ್ನು ತಿಳಿಸುವುದೆ ಕಾದಂಬರಿಯ ಮುಖ್ಯವಸ್ತುವಾಗಿದೆ.

ಕಾದಂಬರಿಯ ಕೇಂದ್ರ ಭಾಗವೆ ಕುರುಕ್ಷೇತ್ರ ಯುದ್ಧ. ಪಾಂಡವರು ಎಂದೂ ಯುದ್ಧ ಬಯಸಿದವರಲ್ಲ. ದುರ್ಯೋಧನ ಯುದ್ಧಾಪೇಕ್ಷಿ. ಇವರಿಬ್ಬರ ಸೆಣಸಾಟ ಭೂಮಿಗಾಗಿ. ಅಧಿಕಾರತ್ವ, ಯಾಜಮಾನ್ಯ ಸ್ಥಾಪಿಸುವಲ್ಲಿ ಶೌರ್ಯತ್ವದ ಅಸ್ತ್ರ ಇಲ್ಲಿನ ಪುರುಷರಿಗೆ ಮುಖ್ಯವಾಗಿದೆ. ದ್ರೌಪದಿಯ ಅಪಮಾನ ಇವರಿಗೆ ಲೆಕ್ಕಕ್ಕೆ ಇಲ್ಲ. “ಸಂಚಿನಿಂದ ರಾಜ್ಯ ಅಪಹರಿಸಿ ಐದು ಸೂಜಿಮೊನೆಯಷ್ಟೂ ಜಾಗವನ್ನು ಕೊಡದ ಕೌರವರು ಒಂದು ಕಡೆ, ‘ಕೊಡಿ’ ಎಂದು ಕೊನೆತನಕ ಕಾಯ್ದು ಪಾಂಡವರು ಒಂದು ಕಡೆ. ನಡುವೆ ನಲುಗಿ ಹೋದ ದ್ರೌಪದಿಯ ಮಾನಾಪಮಾನಗಳು. ಎಲ್ಲದ್ದಕ್ಕೂ ಉತ್ತರ ದೊರಕಿಸಿಕೊಳ್ಳಲು ದಾಯಾದಿಗಳೇ ಯುದ್ಧ ಬಯಸಿದ್ದಾರೆ”[೮೭] ಎಂದು ಹೇಳಿರುವ ಲೇಖಕಿಯ ಮಾತುಗಳೆ ಯುದ್ಧಕ್ಕೆ ಕಾರಣ, ಯುದ್ಧ ಬಯಸಿದವರ ಪರಿಚಯವನ್ನು ಮಾಡಿಸುತ್ತದೆ. ಐದು ಗ್ರಾಮಗಳನ್ನು ಕೇಳಿದ್ದ ಪಾಂಡವರಿಗೆ ದುರ್ಯೋಧನ ನೀಡಿದ್ದರೆ ಯುದ್ಧದ ಪ್ರಮೇಯವೆ ಇರಲಿಲ್ಲ. ದುಯೋಧನನ ಕಟು ನಿರ್ಧಾರ, ಸಡಿಲವಾಗದ ಯುದ್ಧದ ನಿಲುವು, ಪಾಂಡವರ ಯುದ್ಧಕ್ಕೆ ಅನಿವಾರ್ಯವಾಗುತ್ತದೆ. ಮುಖ್ಯವಾಗಿ ಗಮನಿಸಬೇಕಾದದ್ದು ಅಧಿಕಾರ, ಯಾಜಮಾನ್ಯ ಪ್ರವೃತ್ತಿಗೆ ಒಳಗಾಗಿ ಪಾಂಡವರು–ಕೌರವರು ಯುದ್ಧಕ್ಕೆ ಕಾರಣರಾಗುತ್ತಾರೆಯೆ ವಿನಹ ದ್ರೌಪದಿಗೆ ನ್ಯಾಯ ದೊರಕಿಸಿಕೊಡುವ ಹಂಬಲ ಕಂಡುಬರುವುದಿಲ್ಲ. ಇವರ ಯುದ್ಧದ ತಿರುಳು ಶೌರ್ಯ, ಪರಾಕ್ರಮಗಳ ಪ್ರದರ್ಶನವೇ ಆಗಿದೆ. ಪಾಂಡವರು–ಕೌರವರು ಹಠಕ್ಕೆ ಯುದ್ಧ ಹೂಡಿದರೆ, ಅನೇಕರು ಚಟಕ್ಕೆ ಯುದ್ಧದಲ್ಲಿ ಭಾಗವಹಿಸುವುದು ಪುರುಷ ರಾಜಕಾರಣಕ್ಕೆ ಸಾಕ್ಷಿಯಾಗಿದೆ. ಕಾಶೀ ದೇಶದ ರಾಜ ಅಭಿಭೂ ಸನ್ಮಾನ, ಜೈಕಾರ ಕೂಗಿಸಿಕೊಳ್ಳುವ ಅಮಲಿನಲ್ಲಿದ್ದರೆ, ಅಭಿಭೂವಿನ ಸಾಮಂತ ರಾಜನಾದ ಚಂದ್ರಸೇನ ರಾಜನೆ ಹೋಗಲು ಸಿದ್ಧವಿರುವಾಗ ತಾನೂ ಹೋಗುವುದರ ಅನಿವಾರ್ಯತೆಯನ್ನು ಹೇಳುತ್ತದೆ. ದ್ರುಪದನು ಸಾತ್ಯಕಿಯನ್ನು ಅನುಮೋದಿಸಿ ಅಳಿಯಂದಿರಿಗೆ ಸಹಾಯಕನಾಗಿ ನಿಲ್ಲುವುದು ವನವಾಸ ಮುಗಿಸಿ ಬಂದವರಿಗೆ ನ್ಯಾಯವಾಗಿ ಭೂಮಿ ನೀಡಬೇಕು ಎಂಬ ಸೂಚನೆಯಾಗಿದೆ. ಹೀಗೆ ತಮ್ಮ–ತಮ್ಮ ಪ್ರಾಬಲ್ಯ ಮೆರೆಯುವ, ಅಧಿಕಾರದ ಅಮಲಿಗಾಗಿ ಕಾದಾಡುವ ಚಿತ್ರಣ ಪುರುಷ ರಾಜಕಾರಣವನ್ನು ಬಿಂಬಿಸುತ್ತದೆ.

ತಲತಲಾಂತರದಿಂದ ಕುರುಕ್ಷೇತ್ರದ ಯುದ್ಧಕ್ಕೆ ದ್ರೌಪದಿಯನ್ನು ಗುರಿಪಡಿಸಿರುವುದರ ಹಿನ್ನೆಲೆಯನ್ನು ಕಾದಂಬರಿ ಬಿತ್ತರಿಸಿದೆ. ಪುರುಷ ರಾಜಕಾರಣದ ನಡುವೆ ಹೆಣ್ಣಿನ ನಿರಾಕರಣೆ ದ್ರೌಪದಿಯ ಭಾವನೆಯನ್ನು ಅರ್ಥಮಾಡಿಕೊಳ್ಳದರ ಮಟ್ಟಿಗೆ ಸ್ಥಾಪಿತವಾಗಿದೆ. ದ್ರೌಪದಿ ಯುದ್ಧ

ವಿರೋಧಿಯಲ್ಲ. ಯುದ್ಧವನ್ನು ಬಯಸಿದವಳೆ. ದುರ್ಯೋಧನ–ದ್ರೌಪದಿ ಯುದ್ಧ ಬಯಸಿದವರೆ ಆದರೂ ಇಬ್ಬರ ಯುದ್ಧದ ನಿಲುವುಗಳು ಬೇರೆ–ಬೇರೆಯಾಗಿತ್ತು. ದುರ್ಯೋಧನನದು ಶೌರ್ಯತ್ವದ ನಡುವಿನ ಯುದ್ಧವಾಗಿತ್ತು. ದ್ರೌಪದಿಯದು ತಪ್ಪಿತಸ್ಥನಾದವರೊಂದಿಗೆ ಕಾದಾಡುವುದು ಮಾತ್ರವಾಗಿತ್ತು. ದ್ರೌಪದಿ ಬಯಸಿದ ಯುದ್ಧ ಪಾಂಡವರ್ಯೆವರಿಗು, ಕೌರವರಿಗೂ ಮಾತ್ರ ಸಂಬಂಧಪಟ್ಟಿತ್ತು. ಹೆಣ್ಣನ್ನು ಅಪಮಾನಿಸಿದವರಿಗೆ ತಕ್ಕ ಶಾಸ್ತಿ ಆಗಬೇಕೆಂಬುದೇ ದ್ರೌಪದಿಯ ನಿಲುವಾಗಿತ್ತು. "ಉಪ್ಪು ತಿಂದವರಿಗಷ್ಟೇ ನೀರು ಕುಡಿಸಲು ಅವಳು ಇಚ್ಛಿಸಿದ್ದಳು. ತಿಂದವರೂ ತಿನ್ನದವರು ಎಲ್ಲರಿಗೂ ನೀರನಲ್ಲ, ರಕ್ತವನ್ನು ಕುಡಿಸುವ ಈ ಯುದ್ಧವನ್ನಂತೂ ಅವಳು ಖಂಡಿತ ಬಯಸಿರಲಿಲ್ಲ"[೮೮] ಎನ್ನುವಲ್ಲಿಯೆ ದ್ರೌಪದಿಯ ಯುದ್ಧಭಾವನೆ ಅರಿವಾಗುತ್ತದೆ. ಪುರುಷರ ಶೌರ್ಯಗಳ ನಡುವೆ ದ್ರೌಪದಿಯ ಭಾವನೆಗೆ ಬೆಲೆಯಿಲ್ಲವಾದರೂ, ದ್ರೌಪದಿ ಬಯಸಿದ ರೀತಿಯಲ್ಲಿ ಯುದ್ಧ ನಡೆಯಲಿಲ್ಲವಾದರೂ ಪ್ರತೀಕಾರ ತೀರಿಸಿಕೊಳ್ಳುವ ಹಂಬಲದಲ್ಲಿ ಕುರುಕ್ಷೇತ್ರ ಯುದ್ಧಕ್ಕೆ ಜವಾಬ್ಧಾರಿ ಹೊರುವ ಹೆಣ್ಣಾಗಿದ್ದಾಳೆ. "ಕುರುಕ್ಷೇತ್ರ ಯುದ್ಧದ ಪರಿಣಾಮ, ಪುರುಷಾರ್ಥದ ಪ್ರಶ್ನೆಗಳನ್ನೆಲ್ಲಾ ನಾನು ಹೊರುತ್ತೇನೆ"[೮೯] ಎಂದು ಹೇಳುವಲ್ಲಿ ಯುದ್ಧಕ್ಕೆ ದ್ರೌಪದಿಯ ಪಾತ್ರವಿಲ್ಲದಿದ್ದರು ಪುರುಷ ರಾಜಕಾರಣದೊಳಗೆ ಹೆಣ್ಣನ್ನು ಗುರಿಪಡಿಸುವುದರ ಮುನ್ಸೂಚನೆ ಅರಿತಂತೆ ಇದೆ. ಅದನ್ನು ಕುಂತಿ ವಿಚಾರದಲ್ಲಿ ಲೇಖಕಿ ಸಾಬೀತಿಸುವ ಮೂಲಕ ಪುರುಷ ರಾಜಕಾರಣದ ಮತ್ತೊಂದು ಮುಖ ಪರಿಚಯಿಸಿದ್ದಾರೆ.

ಕುಂತಿ ಕರ್ಣನ ತಾಯಿಯಾಗಿ ಒಳ ಬೇಗುದಿಗಳೊಂದಿಗೆ ಬೇಯುವುದಕ್ಕೆ ಸಮಾಜವೆ ಕಾರಣವಾಗಿದೆ. ಸಮಾಜದ ಆತಂಕ ಮನೆಮಾಡಿದ್ದರಿಂದ ಕರ್ಣನ ಜನ್ಮರಹಸ್ಯ ಮುಚ್ಚಿಟ್ಟುಕೊಳ್ಳುತ್ತಾಳೆ. ಕರ್ಣನ ಮರಣಾನಂತರ ಇನ್ನೂ ಅದುಮಿಟ್ಟುಕೊಳ್ಳಲಾಗದ ಸತ್ಯ ನೋವಿನಲ್ಲಿ ಹೊರಬೀಳುತ್ತದೆ. ವಿಷಯ ತಿಳಿದ ತಕ್ಷಣ ಧರ್ಮರಾಯ "ಇಡೀ ಭೂಮಿಯನ್ನೇ ನುಂಗಿ ಹಾಕುವ ಕುರುಕ್ಷೇತ್ರದಂತಹ ಮಹಾಕಮ್ಮರಿಗೆ ಕಾರಣಳಾಗಿಬಿಟ್ಟಳು ಅಮ್ಮಾ"[೯೦] ಎಂದು ಹೆತ್ತ ತಾಯಿಯನ್ನು ತಪ್ಪಿಗೆ ಸಿಲುಕಿಸುವುದು ಸಮಾಜದಲ್ಲಿ ಯುದ್ಧಪರರು ತಪ್ಪಿಸಿಕೊಳ್ಳುವ ದಾರಿಯಾಗಿದೆ. ಇದನ್ನು ಅರಿತಂತೆ ದ್ರೌಪದಿ ಯುದ್ಧದ ಜವಾಬ್ದಾರಿ ಹೊರುವ ಮೂಲಕ ಸಮಾಜದಲ್ಲಿ ಯುದ್ಧಕ್ಕೆ ಕಾರಣಳೆಂಬಂತೆ ದ್ರೌಪದಿ ನೆಲೆ ನಿಂತಿದ್ದಾಳೆ. 'ದ್ರೌಪದಿ ಕುರುಕ್ಷೇತ್ರ ಯುದ್ಧಕ್ಕೆ ನಾಂದಿ ಹಾಡಿದಳು', 'ದ್ರೌಪದಿಗಾದ ಅಪಮಾನ ಮುಂದೆ ಎಂದೂ ನಡೆಯದಿರಲೆಂಬಂತೆ ಮಾನಾಪಮಾನ ತೆಗೆಯ ಹೊರಟವರಿಗೆ ಸರಿಯಾದ ಶಿಕ್ಷೆಯೆಂಬಂತೆ ಯುದ್ಧ ಜರುಗಲಿ' ಎಂಬ ದ್ರೌಪದಿಯ ಪರ–

ವಿರೋಧಗಳ ನಡುವೆ ಮಹಾಭಾರತದ ಯುದ್ಧಕ್ಕೆ ದ್ರೌಪದಿ ಕಾರಣಳಲ್ಲ ಎಂಬುದು ಕಾದಂಬರಿಯಲ್ಲಿ ಸ್ಪಷ್ಟವಾಗಿದೆ.

ದ್ರೌಪದಿ ತನ್ನನ್ನು ತಾನೇ, ಧರ್ಮರಾಯ ಕುಂತಿಯನ್ನೂ ಯುದ್ಧಕ್ಕೆ ಜವಾಬ್ದಾರರಂತೆ ಗುರಿಪಡಿಸಿದರೆ ಭೀಮ ಹೆಣ್ಣಿನ ಸ್ಥಾನದಲ್ಲಿ ನಿಂತು ಯೋಚಿಸಿ ಧರ್ಮರಾಯನನ್ನು ಗುರಿಪಡಿಸುವುದರಲ್ಲಿ ಮೂಲಕಾರಣಕರ್ತ ಆತನೆ ಎಂಬ ಸತ್ಯದ ಅರಿವಾಗುತ್ತದೆ. "ಕ್ಷತ್ರಿಯ ಧರ್ಮ. ಧರ್ಮವೆಂದು ಮೋಸದ ಜೂಜಿಗೆ ಕರೆದಾಗಲೆಲ್ಲಾ ಕುಳಿತು ಆಟವಾಡಿ ನೀನು ಪಾಂಡವರಿಗೆ, ದ್ರೌಪದಿಗೆ ಗಳಿಸಿಕೊಟ್ಟೆಯಲ್ಲಾ ಅಂದು ಅವೇ ಕುರುಕ್ಷೇತ್ರಕ್ಕೆ ಕಾರಣ... ತಪ್ಪನ್ನು ಬೇರೆಯವರ ಮೇಲೆ ಹೊರಿಸಲು ತಪ್ಪು ಮಾಡಿದವರಿಗಷ್ಟೆ ಬಹಳ ಸುಲಭವಾದ ಕಾರ್ಯ"[೧] ಎಂದು ಹೇಳುವಲ್ಲಿ ಧರ್ಮರಾಯ ಪರೋಕ್ಷ ಕಾರಣನಾಗುತ್ತಾನೆ. ದುರ್ಯೋಧನ ಪ್ರತ್ಯಕ್ಷ ಕಾರಣಿಗನಾಗುತ್ತಾನೆ. ಧರ್ಮಾಂಧತೆ-ಯುದ್ಧಪಟುತ್ವದಿಂದ ಯುದ್ಧ ಜರುಗುವುದು ಕಾದಂಬರಿಯಲ್ಲಿ ಬಿಂಬಿತವಾಗಿದೆ.

"ಮಹಾಭಾರತವೆಂದರೆ ಕೇವಲ ಕೌರವ-ಪಾಂಡವರ ಕಥೆಯಲ್ಲ; ಅದು ಪುರುಷ ರಾಜಕಾರಣಕ್ಕೆ ಬಲಿಯಾಗುವ ದ್ರೌಪದಿ, ಕುಂತಿ, ಗಾಂಧಾರಿ, ಭಾನುಮತಿ, ದುಶ್ಯಲೆ, ಅಭಿಲಾಷಾ, ರೋಹಿಣಿ ಇತ್ಯಾದಿ ನೂರಾರು ಸ್ತ್ರೀಯರ ಕಥೆಯೂ ಅಹುದು; ಕಾಳಶಂಭುವಿನಂತಹ ಸಾವಿರಾರು ಊಳಿಗದವರ ಕಥೆಯೂ ಅಹುದು; ಎಂಬ ಕಠೋರ ಸತ್ಯವನ್ನೂ ಪರಿಣಾಮಕಾರಿಯಾಗಿ ಈ ಕಾದಂಬರಿ ಚಿತ್ರಿಸುತ್ತದೆ".[೨] ಯುದ್ಧ ಸ್ತ್ರೀ ವಿರೋಧಿತನದ ಕಾರ್ಯವಾಗಿದೆ. ಪುರುಷರ ಪ್ರಾಬಲ್ಯದಲ್ಲಿ, ಸ್ತ್ರೀಯರ ಅಬಲತೆಯನ್ನು ಲೇಖಕಿ ತೋರಿಸಿದ್ದಾರೆ.ನಾಯಕಿಯರ ನಡುವೆ ನಾಯಕಿಯಾಗಿ ನಿಲ್ಲುವ ದ್ರೌಪದಿ ಶೋಷಣೆಗೊಳಪಟ್ಟವರ ನಡುವೆ ಶೋಷಿತಳಾದವಳು. ತಪ್ಪೇ ಇಲ್ಲದೆ ತಪ್ಪಿತಸ್ಥಳಾಗಿ ನಿಲ್ಲುವ ದ್ರೌಪದಿ ಒಂದೆಡೆಯಾದರೆ, ಶುದ್ಧ ತಪ್ಪಿತಸ್ಥರ ತಪ್ಪನ್ನು ತಿದ್ದಲು ಹೋಗಿ ಅಸಹಾಯಕರಾಗುವ ಹೆಂಗಳೆಯರು ಮತ್ತೊಂದೆಡೆ ಕಂಡುಬರುತ್ತಾರೆ. ದ್ರೌಪದಿಯ ವಸ್ತ್ರಾಪಹರಣದ ಮಾನಭಂಗ ಇಲ್ಲಿನ ಹೆಂಗಳೆಯರನ್ನು ಮೂಕವೇದನೆಗೆ ಗುರಿಪಡಿಸುತ್ತದೆ. ಬಲಪ್ರದರ್ಶನದ ಹಿಂದಿನ ಹೆಂಗಳೆಯರ ಬದುಕಿನ ಚಿತ್ರಣವನ್ನು ಕಾದಂಬರಿ ಚಿತ್ರಿಸಿದೆ. ಕರ್ಣನಂತಹ ಮಗನನ್ನು ಹೆತ್ತ ಕುಂತಿ ಕರ್ಣನ ವೀರ ಮರಣದಿಂದ ಕುರುಕ್ಷೇತ್ರ ಯುದ್ಧಕ್ಕೆ ಕಾರಣಳಾಗುವ ನಿಂದನೆಗೆ ಒಳಪಡಬೇಕಾಗಿದೆ. ಐದು ಮಕ್ಕಳನ್ನು ಸಂರಕ್ಷಿಸುವ ಭಾರ ಕರ್ಣನಿಗೆ ಒಪ್ಪಿಸುವಲ್ಲಿ, ಕರ್ಣನ ಶಕ್ತಿಯ ಅರಿವಾಗುತ್ತದೆ. ಕುಂತಿ ಕರ್ಣನ ಸಾವನ್ನು ನಿರೀಕ್ಷಿಸಿದವಳಲ್ಲ. ಆತನ ಸಾವಿಗಾಗಿ ಪರಿತಪಿಸುತ್ತಾಳೆ. ಗಾಂಧಾರಿ ಪುರುಷ ರಾಜಕಾರಣದ ಅರಿವನ್ನು ಮದುವೆ ಮಂಟಪದಲ್ಲಿ ಅರಿತವಳಾಗಿ ಕಣ್ಣಿಗೆ ಬಟ್ಟೆಕಟ್ಟಿಕೊಳ್ಳುತ್ತಾಳೆ. ಇಲ್ಲಿ ಅವಳ ನೋವಿನ ಸೆಳೆತ

ಬಿತ್ತರವಾಗಿದೆ. ಭಾನುಮತಿ–ದುಶ್ಯಲೆ ವೈಧವ್ಯ ಜೀವನಕ್ಕೆ ಮಾನಸಿಕ ಸಿದ್ಧತೆ ನಡೆಸುವಲ್ಲಿ ಯುದ್ಧಕ್ಕೆ ತಮ್ಮ ವಿರೋಧವನ್ನು ತೋರ್ಪಡಿಸುವುದಾಗಿದೆ. ದುಶ್ಯಲೆ ಕತ್ತಲೆಯನ್ನು ಸೀಳಿ ಹೊರನಡೆದರೆ, ಅಭಿಲಾಷಾ ಹುಚ್ಚಿಯಾಗುವಲ್ಲಿ ಪುರುಷ ರಾಜಕಾರಣಕ್ಕೆ ಒಳಗಾದ ಹೆಂಗಳೆಯರ ಚಿತ್ರಣ ಕಂಡುಬರುತ್ತದೆ. ಇವರಾರು ಯುದ್ಧ ಅಪೇಕ್ಷಿಸದವರಲ್ಲ. ಆದರೂ ಯುದ್ಧದ ಪರಿಣಾಮಕ್ಕೆ ತಲೆಕೊಟ್ಟವರಾಗಿ ಜೀವನ ದುಃಖಾಂತ್ಯವಾಗುವುದರ ಪರಿಚಯವಾಗುತ್ತದೆ.

ಯುದ್ಧವೆಂಬುದು ದ್ರೌಪದಿ ಬಯಸಿದಂತೆ ನಡೆದಿದ್ದರೆ ರೋಹಿಣಿ, ಅಭಿಲಾಷಾಳಂತಹವರ ಕಣ್ಣೀರಿಗೆ ಪುರುಷ ರಾಜಕಾರಣವನ್ನು ನಿಂದಿಸುವಂತಿರಲಿಲ್ಲ. ಕಾದಂಬರಿಯ ಮುಖ್ಯವಸ್ತು ಸ್ವ ಕಾರ್ಯಗಳಿಗಾಗಿ ನಡೆಯುವ ಯುದ್ಧದಲ್ಲಿ ಬಲಿಯಾಗುವವರ ಬದುಕನ್ನು ಒಳಗೊಂಡಿರುವುದೆ ಕಾದಂಬರಿಯ ವೈಶಿಷ್ಟ್ಯವಾಗಿದೆ. ಯುದ್ಧದ ಹೊರಗಿನ ಲೋಕವೊಂದು ಕಾದಂಬರಿಯ ಮೂಲಕ ತಿಳಿಯುತ್ತದೆ. ಮಹಾಭಾರತದಲ್ಲಿ ಇಲ್ಲದ ಕಾಳಶಂಭು, ಅಭಿಲಾಷ, ರೋಹಿಣಿ, ವೈದ್ಯ ಪಾತ್ರಗಳನ್ನು ಸೃಷ್ಟಿಸಿಕೊಂಡು ರಚಿಸಿರುವ ಲೇಖಕಿ ಪುರುಷ ರಾಜಕಾರಣದಿಂದ ಬೀದಿಗೆ ಬರುವ ಕುಟುಂಬಗಳ ಅರಿವನ್ನು ಮೂಡಿಸಿದ್ದಾರೆ. ಕಾದಂಬರಿ ಪ್ರಾರಂಭವಾಗುವುದೆ ಅಭಿಲಾಷಾಳ ಪತಿ ಅಭಿಭೂ ನಡುವಿನ ಚಿತ್ರದೊಂದಿಗೆ ತೆರೆದುಕೊಳ್ಳುವುದು. ರೋಹಿಣಿ, ಕಾಳಶಂಭು ಮತ್ತು ಆತನ ಹೆಂಡತಿಯೊಂದಿಗೆ ಕಾದಂಬರಿ ಅಂತ್ಯಗೊಳ್ಳುತ್ತದೆ. ಮಹಾಭಾರತದ ಕಥೆಯನ್ನು ಕೇಳಿ, ಓದಿ ಬೆಳೆದವರೆಗೆ 'ಜಯ' ಕಾದಂಬರಿ ಹೊಸದೊಂದು ಲೋಕವನ್ನು ಪರಿಚಯಿಸಿದೆ. ಯುದ್ಧದ ಭೀಕರತೆಯಲ್ಲಿ ಮೇಲಿನ ಹಂತದಿಂದ, ಕೆಳಹಂತದವರೆಗೂ ಪುರುಷರ ಹೋರಾಟದಲ್ಲಿ ಸೋಲು–ಗೆಲುವು ಒಂದು ತೆರನಾದರೆ, ಅದರೊಳಗೆ ಸಿಲುಕಿಕೊಳ್ಳುವವಳು ಹೆಣ್ಣು ಆಗಿರುತ್ತಾಳೆ.

ಜಯ ಕಾದಂಬರಿ ಜಯ–ಅಪಜಯಗಳ ನಿರ್ಣಾಯಕವನ್ನು ಮಾತ್ರ ಒಳಗೊಂಡಿರುವುದಲ್ಲ ಅದರಿಂದಾಚೆ ಅನೇಕ ಜನರ ಪಾಡು ಏನೆಂಬುದು ತಿಳಿಯುತ್ತದೆ. ಉತ್ಸಾಹಿಗಳಾಗಿ, ತಮ್ಮನ್ನು ನಂಬಿದವರಿಗೆ ಜಯ ತಂದು ಕೊಡಬೇಕೆಂಬ ಅಭಿಭೂ, ಚಂದ್ರಸೇನರವರ ಬದುಕು ಅತಂತ್ರವಾಗುತ್ತದೆ. ಯುದ್ಧದ ಭೀಕರತೆಯ ಅರಿವಿದ್ದ ಅಭಿಭೂವಿನ ಹೆಂಡತಿ ಅಭಿಲಾಷಾ ಗಂಡ ಜಯಗಳಿಸಿ ಬರುವುದನ್ನು ಕಂಡವಳು. ಯುದ್ಧವೆಂದರೆ ಇಷ್ಟೆ ಎಂದುಕೊಳ್ಳುವಷ್ಟರಲ್ಲಿ ಗಂಡನ ಸಾವು ಊಹಿಸಲಾಗದ ಆಘಾತ ತಡೆದುಕೊಳ್ಳಲಾಗದೆ ಹುಚ್ಚಿಯಾಗಿ ಕಣ್ಮರೆಯಾಗುತ್ತಾಳೆ. ಅದರ ಹಿಂದಿನ ದಿನ ಕಾಲು ಕಳೆದುಕೊಂಡು ಬಂದ ಗಂಡನ ಆರೈಕೆಯಲ್ಲಿ ರೋಹಿಣಿ ತೊಡಗುತ್ತಾಳೆ. ಇಷ್ಟಕ್ಕೆ ಇವರ ಗೋಳು ತೀರಲಿಲ್ಲ. ರಾಜನ ಹೆಂಡತಿ ಅಭಿಲಾಷಾಳ ಸ್ಥಿತಿ ಚಿಂತಾನಕದಲ್ಲಿ ಅಂತ್ಯವಾದರೆ, ಸಾಮಂತರಾಜನಾದ ಚಂದ್ರಸೇನ–ರೋಹಿಣಿಯರ ಸ್ಥಿತಿ

ದುರಂತದಲ್ಲಿ ಕೊನೆಗಾಣುತ್ತದೆ. ಇವರುಗಳ ಸ್ಥಿತಿಯೆ ದುಃಖಕರವಾಗಿರುವಾಗ ಕಾಳಶಂಭುವಿನಂತಹ ಊಳಿಗದವನ ಬದುಕು ಊನವಾಗುವುದನ್ನು ಹೇಳುತ್ತದೆ.

ರಣರಂಗದ ಶಿಬಿರದೊಳಗೆ ದುಡ್ಡು, ಕಾಸು, ಊಟ, ಗಾಯಾಳುಗಳ ಚಿಕಿತ್ಸೆ ಒಂದು ರೀತಿಯ ಗೋಳಾದರೆ, ಇವರನ್ನೇ ನಂಬಿರುವವರ ಹೆಂಡತಿ–ಮಕ್ಕಳ ಗೋಳು ಅತಂತ್ರ ಪರಿಸ್ಥಿತಿಯಲ್ಲಿರುತ್ತದೆ. ಯುದ್ಧ ಹೂಡುವವರ ಪರವಾಗಿ ಬಂದವರ ಯೋಗಕ್ಷೇಮ ಆ ರಾಜನಿಗೆ ಸೇರಿರುತ್ತದೆ. ತಮ್ಮವರ ಯೋಗಕ್ಷೇಮ ವಿಚಾರಿಸಿದಾಗ ರಾಜನನ್ನೆ ನಂಬಿರುವವರು ಪಲಾಯನ ಮಾಡದೆ ಅನ್ಯಮಾರ್ಗವಿರಲಿಲ್ಲ. ಬರಿಗೈಯಾಗಿರುವ ಪಾಂಡವರು ಅದನ್ನು ಸರಿದೂಗಿಸುವಲ್ಲಿ ಅಸಮರ್ಥರಾದವರು. ಕಾಳಶಂಭುವಿಗೆ ಸರಿಯಾಗಿ ಕೂಲಿ ನೀಡದೆ ದು:ಖದ ಮಡುವಿಗೆ ತಳ್ಳುತ್ತಾರೆ. ಮಗಳ ಮದುವೆಗೆ ಹಣ ಸೇರಿಸಲೆಂದು ಕಾವಲುಗಾರನಾಗಿ ಬಂದ ಕಾಳಶಂಭುವಿಗೆ ಊಟವೂ ಕಷ್ಟಕರವಾಗುತ್ತದೆ. ಇತ್ತ ಕಾಲು ಮುರಿದ ಗಂಡನ ಚಿಕಿತ್ಸೆಗಾಗಿ ವೈದ್ಯನ ಚೆಲ್ಲು ಚೆಲ್ಲಾದ ನೋಟಕ್ಕೆ ಆತನ ಇಂಗಿತ ಅರಿತವಳಾದ ರೋಹಿಣಿಗೆ ಪಲಾಯನದ ಮಾರ್ಗ ಬಿಟ್ಟರೆ ಅನ್ಯಮಾರ್ಗವಿರಲಿಲ್ಲ. ಇದು ಒಬ್ಬರ–ಇಬ್ಬರ ಗೋಳಾಗಿ ಕಂಡುಬರುವುದಿಲ್ಲ. ಲಕ್ಷಾಂತರ ಮಂದಿಯ ನೋವಿನ ಮಿಳಿತಗಳಾಗಿವೆ.

ರಣರಂಗ ವೇದಿಕೆಯ ಸಜ್ಜಿನೊಳಗೆ ನಡೆದರೆ, ನಾಡಿನ ರಣರಂಗ ವೇದಿಕೆಯಿಲ್ಲದೆಯೆ ನಡೆಯುವುದಾಗಿದೆ. ಹೆಣ್ಣುಮಕ್ಕಳ ಶೀಲದ ಮೇಲೆ ಕಣ್ಣುಹಾಕುವುದು, ಹಗಲು–ರಾತ್ರಿಯ ಭೇದವಿಲ್ಲದೆಯೆ ದರೋಡೆ ಮಾಡುವುದು, ಹೀಗೆ ಊರಿಗೆ ಊರೆ ನಾಶವಾಗುವ ಯುದ್ಧ ಕೊನೆಗೆ ಶೋಚನೀಯ ಸ್ಥಿತಿಗೆ ತರುವುದು ಮಾತ್ರ ಹೆಣ್ಣನ್ನು. ಕಾಳಶಂಭುವಿನ ಮಗಳು ಪಾಪಿಷ್ಠರ ವಶಕ್ಕೆ ಸಿಲುಕುವುದು ಒಂದು ಹೆಣ್ಣಿನ ಕಥೆಯನ್ನು ಹೇಳಿದರೆ ಇನ್ನು ಯುದ್ಧದಲ್ಲಿ ಮಡಿದವರ, ಸೈನಿಕರ ಹೆಂಡತಿಯರು ಮುಂಡೆಯಾಗಿ ಬದುಕುವುದು ಇವು ಯುದ್ಧದ ನಿರ್ಣಾಯಕಗಳೆ ಆಗಿವೆ. ಪಾಂಡವರು ವಿಜಯಿಯಾಗಿ ಹಸ್ತಿನಾವತಿ ತಲುಪಿದಾಗ "ಅರಿಶಿನ ಕುಂಕುಮವುಳ್ಳ ಹೆಣ್ಣು ಮಕ್ಕಳಿಗಾಗಿ ವಿದುರ, ಸಂಜಯರು ಹುಡುಕಾಟ ನಡೆಸಬೇಕಾಗಿತ್ತು"[೯೩] ಎನ್ನುವಲ್ಲಿ ತಪ್ಪು ಮಾಡದ ಹೆಂಗಳೆಯರು ಅನುಭವಿಸುವುದನ್ನು ಹೇಳುತ್ತದೆ.

ಯುದ್ಧ ಅಪೇಕ್ಷಿಸಿದವರು ಯಾರೆ ಆದರು ಅದರ ಪರಿಣಾಮಕ್ಕೆ ಒಳಗಾಗುವವಳು ಹೆಣ್ಣು ಎಂಬುದರ ಅರ್ಥವನ್ನು ಒಳಗೊಂಡಿದೆ. ಜೊತೆಗೆ ಕಾಳಶಂಭುವಿನಂತಹ ಕೂಲಿಗಳು ಯುದ್ಧದಿಂದ ಹೀನಸ್ಥಿತಿಗೆ ಹೋಗುವುದನ್ನು ಕಾಣುತ್ತೇವೆ. ದೊಡ್ಡವರ ಕಾನೂನುಗಳು, ಕಟ್ಟಳೆಗಳು ಬಡವರ ಕೈಗೆ

ತಲುಪುವುದಿಲ್ಲ ಎಂಬುವುದನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಲೇಖಕಿ ರಚಿಸಿದ್ದಾರೆ. ತಮ್ಮ ಪಾಲಿನ ಹಣವಾದರು ಅದನ್ನು ಪಡೆದುಕೊಳ್ಳುವಲ್ಲಿ ಕಛೇರಿಗು–ಮನೆಗು ಹರಿದಾಡುವ ದಾರಿ ಸವೆದರು ವ್ಯಕ್ತಿಯ ಕೈಗೆ ಹಣ ಬಾರದಿರುವ ಪ್ರಸ್ತುತತೆ ಮಹಾಭಾರತದ ಕಾಲದಲ್ಲು ಕಾಳಶಂಭುವಿನಿಂದ ತಿಳಿಯುತ್ತದೆ. ವೀರಮರಣ ಹೊಂದಿದವರಿಗೆ, ಕಾಲು ಕಳೆದುಕೊಂಡವರಿಗೆ, ಯುದ್ಧದಲ್ಲಿ ಭಾಗವಹಿಸಿದವರಿಗೆ ಹಣ ನೀಡುವ ಮೂಲಕ ಸಂತೈಸುವುದು ಸಾಮಾನ್ಯವಾಗಿತ್ತು. ಯುದ್ಧವನ್ನೇ ನಂಬಿ ಸಂಸಾರ ತೂಗುವ ಭಾರ ಹೊತ್ತವರು ನಿರ್ಗತಿಕರಾಗುವುದು ಯುದ್ಧದ ಹೊರಗಿನ ಲೋಕವನ್ನು ಪರಿಚಯಿಸುತ್ತದೆ. ಚಂದ್ರಸೇನ ರಣರಂಗದ ಹೊರಗೆ ಮಡಿದಿದ್ದರಿಂದ ಸತ್ತವರ ಪಟ್ಟಿಯಲ್ಲಿ ಅವನ ಹೆಸರು ಇರುವುದಿಲ್ಲ, ಕಾಲು ಕಳೆದುಕೊಂಡವರ ಪಟ್ಟಿಯಲ್ಲಿ ಇದ್ದರು ವ್ಯಕ್ತಿಯೇ ಖುದ್ದಾಗಿ ಬರಬೇಕೆಂಬ ನಿಯಮದಡಿ ರೋಹಿಣಿ ಸುಖವು ಇಲ್ಲದೆ, ಹಣವು ಇಲ್ಲದೆ ನಿರ್ಗತಿಕರಾಗಿ ಬದುಕುವುದು ಕಂಡುಬರುತ್ತದೆ. 'ಇಲ್ಲದ ಮನುಷ್ಯನನ್ನು ತರುವುದಾದರು ಹೇಗೆ?' ಈ ಪ್ರಶ್ನೆಗೆ ಕುರುಕ್ಷೇತ್ರದಲ್ಲಿ ಉತ್ತರವಿಲ್ಲ. ಉತ್ತರವೆಂದರೆ ಸಾಮಂತರಾಜನ ಹೆಂಡತಿ ಕೂಲಿಯಾಳಾದ ಕಾಳಶಂಭುವಿನ ಸಂಸಾರದಲ್ಲಿ ಒಬ್ಬಳಾಗಿ ಬದುಕುವುದು ಆಗಿದೆ. ಸೋಲು ಗೆಲುವನ್ನು ಲೆಕ್ಕ ಹಾಕುವ ಸಮಾಜದಲ್ಲಿ ಅದಕ್ಕೆ ಕಾರಣಕರ್ತರಾದವರ ನೋವು, ಊಳಿಗದವನಾದಿಯಾಗಿ ರಾಜನವರೆಗೂ ವ್ಯಾಪಿಸಿರುತ್ತದೆ. ಅದರ ಶಾಖ ತಟ್ಟುವುದು ಹೆಣ್ಣಿಗೆ ಎಂಬುದನ್ನು ಕಾದಂಬರಿ ಒಳಗೊಂಡಿದೆ.

'ಜಯ' ಕಾದಂಬರಿ ಯುದ್ಧದ ಭೀಕರತೆ, ಭೀಕರತೆಯಿಂದ ಸಾಮಾನ್ಯರು ಎದುರಿಸುವಂತಹ ಸನ್ನಿವೇಶಗಳನ್ನು ತಿಳಿಸುತ್ತದೆ. ಮಹಾಭಾರತದ ಯುದ್ಧಕ್ಕೆ ದ್ರೌಪದಿ ಕಾರಣಳೆಂದು ದೂಷಿಸುವರಲ್ಲಿ ದ್ರೌಪದಿ ನಿಜವಾಗಿಯೂ ಕಾರಣಕರ್ತೆಯಲ್ಲ ಎಂಬ ಭಾವವನ್ನು, ಕಾರಣಳಾದರೂ, ಅವಳು ಬಯಸಿದ್ದು ರಕ್ತಪಾತದ ಯುದ್ಧವಲ್ಲ ಎಂಬ ಅಭಿಪ್ರಾಯವನ್ನು ಈ ಕಾದಂಬರಿ ತಿಳಿಸುತ್ತದೆ.

ಮೇಲಿನ ರಾಮಾಯಣ, ಮಹಾಭಾರತ ಕಾದಂಬರಿಗಳಲ್ಲಿ ಕಥೆಯ ವಿವರಣೆಗೆ ಹೆಚ್ಚು ಆಸ್ಪದ ನೀಡದೆ ಕೇಂದ್ರ ವಸ್ತುವನ್ನು ಕುರಿತು ಸ್ತ್ರೀವಾದಿ ದೃಷ್ಟಿಕೋನದಿಂದ ಹೇಳಲಾಗಿದೆ.

## ಕೊನೆಟಿಪ್ಪಣಿಗಳು

೧. ಗಿರಡ್ಡಿ ಗೋವಿಂದರಾಜು, ಸಮಗ್ರ ವಿಮರ್ಶೆ, ಪು. ೧೬೦
೨. ಎಂ.ಕೆ ಇಂದಿರಾ, ಫಣಿಯಮ್ಮ, ಪು. ೦೩
೩. ಅದೇ ಪು. ೮
೪. ಅದೇ ಪು. ೬
೫. ಅದೇ ಪು. ೧೫
೬. ಅದೇ ಪು. ೬೭
೭. ಅದೇ ಪು. ೭೪
೮. ಅದೇ ಪು. ೮೩
೯. ಅದೇ ಪು. ೯೯
೧೦. ತ್ರಿವೇಣಿ, ಹಣ್ಣೆಲೆ ಚಿಗುರಿದಾಗ, ಪು. ೧೦೫
೧೧. ಅದೇ ಪು. ೧೦೭
೧೨. ಅದೇ ಪು. ೧೫೬
೧೩. ಅದೇ ಪು. ೧೮೧
೧೪. ಅದೇ ಪು. ೧೯೦
೧೫. ಸ. ಉಷಾ, ಕಸೂತಿ, ಸೂಜಿಯ ಅರಿಕೆ
೧೬. ಅದೇ ಪು. ಮುನ್ನುಡಿ
೧೭. ಅದೇ ಪು. ೪೩
೧೮. ಅದೇ ಪು. ೭೮
೧೯. ಅದೇ ಪು. ೯೪
೨೦. ಅದೇ ಪು. ೧೪೦
೨೧. ವೈದೇಹಿ, ಅಸ್ಪೃಶ್ಯರು, ಪು. ೨೭
೨೨. ಅದೇ ಪು. ೩೬
೨೩. ಎಂ.ಎಸ್. ವೇದಾ. ಆರ್ದ್ರಗರ್ವದ ಹುಡುಗಿ, ಪು. ೯೯
೨೪. ವೈದೇಹಿ, ಅಸ್ಪೃಶ್ಯರು, ಪು. ೬೯
೨೫. ಎಚ್.ಎಸ್. ಪಾರ್ವತಿ, ಜಬಾಲಾ, ಪು. ೫೨

೨೬. ಅದೇ ಪು. ೭೪

೨೭. ಅದೇ ಪು. ೯೪

೨೮. ಅದೇ ಪು. ೧೨೧

೨೯. ಅದೇ ಪು. ೧೪೩-೧೪೪

೩೦. ಬಿ.ಟಿ. ಲಲಿತಾ ನಾಯಕ್, ನೆಲೆ-ಬೆಲೆ, ಮುನ್ನುಡಿ

೩೧. ಡಾ. ಎಂ. ರವಿನಾಯ್ಕ, ಡಾ ಬಿ.ಟಿ ಲಲಿತಾ ನಾಯಕ್, ಪು. ೨೬

೩೨. ಬಿ.ಟಿ. ಲಲಿತಾ ನಾಯಕ್, ನೆಲೆ-ಬೆಲೆ, ಪು. ೩೬

೩೩. ಅದೇ ಪು. ೨೨

೩೪. ಅದೇ ಪು. ೬೭

೩೫. ಡಾ. ಗೀತಾಕೃಷ್ಣಮೂರ್ತಿ, ಮಹಿಳೆ ಸಮಾಜ ಕಾನೂನು, ಪು. ೩೦

೩೬. ಬಿ.ಟಿ. ಲಲಿತಾ ನಾಯಕ್, ನೆಲೆ-ಬೆಲೆ, ಪು. ೬೫

೩೭. ಅದೇ ಪು. ೮೦

೩೮. ಅದೇ ಪು. ೮೧

೩೯. ಆರ್. ಇಂದಿರಾ. ಮಹಿಳೆ ಶೋಷಣೆ ಸವಾಲುಗಳು, ಪು. ೦೭

೪೦. ವೀಣಾ ಶಾಂತೇಶ್ವರ, ನಡೆದದ್ದೇದಾರಿ, ಪು. ೩೩೫

೪೧. ಅದೇ ಪು. ೩೪೭

೪೨. ಅದೇ ಪು. ೩೬೫

೪೩. ಅದೇ ಪು. ೩೬೯

೪೪. ಎಲ್.ವಿ. ಶಾಂತಕುಮಾರಿ, ಅನನ್ಯ ಮಹಿಳಾ ಚೇತನ ಮಾಲಿಕೆ ಗೀತಾ ನಾಗಭೂಷಣ, ಪು. ೨೪-೨೫

೪೫. ಗೀತಾ ನಾಗಭೂಷಣ, ಬದುಕು, ಪು. ೯೪

೪೬. ಅದೇ ಪು. ೯೪

೪೭. ಅದೇ ಪು. ೩೧೫

೪೮. ಅದೇ ಪು. ೪೭೦

೪೯. ಅದೇ ಪು. ಮುನ್ನುಡಿ

೫೦. ಅದೇ ಪು. ೦೧

೫೧. ಅದೇ ಪು. ೨೮೫

೫೨. ಸಾರಾ ಅಬೂಬಕ್ಕರ್, ಚಂದ್ರಗಿರಿಯ ತೀರದಲ್ಲಿ, ಪು. ೩೯

೫೩. ಅದೇ ಪು. ೩೯

೫೪. ಅದೇ ಪು. ೭೭-೭೮

೫೫. ಅದೇ ಪು. ೭೮

೫೬. ಎಚ್.ವಿ. ಸಾವಿತ್ರಮ್ಮ, ಸೀತೆ-ರಾಮ-ರಾವಣ, ಪು. ೧೦

೫೭. ಅದೇ ಪು. ೩೬

೫೮. ಅದೇ ಪು. ೫೪

೫೯. ಅದೇ ಪು. ೧೯೨

೬೦. ಅದೇ ಪು. ೨೫೭

೬೧. ಅದೇ ಪು. ೩೨೨

೬೨. ಎಚ್.ವಿ. ಸಾವಿತ್ರಮ್ಮ, ವಿಮುಕ್ತಿ, ಮುನ್ನುಡಿ

೬೩. ಅದೇ ಪು. ೩೨

೬೪. ಅದೇ ಪು. ೩೩-೩೪

೬೫. ಅದೇ ಪು. ೪೦

೬೬. ಅದೇ ಪು. ೪೬-೪೭

೬೭. ಅದೇ ಪು. ೫೪

೬೮. ಅದೇ ಪು. ೧೧೮

೬೯. ಅದೇ ಪು. ೫೧

೭೦. ಅದೇ ಪು. ೬೬

೭೧. ಅನುಪಮಾ ನಿರಂಜನ, ಮಾಧವಿ, ಪು. ೦೬

೭೨. ಬೋಳಂತಕೋಡಿ ಈಶ್ವರಭಟ್ಟ (ಪ್ರ ಸಂ.), ವಿ.ಬಿ. ಮೊಳೆಯಾರ, ವಿ.ಬಿ. ಅರ್ತಿಕಜೆ (ಸ.ಸಂ) ಅನುಪಮಾ ಅಭಿನಂದನ, ಪು. ೧೯೫

೭೩. ಅದೇ ಪು. ೫೩

೭೪. ಅನುಪಮಾ ನಿರಂಜನ, ಮಾಧವಿ, ಪು. ೧೨೮-೧೨೯

೭೫. ಅದೇ ಪು. ೧೨೯

೭೬. ಅದೇ ಪು. ೧೫೬

೭೭. ಅದೇ ಪು. ೧೬೧

೭೮. ಅದೇ ಪು. ೧೫೧

೭೯. ಅದೇ ಪು. ೧೭೨

೮೦. ಬೋಳಂತಕೋಡಿ ಈಶ್ವರಭಟ್ಟ (ಪ್ರ ಸಂ.), ವಿ.ಬಿ. ಮೊಳೆಯಾರ, ವಿ.ಬಿ. ಅರ್ತಿಕಜೆ (ಸ.ಸಂ) ಅನುಪಮಾ ಅಭಿನಂದನ, ಪು. ೨೨೯

೮೧. ಎಸ್.ವಿ. ಪ್ರಭಾವತಿ, ಕುಂತಿ, ಪು. ೧೮

೮೨. ಅದೇ ಪು. ೧೧೭

೮೩. ಅದೇ ಪು. ೩೮–೩೯

೮೪. ಅದೇ ಪು. ೨೭

೮೫. ಅದೇ ಪು. ೯೦

೮೬. ಎಂ.ಎಸ್.ವೇದಾ, ಜಯ, ಪು. v

೮೭. ಅದೇ ಪು. ೬೭

೮೮. ಅದೇ ಪು. ೧೭

೮೯. ಅದೇ ಪು. ೧೮೭

೯೦. ಅದೇ ಪು. ೨೮೨

೯೧. ಅದೇ ಪು. ೨೮೩

೯೨. ಅದೇ ಪು. vi

೯೩. ಅದೇ ಪು. ೨೯೧